ವೈದ್ಯ ಬರಹಗಾರರ ಸಮಿತಿ ಸಾರಥ್ಯದಲ್ಲಿ

# ವೈದ್ಯ ಸಂಪದ

ಕನ್ನಡ ಬಳಸಿ ವೈದ್ಯ ಸಾಹಿತ್ಯ ಬೆಳೆಸಿ

ಸಂಪುಟ: ೫ ಸಂಚಿಕೆ: ೧ ದ್ವೈಮಾಸಿಕ ಜನವರಿ - ಫೆಬ್ರವರಿ ೨೦೨೬ ಪುಟಗಳು: ೭೨

ಭಾರತೀಯ ವೈದ್ಯಕೀಯ ಸಂಘ, ಕರ್ನಾಟಕ ಶಾಖೆಯ ಸದಸ್ಯರ ಆಂತರಿಕ ವಿತರಣೆಗಾಗಿ ಮಾತ್ರ



# ಸಂಪದದೊಳಗೆ...


**ಸಂಪಾದಕೀಯ...** ಡಾ. ಸುರೇಶ ಸಗರದ ೩

**ರಾಜ್ಯಾಧ್ಯಕ್ಷರ ನುಡಿ...** ಡಾ. ವೀರಭದ್ರಯ್ಯ ಟಿ. ಎ. ೪

**ಸಮಿತಿಯ ಅಧ್ಯಕ್ಷರ ನುಡಿ...** ಡಾ. ಇಂದಿರಾ ದೊಡ್ಡಬಳ್ಳಾಪುರ ೫

**ಮಧುಮೇಹ ಪಾದಗಾಯಗಳು** (ಕಾಯಿಲೆ ಮತ್ತು ಚಿಕಿತ್ಸೆ) ಡಾ. ಸಂಗೀತ ಕಾಲಭೈರವ್ ೬

**ಚಟಪಟ ಚಿನಕುರಳಿ – ಅಟೆನ್ಶನ್ ಡೆಫಿಸಿಟ್ ಹೈಪರ್ ಆ್ಯಕ್ಟಿವಿಟಿ ಡಿಸಾರ್ಡರ್** (ಕಾಯಿಲೆ ಮತ್ತು ಚಿಕಿತ್ಸೆ)
ಡಾ. ಶಿವಾನಂದ ಬಿ. ಹಿರೇಮಠ ೮

**ರಾಷ್ಟ್ರೀಯ ರಕ್ತ ದಾನ ಮಾಸಿಕ ಆಚರಣೆ ಅಂಗವಾಗಿ** (ಆರೋಗ್ಯ ದಿನಾಚರಣೆ) ಡಾ. ಕೆ. ಶಿವರಾಜ್ ಪಾಟೀಲ್ ೧೧

**ಅಪರೂಪದ, ಅಲಕ್ಷಿತ ಹಾಗೂ ಅನಾಥ ರೋಗಗಳ ಲೋಕ** (ವೈದ್ಯ ಲೋಕದ ವಿಸ್ಮಯಗಳು) ಡಾ. ನಾ. ಸೋಮೇಶ್ವರ ೧೪

**ಪ್ರಜ್ಞಾಪೂರ್ವಕ ಬದುಕು – ಜೀವನದ ಸಾರ್ಥಕತೆಗೆ ದಾರಿ** (ವೈದ್ಯೇತರ) ಡಾ. ಅಮೂಲ್ಯ ಫ. ಯರಗುಪ್ಪಿ ೨೧

**ವೈದ್ಯಕೀಯ ಮತ್ತು ಕಾನೂನು** (ಕಾನೂನು ಮತ್ತು ವೈದ್ಯಕೀಯ) ಡಾ. ಶಿವರಾಜ್ ಪಾಟೀಲ ೨೨

**ಶಬ್ದ ಗುಣ** (ಪದ ಸಂಪದ) ಡಾ. ಗೋವಿಂದ ಹೆಗಡೆ ೨೬

**ತೊತ್ತೊ–ಚಾನ್** (ಕೃತಿ ಪರಿಚಯ) ಡಾ. ಉಮಾ ಚಿಕ್ಕರಡ್ಡಿ ೨೮

**ಇತ್ತೀಚಿಗೆ ಬಿಡುಗಡೆಯಾದ ವೈದ್ಯರ ಕೃತಿಗಳು** (ಕೃತಿ ಪರಿಚಯ) ಡಾ. ಉಮಾ ಚಿಕ್ಕರೆಡ್ಡಿ ೩೧

**ಪಿತ್ತಕೋಶದ ಕಲ್ಲುಗಳು** (ಕಥೆ) ಡಾ. ಶಿಶಿರ ಎಸ್. ರಾನಡೆ ೩೩

**ಕಣ್ಣು ಮತ್ತು ಜೀವನ ಶೈಲಿ** (ಜೀವನ ಶೈಲಿ ಮತ್ತು ಆರೋಗ್ಯ) ಡಾ. ರವೀಂದ್ರನಾಥ ಹೆಚ್. ಎಮ್. ೩೭

**ಕಿನ್ಸುಗಿ** – ಡಾ. ಕೇಶವ ಕುಲಕರ್ಣಿ, **ಬದಲಾವಣೆ** – ಡಾ. ಜಿ. ಎಸ್. ಶಿವಪ್ರಸಾದ್ (ಅನಿವಾಸಿ ಲೋಕ) ೩೯

**ಎಲ್ಲ ಇದ್ದು ಇಲ್ಲದಂತೆ** ಡಾ. ನಿತ್ಯಾನಂದ ಸುಂಡವಾಳು **ಉಳಿದು ಹೋದ ಪ್ರಶ್ನೆ** ಡಾ. ಉಮಾ ಚಿಕ್ಕರಡ್ಡಿ (ಕಾವ್ಯ ಸಂಪದ) ೪೧

**ವೈದ್ಯ ಕಲಿಕೆಯ ಅನುಭವ** ವಿಶ್ವಾಸ್ ವಿ ಕೆ, **ನೀಲಿ ಪರ್ವತದ ನೆನಪು!** ಮಧುಮಿತಾ ಸಿದ್ದೇಶ್ವರ,
**ಕಳೆದು ಹೋದ ಪ್ರೀತಿ** ಶ್ರೇಯಸ್ ಎನ್. **ಪುಸ್ತಕಗಳ ಜಗತ್ತಿನಿಂದ ರೋಗಿಗಳ ಬದುಕಿಗೆ** ಭೂಮಿ ಕಲ್ಮನೆ ಆಡಿದಂ
(ವಿದ್ಯಾರ್ಥಿ ಲೋಕ) ೪೩

**ಪದಬಂಧ – ೨೨** (ಪದಬಂಧ) ಡಾ. ರಮೇಶ್ ಬಾಬು ೪೮

**ಕನ್ನಡ ಚಟುವಟಿಕೆಗಳ ವರದಿ** (ವರದಿ) ಡಾ. ಉಷಾ ಎಂ. ಜಿ. ೫೦

**ಅರಣ್ಯದ ಮಡಿಲಲ್ಲಿ ಅಕ್ಷರ ಜಾತ್ರೆ: 'ಸುಮನ ಸಂಗಮ'ದ ಸಮ್ಮೋಹನ** ಡಾ. ರಾಜೇಂದ್ರ ಸಲಗರೆ, ಚಿಕ್ಕೋಡಿ ೫೭

**ಡಾ. ರವಿರಾಜೇಶ್ವರ** (ಸಂದರ್ಶನ) ಡಾ. ಪ್ರಿಯಾ ಭಾಲ್ಕಿ ೬೦

**ಚಿಣ್ಣರ ಲೋಕ** ಸಾನ್ವಿ, ರಾಯಚೂರು । ರಾಜವೀರ ಚಿನಿವಾಲರ, ಗಂಗಾವತಿ । ಅದ್ವೈತ್, ರಾಯಚೂರು,
ಅಗಸ್ತ್ಯ ರಾಯಚೂರು । ಮಾ। ಶ್ಲೋಕ್ ಪಟೇಲ್ । ಮಾ। ಅಗಸ್ತ್ಯ, ರಾಯಚೂರು ೬೮

**ಚಿತ್ರ ಸಂಪದ** ಡಾ. ನಾಗರಾಜ, ಡಾ. ಸುನಂದಾ ಕುಲಕರ್ಣಿ ೭೦


## ಲೇಖಕರಿಗೆ ಮಾಹಿತಿ:

- ಲೇಖನಗಳನ್ನು ವಿಭಾಗೀಯ ಸಂಪಾದಕರಿಗೆ ಮೇಲ್ ಮೂಲಕ ಕಳುಹಿಸಬೇಕು
- ಲೇಖನಗಳನ್ನು ವರ್ಡ್ ಫೈಲ್‌ನಲ್ಲಿ ನುಡಿ ಫಾಂಟ್‌ಗಳನ್ನು ಬಳಸಿ ಬರೆಯಬೇಕು
- ಲೇಖನ ಕಳುಹಿಸಿದ ನಂತರ ವಿಭಾಗೀಯ ಸಂಪಾದಕರಿಗೆ ಸಂದೇಶ ಅಥವಾ ವಾಟ್ಸಾಪ್ ಮೂಲಕ ತಿಳಿಸಿ
- ಪ್ರಕಟಿಸಿದ ಲೇಖನಗಳಿಗೆ ಲೇಖಕರೇ ಹೊಣೆ

ವೈದ್ಯ ಸಂಪದ ಸಂಪಾದಕ ಮಂಡಳಿ ೨೦೨೬
ಡಾ. ವೀರಭದ್ರಯ್ಯ ಟಿ ಎ ರಾಜ್ಯಾಧ್ಯಕ್ಷರು
ಡಾ. ಸೂರಿರಾಜು ವಿ ಕಾರ್ಯದರ್ಶಿ, ರಾಜ್ಯ ಶಾಖೆ
ಡಾ. ಹರೀಶ್ ದೇಲಂತಬೆಟ್ಟು ಚುನಾಯಿತ ರಾಜ್ಯಾಧ್ಯಕ್ಷರು

ಪ್ರಧಾನ ಸಂಪಾದಕರು
ಡಾ. ಸುರೇಶ ಸಗರದ
9448139339 | drssagarad@hotmail.com

ಉಪ ಸಂಪಾದಕರು
ಡಾ. ವೀಣಾ ಎನ್ ಸುಳ್ಯ
9448215940 | drnveena@gmail.com

ವಿಭಾಗೀಯ ಸಂಪಾದಕರು
ಪ್ರಚಲಿತ – ಡಾ. ಶ್ರೀನಿವಾಸ ಹರಪನಹಳ್ಳಿ
9886236300 | h_shrinivas@hotmail.com

ವೈದ್ಯೇತರ – ಡಾ. ಕಿರಣ್ ಪೇಟಕರ್
8769183863 | drkiranpetkar2009@gmail.com

ಕಾಯಿಲೆ ಮತ್ತು ಚಿಕಿತ್ಸೆ – ಡಾ. ಅಶ್ವಿನಿ ಎಚ್. ಆರ್
94805 53670 | ashvenki.hubli@gmail.com

ಚಿಣ್ಣರ ಲೋಕ – ಡಾ. ಪ್ರಿಯಾ ಭಾಲ್ಕಿ
99808 88922 | drpriyabhalki@gmail.com

ವಿದ್ಯಾರ್ಥಿ ಲೋಕ – ಡಾ. ವಿನಯಾ ಶ್ರೀನಿವಾಸ್
98440 83284 | vinaya_s@rocketmail.com

ಚಿತ್ರ ಸಂಪದ – ಡಾ. ಅರವಿಂದ ಪಟೇಲ್
+91 94489 18764 | draravindpatel@gmail.com

ವರದಿ – ಡಾ. ಉಷಾ ಎಂ ಜಿ
94486 67233 | ushaumeshdvg@rediffmail.com

ಸಂದರ್ಶನ / ವ್ಯಕ್ತಿ ವಿಷಯ – ಡಾ. ಸತ್ಯವತಿ
98862 05341 | sathyanag13@gmail.com

ಕಾವ್ಯ ಸಂಪದ – ಡಾ. ಮೃದುಲಾ
98446 75254 | mridu_doc@yahoo.com

ಕಥೆ – ಡಾ. ದಿವ್ಯಾ ಕೆ ಎನ್
+91 98861 57094 | divyaural@yahoo.co.in

ಪದಬಂಧ – ಡಾ. ಸುಮಾ ಗುಡಿ
98806 16349 | gudi.suma@gmail.com

ಪದ ಸಂಪದ ಮತ್ತು ಇತರೆ – ಡಾ. ಗೋವಿಂದ ಹೆಗಡೆ
93531 18024 | hegadegs@gmail.com

ಕೃತಿ ಪರಿಚಯ – ಡಾ. ಉಮಾ ಚಿಕ್ಕರೆಡ್ಡಿ
98446 80035 | dr.umakannada@gmail.com

ಆರೋಗ್ಯ ದಿನಾಚರಣೆ – ಡಾ. ದಿನೇಶ್ ಗುಡಿ
98456 22551 | dineshgudi1805@gmail.com

ಜೀವನಶೈಲಿ ಮತ್ತು ಆರೋಗ್ಯ – ಡಾ. ವೀಣಾ ಎಸ್. ಭಟ್
94803 53878 | veenaseetharambhat@gmail.com

ವೈದ್ಯ ಲೋಕದ ವಿಸ್ಮಯಗಳು – ಡಾ. ನಾ. ಸೋಮೇಶ್ವರ
98804 65661 | naasomeswara@gmail.com

ಅನಿವಾಸಿ ಲೋಕ – ಡಾ. ಮುರಳಿ ಹತ್ವಾರ್
+447944068563 | muralihathwar@icloud.com

ಕಾನೂನು ಮತ್ತು ವೈದ್ಯಕೀಯ – ಡಾ. ಶಿವರಾಜ್ ಪಾಟೀಲ್
95358 30729 | shivraj.doctor@rediffmail.com

ಸಂಘಟನೆ – ಡಾ. ಮಧುಸೂದನ ಕಾರಿಗನೂರು
94482 37145 | madhusudhanva@gmail.com

ವಿಳಾಸ:
**ವೈದ್ಯ ಸಂಪದ**
**ಐ ಎಮ್ ಎ ಹೌಸ್, ಐ ಎಮ್ ಎ ವೃತ್ತ,**
**ಆಲೂರು ವೆಂಕಟರಾವ್ ರಸ್ತೆ,**
**ಬೆಂಗಳೂರು** 560018,
**ದೂರವಾಣಿ:** 080 26703255,
**ಮಿಂಚಂಚೆ:** vaidyasampadaeditor@gmail. com

## ಸಂಪಾದಕೀಯ...



**ಡಾ. ಸುರೇಶ ಸಗರದ**
ಪ್ರಧಾನ ಸಂಪಾದಕರು

**ಆತ್ಮೀಯ ಓದುಗರೇ,**

ಹೊಸ ವರ್ಷದ ಹಾರ್ದಿಕ ಶುಭಾಶಯಗಳು. ಹೊಸ ವರ್ಷದ ಆರಂಭದಲ್ಲಿ ಹೊಸ ಸಂಕಲ್ಪವನ್ನು ಮಾಡುವುದು ಸಹಜ. ಓಡಾಟದ ಬದುಕಿನಿಂದ ಸಹಜತೆಯತ್ತ ಸಾಗುವ ಸಂಕಲ್ಪವನ್ನು ಬಳಗದ ಅನೇಕರು ಗುಂಪಿನಲ್ಲಿ ಹಂಚಿಕೊಂಡಿರುವುದು ಸಂತಸದ ಸಂಗತಿ. ಪ್ರಕೃತಿಯೊಂದಿಗೆ ಹೋರಾಡದೆ ಪ್ರಕೃತಿಯೊಂದಿಗೆ ಸಹಬಾಳ್ವೆಯ ಸಮನ್ವಯದ ಸಂಕಲ್ಪದ ಅವಶ್ಯಕತೆ ಎಲ್ಲರಿಗೂ ಇದೆ. ಅದು ಸರಳತೆಯೊಂದಿಗೆ ಆರೋಗ್ಯವರ್ಧಕವೂ ಹೌದು. ನಿಮ್ಮೆಲ್ಲಾ ಓದುಗರಿಗೆ ಕನ್ನಡದಲ್ಲಿ ರಸದೌತಣವನ್ನು ನೀಡುವುದು ಸಂಪಾದಕ ಮಂಡಳಿಯ ಸಂಕಲ್ಪ! ನೂತನ ಸಂಪಾದಕ ಮಂಡಳಿಯ ವಿಭಾಗೀಯ ಸಂಪಾದಕರು ಉತ್ಸುಕರಾಗಿದ್ದಾರೆ. ನಿಮ್ಮೆಲ್ಲರ ಸಹಕಾರದಿಂದ ಇದು ಸಾಧ್ಯ. ಇತ್ತೀಚೆಗೆ ಅಹಮದಾಬಾದ್‌ನಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಶಸ್ತಿ ಸ್ವೀಕರಿಸಿದ ಎಲ್ಲಾ ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ರಾಜ್ಯ ಶಾಖೆಯ ಸದಸ್ಯರಿಗೆ ಹಾರ್ದಿಕ ಅಭಿನಂದನೆಗಳು. ಡಾ. ಅನಿಲ್ ಕುಮಾರ್ ಜೆ. ನಾಯಕ್ ಅವರು ರಾಷ್ಟ್ರೀಯ ಅಧ್ಯಕ್ಷರಾಗಿ ಮತ್ತು ಡಾ. ಸರ್ಭಾರಿ ದತ್ತಾ ಅವರು ಗೌರವ ಕಾರ್ಯದರ್ಶಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಅವರಿಗೆ ಹಾರ್ದಿಕ ಅಭಿನಂದನೆಗಳು. ಅವರ ನೇತೃತ್ವದಲ್ಲಿ ಭಾರತೀಯ ವೈದ್ಯಕೀಯ ಸಂಘ ಮುನ್ನಡೆಯಲಿ ಎಂದು ಹಾರೈಸಿ ಸಹಕಾರ ನೀಡೋಣ. ಯಶಸ್ವಿಯಾಗಿ ತಮ್ಮ ಅವಧಿಯನ್ನು ಮುಗಿಸಿದ ನಿಕಟಪೂರ್ವ ಅಧ್ಯಕ್ಷರಾದ ಡಾ. ದಿಲೀಪ್ ಭಾನುಶಾಲಿ ಅವರಿಗೆ ಹಾರ್ದಿಕ ಅಭಿನಂದನೆಗಳು.

೬೬ನೇ ಪುಟಕ್ಕೆ...

## ರಾಜ್ಯಾಧ್ಯಕ್ಷರ ನುಡಿ...



**ಡಾ. ವೀರಭದ್ರಯ್ಯ ಟಿ. ಎ.**
ರಾಜ್ಯಾಧ್ಯಕ್ಷರು ೨೦೨೫-೨೬
ಭಾರತೀಯ ವೈದ್ಯಕೀಯ ಸಂಘ, ಕರ್ನಾಟಕ ರಾಜ್ಯ ಶಾಖೆ

ಎಲ್ಲರಿಗೂ ಹೊಸ ವರ್ಷ ೨೦೨೬ರ ಶುಭಾಶಯಗಳು.

ವೈದ್ಯ ಸಂಪದದ ಓದುಗರಿಗೆ ವಿಶೇಷ ನಮನಗಳು.

ಇತ್ತೀಚೆಗೆ ಹೃದಯ ಸಂಬಂಧಿ ಕಾಯಿಲೆಗಳಿಂದ ಯುವಕರು ಸಾವನ್ನಪ್ಪುತ್ತಿರುವುದು ಸಹಜವಾಗಿದ್ದು, ಇದರ ಬಗ್ಗೆ ಸಂಶೋಧನೆ ಆಧಾರಿತ ಹೆಚ್ಚಿನ ಲೇಖನಗಳು ಹೊರಬರಲಿ ಎಂದು ಆಶಿಸುತ್ತೇನೆ. ಹೃದಯಾಘಾತ ತಡೆಯುವ ಕ್ರಮಗಳ ಕುರಿತು ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಕೆಲಸ ಆಗಬೇಕಾಗಿದೆ. ಆಹಾರ ಮತ್ತು ಜೀವನಶೈಲಿಯ ಬಗ್ಗೆ ಯುವಕರಲ್ಲಿ ಅರಿವು ಮೂಡಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಭಾವಿಸುತ್ತೇನೆ. ಈ ಕುರಿತು ಹೃದಯರೋಗ ತಜ್ಞರು ಮತ್ತು ಚಿಕಿತ್ಸಕ ವೈದ್ಯಕೀಯ ತಜ್ಞರು ಕಾರ್ಯಕ್ರಮ ಆಯೋಜಿಸಲಿ. ಭಾರತೀಯ ವೈದ್ಯಕೀಯ ಸಂಘ ಇದರ ನೇತೃತ್ವವನ್ನು ವಹಿಸಲು ಸಿದ್ಧವಿದೆ.

ಡ್ರಗ್ಸ್ ಹಾವಳಿಯು ಸಹಾ ಹೆಚ್ಚಾಗಿರುವುದು ಆತಂಕಕಾರಿ ವಿಚಾರ, ಇದರ ಬಗ್ಗೆಯೂ ಹೆಚ್ಚಿನ ಅರಿವು ಮೂಡಿಸುವ ಲೇಖನಗಳು ಹೆಚ್ಚು ಹೆಚ್ಚಾಗಿ ಮೂಡಿ ಬರಲಿ. ಭಾರತೀಯ ವೈದ್ಯಕೀಯ ಸಂಘದ ಸಾರ್ವಜನಿಕ ಆರೋಗ್ಯ ವಿಭಾಗದ ನೇತೃತ್ವದಲ್ಲಿ ಮಾನಸಿಕ ಶಾಸ್ತ್ರಜ್ಞರು ಕೈಜೋಡಿಸಿ ಜಾಗೃತಿ ಮೂಡಿಸಲಿ.

ಸರ್ಕಾರದಿಂದ ನಮ್ಮ ವೈದ್ಯರ ಮೇಲೆ ನಡೆಯುತ್ತಿರುವ ನಕಾರಾತ್ಮಕ ಧೋರಣೆಗಳನ್ನು ವಿರೋಧಿಸಬೇಕಾದ ಕಾಲ ಸನಿಹಿತವಾಗುತ್ತಿದೆ ಎನಿಸುತ್ತದೆ. ಹಲವಾರು ಪ್ರಸ್ತಾವನೆಗಳನ್ನು ಭಾರತೀಯ ವೈದ್ಯಕೀಯ ಸಂಘ ಸರ್ಕಾರದ ಮುಂದೆ ಪ್ರಸ್ತಾಪಿಸಿದೆ. ಸರ್ಕಾರ ವಿಳಂಬ ಧೋರಣೆ ಅನುಸರಿಸದೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸುತ್ತೇವೆ

ವೈದ್ಯರ ಮೇಲೆ ಹಲ್ಲೆಗಳು ಹೆಚ್ಚಾಗುತ್ತಿವೆ, ಇದರ ವಿರುದ್ದವು ಹೋರಾಡಬೇಕಾದ ಅವಶ್ಯಕತೆ ಹೆಚ್ಚಿದೆ. ನವ ವೈದ್ಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯ ವೈದ್ಯಕೀಯ ಸಂಘದ ತೆಕ್ಕೆಗೆ ಆಕರ್ಷಿಸುವಂತ ಲೇಖನಗಳು ಮೂಡಿಬರಲಿ. ಸಂಘಟನೆಯನ್ನು ಬಲಪಡಿಸಲು ಅವಶ್ಯ ಇರುವ ಕ್ರಮ ಕೈಗೊಳ್ಳೋಣ.

ಕನ್ನಡ ವೈದ್ಯ ಬರಹಗಾರರ ಸಮಿತಿಗೆ ಸಂಪೂರ್ಣ ಸಹಕಾರ ನೀಡುವ ನಿರ್ಧಾರಕ್ಕೆ ರಾಜ್ಯ ಕಾರ್ಯಕಾರಿಣಿ ಸಮಿತಿಯು ಬದ್ಧವಾಗಿದೆ. ನೂತನ ಸಂಪಾದಕ ಮಂಡಳಿಗೆ ಶುಭ ಕೋರುತ್ತಾ ವೈದ್ಯ ಸಂಪದದಲ್ಲಿ ಉತ್ತಮ ಲೇಖನಗಳು ಮೂಡಿಬರಲಿ ಎಂದು ಹಾರೈಸುತ್ತೇನೆ.

ಜೈ ಭಾವೈಸಂ...

ಭಾವೈಸಂ ಚಿರಾಯುವಾಗಲಿ...

**ಡಾ ವೀರಭದ್ರಯ್ಯ ಟಿ ಎ**
ರಾಜ್ಯಾಧ್ಯಕ್ಷರು,
ಭಾರತೀಯ ವೈದ್ಯಕೀಯ ಸಂಘ,
ಕರ್ನಾಟಕ ರಾಜ್ಯ ಶಾಖೆ

## ಸಮಿತಿಯ ಅಧ್ಯಕ್ಷರ ನುಡಿ

# ಹೊಸವರ್ಷ



**ಡಾ. ಇಂದಿರಾ ದೊಡ್ಡಬಳ್ಳಾಪುರ**
ಅಧ್ಯಕ್ಷರು,
ಕನ್ನಡ ವೈದ್ಯ ಬರಹಗಾರರ ಸಮಿತಿ (೨೦೨೫-೨೦೨೬)

ಹೊಸವರ್ಷ ಬರುತಿದೆ. ಪ್ರಕೃತಿಯೆಲ್ಲ ಹಿಮಮಯವಾಗಿದೆ. ಚಳಿಯೇ ಹೆಪ್ಪುಕಟ್ಟುವಂತೆ ಕಟಕಟಿಸುವ ಕಾಲದಲ್ಲಿ ರವಿಯ ಒಂದು ಕಿರಣ ತರುವ ಉಲ್ಲಾಸದಂತೆ ಕನ್ನಡ ವೈದ್ಯಬರಹಗಾರರ ಅಸ್ಥೆಯ ಕೂಸಾದ ವೈದ್ಯಸಂಪದ ನಿಮ್ಮ ಕೈಯಲ್ಲಿದೆ. ೨೦೨೫-೨೬ರ ಸಾಲಿಗೆ ಮೂರುವರ್ಷದ ಹೊಸ್ತಿಲಲ್ಲಿರುವ ಮುದ್ರಿತ ಸಂಪದಕ್ಕೆ ಇನ್ನೂ ಹೆಚ್ಚಿನ ಬಲ ಬರಲಿ. ಮುಖ್ಯವಾಗಿ ವೈದ್ಯಕೀಯ ರಂಗದ ಆಗುಹೋಗುಗಳನ್ನು ಸರಳ ಭಾಷೆಯಲ್ಲಿ ತಿಳಿಹೇಳುವ ಪ್ರಮಾಣೀಕೃತ ಲೇಖನಗಳು ಇದರ ಹೆಮ್ಮೆ. ಇಲ್ಲಿ ಸಕ್ರಿಯರಾಗಿರುವ ಎಲ್ಲ ವೈದ್ಯ ಮಿತ್ರರಲ್ಲಿ ನನ್ನ ಪ್ರೀತಿಯ ಆಗ್ರಹವೆಂದರೆ ನಿಮ್ಮ ವೈದ್ಯ ಗೆಳೆಯರಿಗೆ ಸಂಪದ-ಕನ್ನಡ-ಸಾಂಘಿಕ ಕಾರ್ಯಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳಲು ಪ್ರೇರೇಪಿಸಿ. ಬಳಗ ಇನ್ನೂ ದೊಡ್ಡ ಸಂಖ್ಯೆಯ ವೈದ್ಯರನ್ನು ಒಳಗೊಂಡು ಸಶಕ್ತವಾಗಲಿ. ವೈದ್ಯರೆಲ್ಲರ ಸಾಮಾಜಿಕ ಬದ್ಧತೆಯಲ್ಲಿ ಆರೋಗ್ಯದ ಅರಿವನ್ನು ಜನಸಾಮಾನ್ಯರಿಗೆ ಸರಿಯಾಗಿ ತಿಳಿಹೇಳುವುದೂ ಒಂದು ಮುಖ್ಯಭಾಗ. ಸಂಪದದ ಲೇಖನಗಳು ಈ ಉದ್ದೇಶವನ್ನು ಸೂಕ್ತವಾಗಿ ನಿರ್ವಹಿಸುತ್ತಿದೆ.

ಎಲ್ಲ ವೈದ್ಯರೂ ಐಎಂಎ ಚಟುವಟಿಕೆಗಳಲ್ಲಿ ಸಕ್ರಿಯರಾಗಿ ತೊಡಗಿಕೊಳ್ಳಲು ಪ್ರೀತಿಯಿಂದಲೇ ಆಗ್ರಹಿಸುತ್ತಿರುವೆ. ಬಳಗದ, ಐಎಂಎಯ ಸಾಕಷ್ಟು ಕಾರ್ಯಕ್ರಮಗಳು ಝೂಮ್ ಮೂಲಕವೇ ನಡೆದರೂ ಕೆಲವೇ ಮಂದಿ ಭಾಗವಹಿಸುವುದು ಬದಲಾಗಬೇಕಿದೆ. ಒಗ್ಗಟ್ಟಿನಲ್ಲಿ ಬಲವಿದೆ. ಯಾವುದೇ ಕಾರ್ಯದ ಯಶಸ್ಸು ಎಲ್ಲರ ಒಳಗೊಳ್ಳುವಿಕೆಯಲ್ಲಿದೆ.

ಕರ್ನಾಟಕ ಲೇಖಕಿಯರ ಸಂಘದ ಉಪಾಧ್ಯಕ್ಷರಾಗಿ ಆಯ್ಕೆಯಾದ ಹಿರಿಯ ಲೇಖಕಿ, ಸದಾ ಚಟುವಟಿಕೆಯ ಬುಗ್ಗೆ, ಡಾ. ಆರ್. ಕೆ. ಸರೋಜಾ ಅವರಿಗೆ ಅಭಿನಂದನೆಗಳು. ಅಕಾಡೆಮಿ ಪ್ರಶಸ್ತಿ ಭಾಜನರಾದ ಡಾ. ಪವಿತ್ರಾ, ಪಿ. ಎಸ್. ಶಂಕರ್ ಪ್ರತಿಷ್ಠಾನದ ಶ್ರೇಷ್ಠ ವೈದ್ಯಸಾಹಿತಿ ಪ್ರಶಸ್ತಿ ಪಡೆದ ಡಾ. ಅಣ್ಣಪ್ಪ ಪಾಂಗಿ, ಮಕ್ಕಳ ಚಂದಿರ ಪ್ರಶಸ್ತಿ ಪಡೆದ ಡಾ. ಕರವೀರಪ್ರಭು ಕ್ಯಾಲಕೊಂಡ, ಜೀವಮಾನ ಸಾಧನೆಗೆ ಪಿ. ಕೆ. ಬಾಗಲೂರು ದತ್ತಿನಿಧಿ ಪ್ರಶಸ್ತಿ ಪಡೆದ ಡಾ. ದಯಾನಂದನೂಲಿ, ಲೇಖಿಕಾ ಸಾಹಿತ್ಯ ಬಳಗದ ಅತ್ಯುತ್ತಮ ಸಾಧಕಿ ಪ್ರಶಸ್ತಿ ಪಡೆದ ಡಾ. ವೀಣಾ ಎನ್. ಸುಳ್ಯ ಪ್ರಶಂಸಾರ್ಹರು. ಎಲ್ಲರಿಗೆ ಅಭಿನಂದನೆಗಳನ್ನು ತಿಳಿಸುತ್ತಾ ಹೊಸ ವರ್ಷದ ಆಗಮನ ಎಲ್ಲರಲ್ಲೂ ಹೊಸ ಚೈತನ್ಯ ತುಂಬಲಿ ಎಂದು ಆಶಿಸುತ್ತೇನೆ.

**ಡಾ. ಇಂದಿರಾ ದೊಡ್ಡಬಳ್ಳಾಪುರ**
ಅಧ್ಯಕ್ಷರು,
ಕನ್ನಡ ವೈದ್ಯ ಬರಹಗಾರರ ಸಮಿತಿ
(೨೦೨೫-೨೦೨೬)

ಕಾಯಿಲೆ ಮತ್ತು ಚಿಕಿತ್ಸೆ

# ಮಧುಮೇಹ ಪಾದಗಾಯಗಳು



**ಡಾ. ಸಂಗೀತ ಕಾಲಭೈರವ್**
ಶಸ್ತ್ರಚಿಕಿತ್ಸಾ ತಜ್ಞರು
ಹುಬ್ಬಳ್ಳಿ



ಡಾ. ಅಶ್ವಿನಿ ಹೆಚ್. ಆರ್.
ವಿಭಾಗೀಯ ಸಂಪಾದಕರು

**ಮಧುಮೇಹ ಪಾದಗಾಯಗಳು: ಭಯದಿಂದ ಹೊರಬಂದು, ವಿಜ್ಞಾನ ಕೊಡುವ ಹೊಸ ಆಶೆಯನ್ನು ಅರಿಯೋಣ**




ಮಧುಮೇಹ ಇಂದಿನ ಕಾಲದ ಒಂದು ಗಂಭೀರ ಆರೋಗ್ಯ ಸಮಸ್ಯೆ. ನಗರವಿರಲಿ ಹಳ್ಳಿ ಇರಲಿ, ಶ್ರೀಮಂತರಾಗಲಿ, ಸಾಮಾನ್ಯ ಜನರಾಗಲಿ ಈ ರೋಗ ಯಾರನ್ನೂ ಬಿಡುವುದಿಲ್ಲ. ಆದರೆ ಮಧುಮೇಹದಿಂದ ಉಂಟಾಗುವ ಅತಿದೊಡ್ಡ ತೊಂದರೆಗಳು ಅಷ್ಟಾಗಿ ಚರ್ಚೆಗೆ ಬರದೇ ಉಳಿಯುತ್ತಿವೆ. ಅವುಗಳಲ್ಲಿ ಒಂದು ಮುಖ್ಯವಾದ ಸಮಸ್ಯೆ ಎಂದರೆ ಮಧುಮೇಹ ಪಾದಗಾಯಗಳು (Diabetic Foot Wounds).

ಪಾದದ ಮೇಲೆ ಆಗುವ ಸಣ್ಣ ಗಾಯ ಅಥವಾ ಬಿರುಕು ಕೂಡ ಮಧುಮೇಹ ಇರುವವರಲ್ಲಿ ಗಂಭೀರ ಸಮಸ್ಯೆಯಾಗಿ ಬದಲಾಗುತ್ತದೆ. ನೋವಿನ ಅರಿವೇ ಇರದಿರುವ ಕಾರಣ ಗಾಯದ ತೀವ್ರತೆ ಅರ್ಥವಾಗದೆ, ಚಿಕಿತ್ಸೆ ವಿಳಂಬವಾಗುತ್ತದೆ. ಪರಿಣಾಮವಾಗಿ ಸೋಂಕು, ಗಾಯಗಳು, ಗ್ಯಾಂಗ್ರೀನ್ ಮತ್ತು ಕೆಲವೊಮ್ಮೆ ಪಾದ ಕತ್ತರಿಸುವ ಪರಿಸ್ಥಿತಿಯವರೆಗೂ ಹೋಗುವ ಸಂಭವ ಇದೆ. ಇಂತಹ ಘಟನೆಗಳು ಕೇವಲ ದೇಹದ ನೋವಲ್ಲ; ಅದು ಒಂದು ಕುಟುಂಬದ ಮನೋಬಲ, ಉದ್ಯೋಗ, ಮತ್ತು ಜೀವನದ ಗುಣಮಟ್ಟವನ್ನೇ ಕುಂಧಿಸುತ್ತದೆ. ಆದರೆ ಸಂತಸದ ವಿಷಯ ಎಂದರೆ, ಇಂದು ಮಧುಮೇಹ ಪಾದಗಾಯಗಳ ಕಥೆ ಸಂಪೂರ್ಣವಾಗಿ ಬದಲಾಗುತ್ತಿದೆ. ವೈದ್ಯಕೀಯ ವಿಜ್ಞಾನದಲ್ಲಿನ ನೂತನ ತಂತ್ರಜ್ಞಾನಗಳು ಈ ಹಿಂದೆ ಅಸಾಧ್ಯವೆನಿಸಿದ ಗಾಯಗಳನ್ನೂ ಸಹ ಗುಣಪಡಿಸಲು ನೆರವಾಗುತ್ತಿವೆ.

**ಮಧುಮೇಹ ಪಾದಗಾಯ ಏಕೆ ಸುಲಭವಾಗಿ ಗುಣವಾಗುವುದಿಲ್ಲ?**

ಮಧುಮೇಹ ಇರುವವರಲ್ಲಿ ಮುಖ್ಯವಾಗಿ ಮೂರು ಸಮಸ್ಯೆಗಳು ಕಾಣಿಸುತ್ತವೆ.

೧. ನರವ್ಯಾಧಿ ಅಂದರೆ ಪಾದಗಳಲ್ಲಿ ಸ್ಪರ್ಶ ಮತ್ತು ನೋವಿನ ಅರಿವು ಕಡಿಮೆಯಾಗುವುದು.
೨. ರಕ್ತಸಂಚಾರ ಕೊರತೆ, ಇದರಿಂದ ಗಾಯಕ್ಕೆ ಬೇಕಾದ ಪೋಷಕಾಂಶಗಳು ತಲುಪುವುದಿಲ್ಲ
೩. ಸೋಂಕಿನ ಅಪಾಯ, ಇದು ವೇಗವಾಗಿ ಹರಡುತ್ತದೆ.

ಈ ಮೂರು ಅಂಶಗಳು ಒಂದೇ ಸಮಯದಲ್ಲಿ ಇದ್ದಾಗ ಚಿಕಿತ್ಸೆ ಕಷ್ಟಕರವಾಗುತ್ತದೆ.

**ಸುಧಾರಿತ ಗಾಯ ಶುದ್ಧೀಕರಣ ವಿಧಾನಗಳು:**

ಇಂದಿನ ಚಿಕಿತ್ಸೆಯಲ್ಲಿ ಗಾಯವನ್ನು ಸರಿಯಾಗಿ ಶುದ್ಧೀಕರಿಸುವುದೇ ಮೊದಲ ಹೆಜ್ಜೆ. ಸತ್ತುಹೋದ,

ಸೋಂಕಿಗೆ ಒಳಗಾದ ಚರ್ಮವನ್ನು ತೆಗೆಯದೇ ಗಾಯ ಗುಣವಾಗುವುದಿಲ್ಲ. ಇಂದಿನ ದಿನಗಳಲ್ಲಿ ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆಯ ಜೊತೆಗೆ ಎನ್‌ಜೈಮ್ ಸಹಾಯಿತ ಗಾಯ ಶುದ್ಧೀಕರಣ, ಅಲ್ಟ್ರಾಸೌಂಡ್ ತಂತ್ರಜ್ಞಾನ, ಮತ್ತು ಕಡಿಮೆ ನೋವಿನ ಆಧುನಿಕ ವಿಧಾನಗಳನ್ನು ಬಳಸಲಾಗುತ್ತಿದೆ. ಇದರಿಂದ ಆರೋಗ್ಯಕರ ಚರ್ಮ ಉಳಿದುಕೊಂಡು, ಗುಣಮುಖ ಪ್ರಕ್ರಿಯೆ ವೇಗಗೊಳ್ಳುತ್ತದೆ.

**ವಾಕ್ಯೂಮ್ ಚಿಕಿತ್ಸೆ: ಗಾಯಕ್ಕೆ ಹೊಸ ಜೀವ**

ಮಧುಮೇಹ ಪಾದ ಗಾಯ ಚಿಕಿತ್ಸೆಯಲ್ಲಿ ಮಹತ್ವದ ಬದಲಾವಣೆ ತಂದಿರುವ ವಿಧಾನವೆಂದರೆ ನೆಗಟಿವ್ ಪ್ರೆಶರ್ ವೂಂಡ್ ಥೆರಪಿ, ಜನಪ್ರಿಯವಾಗಿ ವಾಕ್ಯೂಮ್ ಚಿಕಿತ್ಸೆ ಎಂದೇ ಪರಿಚಿತ. ಈ ವಿಧಾನದಲ್ಲಿ ಗಾಯದ ಮೇಲೆ ವಿಶೇಷ ಯಂತ್ರವನ್ನು ಅಳವಡಿಸಿ, ನಿಯಂತ್ರಿತ ಒತ್ತಡ ನೀಡಲಾಗುತ್ತದೆ. ಇದರಿಂದ ಗಾಯದೊಳಗಿನ ಅಶುದ್ಧ ದ್ರವ ಹೊರಬಂದು, ರಕ್ತಸಂಚಾರ ಹೆಚ್ಚಾಗಿ, ಹೊಸ ಚರ್ಮ ಬೇಗ ಬೆಳೆಯುತ್ತದೆ. ಅನೇಕ ದೊಡ್ಡ ಗಾಯಗಳು ಇಂದು ಈ ಚಿಕಿತ್ಸೆಯಿಂದ ಶಸ್ತ್ರಚಿಕಿತ್ಸೆಯ ಅಗತ್ಯವಿಲ್ಲದೆ ಗುಣವಾಗುತ್ತಿವೆ.

**ಆಧುನಿಕ ಡ್ರೆಸಿಂಗ್‌ಗಳ ಪಾತ್ರ**

ಇಂದು ಗಾಯದ ಮೇಲೆ ಹಾಕುವ ಬಟ್ಟೆಗಳು ಕೂಡ ಸ್ಮಾರ್ಟ್ ಆಗಿವೆ. ಸಿಲ್ವರ್ ಡ್ರೆಸಿಂಗ್‌ಗಳು, ಕೊಲಾಜನ್ ಆಧಾರಿತ ಡ್ರೆಸಿಂಗ್, ಹೈಡ್ರೋಜೆಲ್ ಮತ್ತು ಫೋಮ್ ಡ್ರೆಸಿಂಗ್‌ಗಳು ಗಾಯದ ತೇವಾಂಶವನ್ನು ಸಮತೋಲನದಲ್ಲಿ ಇಟ್ಟುಕೊಂಡು ಸೋಂಕನ್ನು ತಡೆಯುತ್ತವೆ. ಕೆಲವು ಗಂಭೀರ ಗಾಯಗಳಲ್ಲಿ ಕೃತಕ ಚರ್ಮ ಅಥವಾ ಜೈವಿಕ ಪದಾರ್ಥಗಳನ್ನು ಬಳಸಿ ಚರ್ಮದ ಬೆಳವಣಿಗೆಗೆ ಉತ್ತೇಜನ ನೀಡಲಾಗುತ್ತಿದೆ.

**ಆಫ್ಲೋಡಿಂಗ್ ಚಿಕಿತ್ಸೆ**

ಮಧುಮೇಹ ಪಾದಗಾಯ ಗುಣವಾಗಲು ಔಷಧದಷ್ಟೇ ಮುಖ್ಯವಾದ ಅಂಶವೆಂದರೆ ಆಫ್ಲೋಡಿಂಗ್‌ಅಂದರೆ ಗಾಯದ ಮೇಲೆ ಒತ್ತಡ ಬೀಳದಂತೆ ನೋಡಿಕೊಳ್ಳುವುದು. ವಿಶೇಷ ಶೂಗಳು, ಟೋಟಲ್ ಕಾಂಟ್ಯಾಕ್ಟ್ ಕಾಸ್ಟ್ ಮುಂತಾದ ಸಾಧನಗಳಿಂದ ಗಾಯಕ್ಕೆ ಅಗತ್ಯವಾದ ವಿಶ್ರಾಂತಿ ಸಿಗುತ್ತದೆ. ನಡೆಯುವ ಪ್ರತಿಯೊಂದು ಹೆಜ್ಜೆಯೂ ಗಾಯವನ್ನು ಹಾಳು ಮಾಡಬಾರದು ಎಂಬ ಅರಿವು ಇಲ್ಲಿ ಮುಖ್ಯ. ಇತ್ತೀಚಿನ ದಿನಗಳಲ್ಲಿ ಆಫಲೋಡಿಂಗ್ ವಿವಿಧ ವಿಧಾನಗಳ ಶಸ್ತ್ರ ಚಿಕಿತ್ಸೆ ಲಭ್ಯವಿದೆ ಇದರಿಂದ ಪಾದದ ವಿರೂಪತೆಯನ್ನು ಸರಿಪಡಿಸಬಹುದು.

**ರಕ್ತಸಂಚಾರ ಸುಧಾರಣೆ: ಅಂಗ ಉಳಿಸುವ ಪ್ರಯತ್ನ**

ಪಾದಕ್ಕೆ ರಕ್ತ ಸರಿಯಾಗಿ ಹರಿಯದಿದ್ದರೆ ಗಾಯ ಎಷ್ಟೇ ಚೆನ್ನಾಗಿ ನೋಡಿಕೊಂಡರೂ ಗುಣವಾಗುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಇಂದು ಆಂಜಿಯೋಪ್ಲಾಸ್ಟಿ ಮುಂತಾದ ಶಸ್ತ್ರಚಿಕಿತ್ಸೆಯ ವಿಧಾನಗಳಿಂದ ರಕ್ತನಾಳಗಳನ್ನು ತೆರೆಯಲಾಗುತ್ತಿದೆ. ಇದರಿಂದ ಅನೇಕ ಸಂದರ್ಭಗಳಲ್ಲಿ ಪಾದ ಕತ್ತರಿಸುವ ಪರಿಸ್ಥಿತಿಯನ್ನು ತಪ್ಪಿಸಬಹುದು.

**ಜಾಗೃತಿಯೇ ಮೊದಲ ಚಿಕಿತ್ಸೆ**

ಮಧುಮೇಹ ಪಾದಗಾಯ ಇಂದು ಅಂತ್ಯದ ಸೂಚಕವಲ್ಲ. ಸಮಯಕ್ಕೆ ಸರಿಯಾಗಿ ವೈದ್ಯರನ್ನು ಸಂಪರ್ಕಿಸುವುದು, ನಿಯಮಿತವಾಗಿ ಪಾದಗಳನ್ನು ಪರಿಶೀಲಿಸುವುದು ಮತ್ತು ಹೊಸ ಚಿಕಿತ್ಸೆಗಳ ಬಗ್ಗೆ ಅರಿವು ಹೊಂದಿರುವುದೇ ಮುಖ್ಯ. ನಮ್ಮ ಪಾದಗಳು ನಮ್ಮ ಜೀವನಯಾನದ ಮೌನ ಸಂಗಾತಿಗಳು. ಅವುಗಳ ಕಾಳಜಿ ತೆಗೆದುಕೊಳ್ಳುವುದು ನಮ್ಮ ಕೈಯಲ್ಲೇ ಇದೆ.

ವಿಜ್ಞಾನ ಇಂದು ಹೊಸ ದಾರಿಗಳನ್ನು ತೆರೆದಿದೆ; ಆದರೆ ಆ ದಾರಿಗೆ ಮೊದಲ ಹೆಜ್ಜೆ ಹಾಕಬೇಕಿರುವುದು ನಾವು.

●

## ಕಾಯಿಲೆ ಮತ್ತು ಚಿಕಿತ್ಸೆ

—

# ಚಟಪಟ ಚಿನಕುರಳಿ – ಅಟೆನ್ಶನ್ ಡೆಫಿಸಿಟ್ ಹೈಪರ್ ಆ್ಯಕ್ಟಿವಿಟಿ ಡಿಸಾರ್ಡರ್



**ಡಾ. ಶಿವಾನಂದ ಬಿ. ಹಿರೇಮಠ**
ಮನೋರೋಗ ತಜ್ಞ
ಆಂತರ್ಯ ನರ ಹಾಗೂ ಮನೋರೋಗ
ಕೇಂದ್ರ, ಹುಬ್ಬಳ್ಳಿ



**ಡಾ. ಅಶ್ವಿನಿ ಹೆಚ್. ಆರ್.**
ವಿಭಾಗೀಯ
ಸಂಪಾದಕರು

ಆದಿತ್ಯ, ಚೂಟಿ ಹುಡುಗ. ತುಂಬಾನೇ ಫಾಸ್ಟ್. ಒಂದು ಜಾಗದಲ್ಲಿ ಕೂರಲ್ಲ. ಯಾವಾಗೂ ಓಡಾಡ್ತಿರ್‍ತಾನೆ. ನರ್ಸರಿ ಸ್ಕೂಲಲ್ಲೂ ಅಷ್ಟೆ. ತನ್ನ ಸೀಟ್‌ನಲ್ಲಿ ಕೂರಲ್ಲ. ಏನೇ ಹೇಳಿದರೂ ಕೇಳಲ್ಲ ಅಂತಿದ್ರು ಟೀಚರ್. ಅಲ್ಲಿ ಓಡು, ಇಲ್ಲಿ ಜಿಗಿ, ಅಲ್ಲಿ ಹಾರು.. ಏನೇ ಚಟುವಟಿಕೆ ನೀಡಿದರೂ, ಅದನ್ನು ಮುಗಿಸಕ್ ಆಗ್ತಿರಲ್ಲಿಲ್ಲ. ಕೀಲಿ ತಿರುಗಿಸಿದ ಗೊಂಬೆ ಹಾಗೆ, ಯಾವಾಗಲೂ ಅಡ್ಡಾಡಕೊಂಡ ಇರ್‍ತಿದ್ದ. ಅಪ್ಪ, ಅಮ್ಮ ಬೇಸತ್ತು, ಬೈತಿದ್ರು. ಕೆಲವೊಮ್ಮೆ ಹೊಡೀತಾನೂ ಇದ್ರು. ಆದರೂ ಆದಿತ್ಯನ ಚಟುವಟಿಕೆಗಳ ವೇಗ ಕಡಿಮೆಯಾಗ್ಲಿಲ್ಲ. ಒಂದನೇ ತರಗತಿಗೆ ಹೋಗಲು ಶುರು ಮಾಡ್ದ. ಅಲ್ಲೂ ಕೂಡ ಟೀಚರ್, 'ಆದಿತ್ಯ ತರಗತಿಯಲ್ಲಿ ಪಾಠದ ಕಡೆ ಲಕ್ಷ್ಯಕೊಡುವುದಿಲ್ಲ, ಹೋಂ ವರ್ಕ ಮಾಡಲ್ಲ' ಅಂತ ಕಂಪ್ಲೇಂಟ್ ಮಾಡ್ತಿದ್ರು. ತನ್ನ ಪೆನ್ಸಿಲ್, ರಬ್ಬರ್, ಪುಸ್ತಕಗಳನ್ನ ಪದೇ ಪದೇ ಕಳ್ಕೊಳ್ತಿದ್ದ. ಆತನ 'ಹೈಪರ್' ನಡುವಳಿಕೆಯಿಂದ ಆತನ ಸಹಪಾಠಿಗಳಿಗೆ ಕಿರಿಕಿರಿ ಆಗ್ತಿತ್ತು. ಹೀಗಾಗಿ ಆತನಿಗೆ ಯಾರೂ ಫ್ರೆಂಡ್ಸ ಆಗ್ತಿರ್‍ಲಿಲ್ಲ.

ಮಕ್ಕಳು ಲವಲವಿಕೆ, ಚಟುವಟಿಕೆಯಿಂದ ಇದ್ದರೇನೆ ಚೆನ್ನ ಮತ್ತು ಅದು ಸಹಜ ಕೂಡ. ಆದರೆ ಚಟುವಟಿಕೆ ವಿಪರೀತವಾಗಿ, ಚಂಚಲತೆ ಮತ್ತು ಹಠಾತ್ ಪ್ರವೃತ್ತಿ ಹೆಚ್ಚಾಗಿ, ಮಗುವಿನ ವೈಯಕ್ತಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಜೀವನದ ಮೇಲೆ ಪರಿಣಾಮ ಬೀರಲಾರಂಭಿಸಿದರೆ, ಆ ಸ್ಥಿತಿಯನ್ನು, ಅಟೆನ್ಶನ್ ಡೆಫಿಸಿಟ್ ಹೈಪರ್‍ಆ್ಯಕ್ಟಿವಿಟಿ ಡಿಸಾರ್ಡರ್ (attention deficit hyperactivity disorder-ಎಡಿಹೆಚ್‌ಡಿ) ಅಥವಾ ಚಿತ್ತಚಂಚಲತೆ ಎನ್ನುತ್ತೇವೆ. ಇದು ಸಾಮಾನ್ಯವಾಗಿ ಮಕ್ಕಳಲ್ಲಿ ಕಂಡುಬರುವಂತಹ ಮಿದುಳಿನ ಕಾಯಿಲೆ. ಭಾರತದಲ್ಲಿ ಸುಮಾರು ೧೦% ಶಾಲೆಗೆ ಹೋಗುವ ಮಕ್ಕಳಲ್ಲಿ, ಅದರಲ್ಲೂ ಗಂಡು ಮಕ್ಕಳಲ್ಲಿ ಹೆಚ್ಚಾಗಿ ಕಾಣಸಿಗುತ್ತದೆ.

**ಕಾರಣಗಳು:**

- ಅನುವಂಶೀಯತೆ, ಅತಿ ಚಿಕ್ಕ ವಯಸ್ಸಿನಲ್ಲೇ ಸರಿಯಾದ ಪಾಲನೆ, ಪೋಷಣೆ ಇಲ್ಲದಿರುವದು, ದೈಹಿಕ ಹಾಗೂ ಮಾನಸಿಕ ಶೋಷಣೆಗಳು ಈ ಅಸ್ವಸ್ಥತೆಗೆ ಕೆಲವು ಕಾರಣಗಳು.
- ಮಿದುಳಿನ ಗಮನ ಕೇಂದ್ರೀಕರಣ ವ್ಯೂಹದಲ್ಲಿ ಡೋಪಮಿನ್ ಹಾಗೂ ನಾರೆಪಿನೇಫ್ರಿನ್ ಎಂಬ ರಾಸಾಯನಿಕಗಳ ಏರುಪೇರು, ಈ ಕಾಯಿಲೆ ಗುಣ ಲಕ್ಷಣಗಳಿಗೆ ಕಾರಣವಾಗಿವೆ.

ಚಂಚಲತೆ (inattention), ಅತಿಯಾದ ಚಟುವಟಿಕೆ (hyperactivity) ಹಾಗೂ ಹಠಾತ್ ಪ್ರವೃತ್ತಿ (iimpulsivity) ಇವು ಈ ಕಾಯಿಲೆಯ ಮೂರು ಮುಖ್ಯ ಲಕ್ಷಣಗಳು. ಶಾಲೆಗೆ ಹೋಗುವ ಮುನ್ನ, ಅತಿಯಾದ ಚಟುವಟಿಕೆ ಹಾಗೂ ಹಠಾತ್ ಪ್ರವೃತ್ತಿ ಎದ್ದು ಕಾಣಿಸಿದರೆ, ಶಾಲೆಗೆ ಹೋಗುವ ಮಕ್ಕಳಲ್ಲಿ ಚಂಚಲತೆ ಹೆಚ್ಚಾಗಿ ಕಂಡು ಬರುತ್ತದೆ.

**ಚಂಚಲತೆ :**

ಮಕ್ಕಳು ಓದಿನಲ್ಲಿ, ಚಟುವಟಿಕೆಯಲ್ಲಿ, ಆಟದಲ್ಲಿ ಸೂಕ್ಷ್ಮವಾದ ವಿವರಗಳಿಗೆ ಗಮನ ನೀಡುವುದಿಲ್ಲ.




ಓದಿನಲ್ಲಿ, ಬರವಣಿಗೆಯಲ್ಲಿ, ಚಂಚಲತೆಯಿಂದ ತಪ್ಪುಗಳನ್ನು ಮಾಡುತ್ತಿರುತ್ತಾರೆ. ತುಂಬ ಹೊತ್ತು ಗಮನವಿರಿಸಬೇಕಾದಂತಹ ಚಟುವಟಿಕೆಗಳಲ್ಲಿ (ಪಾಠ ಕೇಳುವುದು) ಪಾಲ್ಗೊಳ್ಳಲಾಗುದಿಲ್ಲ. ಅವರ ಜೊತೆ ಮಾತನಾಡುತ್ತಿದ್ದರೆ, ಅವರು ಕೇಳಿಸಿಕೊಳ್ಳುತ್ತಿಲ್ಲ ಎನ್ನಿಸುತ್ತದೆ. ದಿನ ನಿತ್ಯದ ಅವಶ್ಯಕತೆಯ ವಸ್ತುಗಳನ್ನು (ಪೆನ್ಸಿಲ್, ರಬ್ಬರ್, ಪುಸ್ತಕ) ಪದೇ ಪದೇ ಕಳೆದುಕೊಳ್ಳುತ್ತಿರುತ್ತಾರೆ. ಅತಿ ಸುಲಭವಾಗಿ ಚಿಕ್ಕ ಪುಟ್ಟ ವಸ್ತು, ವಿಷಯಗಳಿಂದ ವಿಚಲಿತಗೊಳ್ಳುತ್ತಾರೆ.

**ಅತಿಯಾದ ಚಟುವಟಿಕೆ ಹಾಗೂ ಹಠಾತ್ ಪ್ರವೃತ್ತಿ:**

ಯಾವಾಗಲೂ ಕೈ ಕಾಲು ಅಲ್ಲಾಡಿಸುವದು, ಚಡಪಡಿಕೆ, ಒದ್ದಾಟ. ತರಗತಿಯಲ್ಲಿ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಲಾಗದೇ, ಎದ್ದು ಓಡಾಡುತ್ತಿರುತ್ತಾರೆ. ಅವಶ್ಯಕತೆ ಇಲ್ಲದ ಸಂದರ್ಭದಲ್ಲಿ ಪರಿಣಾಮದ ವಿವೇಚನೆಯಿಲ್ಲದೇ ಜಿಗಿಯುವದು, ಏರುವುದು, ವಿಪರೀತವಾಗಿ ಅರಳು ಹುರಿದಂತೆ ಚಟಪಟ ಮಾತನಾಡುತ್ತಾರೆ. ಪ್ರಶ್ನೆ ಕೇಳಿ ಮುಗಿಸುವ ಮೊದಲೇ ಉತ್ತರ ನೀಡುವದು, ಸಾಲಿನಲ್ಲಿ ನಿಂತಲ್ಲಿ ತನ್ನ ಸರತಿಗಾಗಿ ಕಾಯದೇ ಇರುವದು. ಬೇರೆಯವರ ಸಂಭಾಷಣೆಯಲ್ಲಿ ಅಥವಾ ಚಟುವಟಿಕೆಗಳಿಗೆ ಅಡ್ಡಿಪಡಿಸುವದು.

**ಎಡಿಹೆಚ್‌ಡಿಯಿಂದ ಉಂಟಾಗುವ ತೊಂದರೆಗಳು:**

- ಚಂಚಲತೆಯಿಂದ, ಓದಿನ ಕಡೆ ಗಮನ ಕೇಂದ್ರೀಕರಿಸಲಾಗದೇ ಶೈಕ್ಷಣಿಕ ಹಿನ್ನಡೆತ.
- ಅತಿಯಾದ ಚಟುವಟಿಕೆ ಹಾಗೂ ಹಠಾತ್ ಪ್ರವೃತ್ತಿಯಿಂದ ನೋವು, ಗಾಯ ಹಾಗೂ ಅಪಘಾತಗಳು ಜಾಸ್ತಿ.
- ಬಾಲ್ಯದಲ್ಲಿ ಎಡಿಹೆಚ್‌ಡಿ ಸಮಸ್ಯೆಯಿದ್ದರೆ, ಕಿಶೋರಾವಸ್ಥೆ ಮತ್ತು ವಯಸ್ಕರಾದ ಮೇಲೆ ಮಾದಕ ವಸ್ತುಗಳ ವ್ಯಸನಕ್ಕೆ ಬಲಿಯಾಗುವ ಸಂಭವವಿರುತ್ತದೆ.
- ಓದು, ಕೆಲಸ, ಕಾರ್ಯಗಳಲ್ಲಿ ಗಮನ ನೀಡದಿರುವಿಕೆಯನ್ನು ಪಾಲಕರು, ಶಿಕ್ಷಕರು ಹಾಗೂ ಉಳಿದವರು ಮಗುವಿನ ಆಲಸ್ಯ, ಅಸಹಕಾರ, ಬೇಜವಾಬ್ದಾರಿ ಎಂದು ಗ್ರಹಿಸಬಹುದು. ಇದರಿಂದ ಇತರ ಕುಟುಂಬ

ಸದಸ್ಯರು ಹಾಗೂ ಶಿಕ್ಷಕರು ಮಗುವಿನ ಜೊತೆ ಸಹಜವಾಗಿ ಪ್ರೀತಿಯಿಂದ ನಡೆದುಕೊಳ್ಳದಿರಬಹುದು.

- ಉಳಿದ ಮಕ್ಕಳು ಮಗುವಿನ ಜೊತೆ ಬೆರೆಯಲು ಇಷ್ಟ ಪಡದಿರಬಹುದು, ಚುಡಾಯಿಸಬಹುದು. ಹೀಗಾಗಿ ಸಮವಯಸ್ಕರೊಂದಿಗೆ ಗೆಳೆತನ ಮಾಡುವದು ಕಷ್ಟವಾಗಬಹುದು.

**ಚಿಕಿತ್ಸೆ:**

ಔಷಧೋಪಚಾರ ಮಿದುಳಿನಲ್ಲಿ ಡೋಪಮಿನ್, ನಾರ್‌ಎಪಿನೆಫ್ರಿನ್ ಹಾಗೂ ಇನ್ನಿತರ ರಾಸಾಯನಿಕಗಳ ಪ್ರಮಾಣವನ್ನು ಸರಿದೂಗಿಸುವಂತಹ ಔಷಧಿಗಳನ್ನು ನೀಡುವುದರಿಂದ, ರೋಗಲಕ್ಷಣಗಳು ಒಂದು ಹಂತದವರೆಗೆ ಕಡಿಮೆಯಾಗಬಹುದು.

ಮನೋಸಾಮಾಜಿಕ ಚಿಕಿತ್ಸೆ

- ಚಂಚಲತೆಯನ್ನು ಕಡಿಮೆ ಮಾಡಿ, ಗಮನ ಹೆಚ್ಚಿಸಲು ಕೆಲವು ವಿಶೇಷವಾದ ಚಟುವಟಿಕೆಗಳನ್ನು ನೀಡಲಾಗುತ್ತದೆ. ಉದಾ: ನಾಲ್ಕೈದು ತರಹದ ಬೇಳೆಗಳನ್ನು ಒಂದು ಬಟ್ಟಲಿನಲ್ಲಿ ಹಾಕಿ, ಅವುಗಳನ್ನು ಕೆಲವು ನಿಮಿಷಗಳಲ್ಲಿ ಬೇರ್ಪಡಿಸುವದು, ಬಿಡಿಸಿದ ರೇಖಾ ಚಿತ್ರಗಳಲ್ಲಿ, ಬಣ್ಣತುಂಬುವದು.
- ಚಟುವಟಿಕೆ ದಿನಚರಿಯನ್ನು ಮಾಡಿ, ಸಮಯದ ನಿಬಂಧನೆಯನ್ನು ಕಟ್ಟುನಿಟ್ಟಾಗಿ ಪಾಲಿಸುವದು.

**ಪಾಲಕರ ಪಾತ್ರ:**

ಮಗುವಿನ ಅತಿಯಾದ ಚಟುವಟಿಕೆ ಹಾಗೂ ಹಠಾತ್ ಪ್ರವೃತ್ತಿಯಿಂದ, ಪಾಲಕರು ಸಾಮಾಜಿಕವಾಗಿ ತುಂಬ ಮುಜುಗರವನ್ನು ಅನುಭವಿಸುತ್ತಾರೆ. ಮಗುವಿನ ಚಿತ್ತಚಂಚಲತೆಯಿಂದಾಗಿ, ಏನನ್ನು ಹೇಳಿದರೂ, ಅದು ಕೇಳಿಸಿಕೊಳ್ಳುತ್ತಿಲ್ಲ ಎನ್ನಿಸಬಹುದು. ಶಿಕ್ಷಕರು ಮಗುವಿನ ನಡವಳಿಕೆಯ ಬಗ್ಗೆ ಪದೇ ಪದೇ ದೂರಬಹುದು. ಈ ಎಲ್ಲ ವಿಷಯಗಳಿಂದ ಪಾಲಕರು, ಮಗುವಿನ ಮೇಲೆ ಕೋಪ, ಬೇಸರಗೊಂಡು, ಸಹಜವಾದ ಪ್ರೀತಿ, ಅಕ್ಕರೆ ಕಡಿಮೆಯಾಗಿ, ಮಗುವನ್ನು ನಿರ್ಲಕ್ಷಿಸಬಹುದು ಮತ್ತು ಅತಿಯಾಗಿ ಶಿಕ್ಷಿಸಲೂಬಹುದು. ಶಿಕ್ಷೆ ನೀಡಿದರೂ ಸಹ, ಮಗುವಿನ ನಡವಳಿಕೆಯಲ್ಲಿ ಯಾವುದೇ ಬದಲಾವಣೆ ಕಂಡುಬರದು.

ಮಗುವಿನ ಇಂತಹ ನಡುವಳಿಕೆ, ಅಸ್ವಸ್ಥತೆಯ ಗುಣಲಕ್ಷಣ ಎಂದುಪಾಲಕರು, ಅರ್ಥ ಮಾಡಿಕೊಳ್ಳಬೇಕು. ಮಗು ಬೇಕಂತಲೇ, ಕೀಟಲೇ ಮಾಡಲೆಂದಲೇ ಈ ರೀತಿ ಮಾಡುತ್ತಿದೆ ಎಂದು ಭಾವಿಸಬಾರದು. ಎಡಿಹೆಚ್‌ಡಿಯ ಚಿಕಿತ್ಸೆಯಲ್ಲಿ ಪಾಲಕರಿಗೂ ಕೆಲವೊಂದು ಸೂಚನೆಗಳನ್ನು ನೀಡಲಾಗುತ್ತದೆ.

- ಇಂದಿನ ಸ್ಪರ್ಧಾಯುಗದಲ್ಲಿ, ಸಂಬಂಧಗಳಿಗೆ ಸಮಯ ದೊರೆಯುವದು ತುಂಬಾ ವಿರಳ. ಹೀಗಾಗಿ ಮಗುವಿಗೆ, ಪಾಲಕರಿಂದ ಸ್ವಾಭಾವಿಕವಾಗಿ ಸಿಗಬೇಕಾದಂತಹ ಸಮಯ ಸಿಗದಿರಬಹುದು. ಆದ್ದರಿಂದ, ಪ್ರತಿದಿನ ಮಗುವಿಗಾಗಿಯೇ, ಸ್ವಲ್ಪ ಸಮಯ ಮೀಸಲಿಡಲೇಬೇಕು. ಆ ಸಮಯದಲ್ಲಿ, ಮಗುವಿನ ಅಂದಿನ ದಿನಚರಿ, ಶಾಲೆಯ ಆಗುಹೋಗುಗಳು, ಸಂತೋಷ– ಬೇಜಾರಿನ ವಿಷಯಗಳ ಬಗ್ಗೆ ಮುಕ್ತವಾಗಿ ಮಾತನಾಡಬೇಕು. ಮಗುವಿನ ಬೇಕು – ಬೇಡಗಳ ಬಗ್ಗೆ ವಿಶೇಷ ಗಮನವಿರಲಿ.
- ಮಗುವಿಗೆ ಯಾವುದೇ ಚಟುವಟಿಕೆ ಮಾಡಲು ಹೇಳಿದರೆ, ನೀವು ನೀಡುವ ಸೂಚನೆ ಸ್ಪಷ್ಟವಾಗಿರಲಿ. ಸಂಕೀರ್ಣ ಅಥವ ಅಸ್ಪಷ್ಟವಾದ ಸೂಚನೆಗಳು ಮಗುವಿಗೆ ಅರ್ಥವಾಗುವುದಿಲ್ಲ. ಮಗು ಗೊಂದಲಕ್ಕೀಡಾಗಿ, ಚಟುವಟಿಕೆಯನ್ನು ಅರ್ಧಕ್ಕೆ ನಿಲ್ಲಿಸಬಹುದು.
- ಮಗುವಿನ ಒಳ್ಳೆಯ ಗುಣ ಹಾಗೂ ಕೆಲಸಗಳನ್ನು ಮುಕ್ತವಾಗಿ ಹೊಗಳಿ. ಪಾಲಕರಿಗೆ ಮಗುವಿನ ಯಾವ ಗುಣ ಖುಷಿ ನೀಡುತ್ತದೆ ಹಾಗೂ ಯಾವ ಗುಣ ಕೋಪ, ಬೇಜಾರು ಉಂಟು ಮಾಡುತ್ತದೆ ಎಂಬುದು ಮಗುವಿಗೆ ಮನದಟ್ಟಾಗಲಿ.
- ಮಿತಿಯನ್ನು ನಿಗದಿ ಪಡಿಸುವದು, ಮಗುವಿನ ಹಠಕ್ಕೆ ಬಾಗದಿರಿ. ಎಲ್ಲಿಯವರೆಗೆ ಹಠ ಮಾಡುವದು ಸಹಜ ಎಂಬ ಮಿತಿಯನ್ನು ಗೊತ್ತುಪಡಿಸಿಕೊಳ್ಳಿ. ಮಿತಿ ಮೀರಿದರೆ, ಶಿಕ್ಷಿಸಬಹುದು. ಆದರೆ ಶಿಕ್ಷೆಯು ತುಂಬ ಮಿತವಾಗಿರಲಿ.
- ಶಿಕ್ಷಕರೊಡನೆ ಮಗುವಿನ ಏಳಿಗೆಯ ಬಗ್ಗೆ ನಿಯಮಿತವಾಗಿ ಚರ್ಚೆ ಮಾಡಿ.

ತಮ್ಮ ಮಗುವಿನಲ್ಲಿ, ಎಡಿಹೆಚ್‌ಡಿಯ ಲಕ್ಷಣಗಳು ಕಂಡು ಬಂದರೆ ಮಕ್ಕಳ ವೈದ್ಯರು ಅಥವ, ಮನೋವೈದ್ಯರನ್ನು ಕಂಡು ಸಮಾಲೋಚಿಸಿ.

ಆರೋಗ್ಯ ದಿನಾಚರಣೆ

# ರಾಷ್ಟ್ರೀಯ ರಕ್ತ ದಾನ ಮಾಸಿಕ ಆಚರಣೆ ಅಂಗವಾಗಿ



ಡಾ. ಕೆ. ಶಿವರಾಜ್ ಪಾಟೀಲ್
ಮಕ್ಕಳ ತಜ್ಞರು,
ಸಹನಾ ಆಸ್ಪತ್ರೆ, ಸಿಂಧನೂರು



ಡಾ. ದಿನೇಶ್ ಗುಡಿ
ವಿಭಾಗೀಯ
ಸಂಪಾದಕರು

ರಕ್ತದಾನವು ಜನರು ತಮ್ಮ ರಕ್ತವನ್ನು ಜನರಿಗೆ ದಾನ ಮಾಡುವ ಅಭ್ಯಾಸವನ್ನು ಸೂಚಿಸುತ್ತದೆ ಆದ್ದರಿಂದ ಅದು ಅವರ ಆರೋಗ್ಯ ಸಮಸ್ಯೆಗಳಿಗೆ ಸಹಾಯ ಮಾಡುತ್ತದೆ. ರಕ್ತವು ನಮ್ಮ ದೇಹಕ್ಕೆ ಅತ್ಯಗತ್ಯವಾಗಿರುವ ದ್ರವಗಳಲ್ಲಿ ಒಂದಾಗಿದೆ, ಇದು ನಮ್ಮ ದೇಹದ ಸುಗಮ ಕಾರ್ಯನಿರ್ವಹಣೆಗೆ ಸಹಾಯ ಮಾಡುತ್ತದೆ. ದೇಹವು ಹೆಚ್ಚಿನ ಪ್ರಮಾಣದಲ್ಲಿ ರಕ್ತವನ್ನು ಕಳೆದುಕೊಂಡರೆ, ಜನರು ಮಾರಣಾಂತಿಕ ಕಾಯಿಲೆಗಳಿಗೆ ಒಳಗಾಗುತ್ತಾರೆ ಮತ್ತು ಸಾಯುತ್ತಾರೆ. ಹೀಗಾಗಿ, ರಕ್ತದಾನವು ಅಕ್ಷರಶಃ ಹೇಗೆ ಜೀವ ಉಳಿಸುತ್ತದೆ ಎಂಬುದನ್ನು ನಾವು ನೋಡುತ್ತೇವೆ ಅದು ಜನರಿಗೆ ಸಹಾಯ ಮಾಡುತ್ತದೆ. ಜಾತಿ, ಮತ, ಧರ್ಮ ಮತ್ತು ಹೆಚ್ಚಿನದನ್ನು ಲೆಕ್ಕಿಸದೆ ಜನರನ್ನು ಒಂದುಗೂಡಿಸುವ ಮಾನವೀಯತೆಯ ಸಂಕೇತವೂ ಆಗಿದೆ. "ಪ್ರತಿಯೊಬ್ಬ ರಕ್ತದಾನಿಯು ಜೀವ ರಕ್ಷಕ." ರಕ್ತದಾನವು ಸ್ವಯಂಪ್ರೇರಣೆಯಿಂದ, ನೈತಿಕ ಉದ್ದೇಶಗಳಿಗಾಗಿ ರಕ್ತವನ್ನು ನೀಡುವ ಉದಾತ್ತ ಕಾರ್ಯವಾಗಿದೆ.

ರಕ್ತವು ಅಗತ್ಯವಿರುವ ಜನರಿಗೆ ಲಭ್ಯವಾಗುತ್ತದೆ ಮತ್ತು ಸಮಯಕ್ಕೆ ಜೀವ ಉಳಿಸಲಾಗುತ್ತದೆ. ವಿಶ್ವ ಆರೋಗ್ಯ ಸಂಸ್ಥೆ (WHO) ಜೂನ್ ೧೪ ಅನ್ನು ವಿಶ್ವ ರಕ್ತದಾನಿಗಳ ದಿನವೆಂದು ಗುರುತಿಸಿದೆ. ಇದನ್ನು ಮೊದಲ ಬಾರಿಗೆ ೨೦೦೪ ರಲ್ಲಿ ಪ್ರಾರಂಭಿಸಲಾಯಿತು. ಈ ದಿನವು ರಕ್ತದಾನದ ಅಗತ್ಯತೆಯ ಬಗ್ಗೆ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿದೆ ಮತ್ತು ಇತರರ ಜೀವಗಳನ್ನು ರಕ್ಷಿಸಲು ತಮ್ಮ ರಕ್ತವನ್ನು ನೀಡುವ ಎಲ್ಲಾ ನಿಸ್ವಾರ್ಥ ಆತ್ಮಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತದೆ. ಈ ದಿನದಂದು ಕಛೇರಿಗಳು, ಕಾಲೇಜುಗಳು, ಶಾಲೆಗಳು, ಸಮುದಾಯ ಕೇಂದ್ರಗಳು ಇತ್ಯಾದಿಗಳಲ್ಲಿ ವಿವಿಧ ರಕ್ತದಾನದ ಶಿಬಿರಗಳನ್ನು ಆಯೋಜಿಸಲಾಗುತ್ತದೆ.

ರಕ್ತದಾನದಿಂದ ದಾನಿಗಳಿಗೆ ಯಾವುದೇ ವೆಚ್ಚವಾಗುವುದಿಲ್ಲ ಮತ್ತು ಅವರು ಅದನ್ನು ಹಣವಿಲ್ಲದೆ ಮಾಡುತ್ತಾರೆ. ರಕ್ತದಾನದ ಪ್ರಾಮುಖ್ಯತೆ ಸಂಶೋಧನೆಯ ಪ್ರಕಾರ, ಆಸ್ಪತ್ರೆಗೆ ದಾಖಲಾಗುವ ಪ್ರತಿ ೭ ರೋಗಿಗಳಲ್ಲಿ ಒಬ್ಬರಿಗೆ ರಕ್ತದ ಅಗತ್ಯವಿರುತ್ತದೆ ಅಪಘಾತದ ನಂತರದ ಆಘಾತಗಳು, ಶಸ್ತ್ರಚಿಕಿತ್ಸೆಗಳು, ರಕ್ತಹೀನತೆ, ಕ್ಯಾನ್ಸರ್ ಮತ್ತು ಗರ್ಭಾವಸ್ಥೆಯನ್ನು ಒಳಗೊಂಡ ಸಂದರ್ಭಗಳಲ್ಲಿ ಅಗತ್ಯವು ಸಾಕಷ್ಟು ಉದ್ಭವಿಸುತ್ತದೆ.

ಆಸ್ಪತ್ರೆಗಳು ಮತ್ತು ರಕ್ತನಿಧಿಗಳಿಗೆ ಯಾವಾಗಲೂ ಪ್ರತಿ ರಕ್ತದ ಗುಂಪಿನ ರಕ್ತದ ಸಿದ್ಧ ಘಟಕಗಳು ಬೇಕಾಗುತ್ತವೆ. ಆಗ ಮಾತ್ರ ಅವರು ಜನರ ಅಮೂಲ್ಯ ಜೀವಕ್ಕೆ ಚಿಕಿತ್ಸೆ ನೀಡುವಲ್ಲಿ ಯಶಸ್ವಿಯಾಗುತ್ತಾರೆ. ರಕ್ತವು ದ್ರವವಾಗಿದ್ದು ಅದನ್ನು ದೀರ್ಘಕಾಲ ಸಂಗ್ರಹಿಸಲಾಗುವುದಿಲ್ಲ. ಇದನ್ನು ಬಹಳ ಸೀಮಿತ ಸಮಯದವರೆಗೆ ಮಾತ್ರ ಇಡಬಹುದು. ವಿಶ್ವಾದ್ಯಂತ, ಸುಮಾರು ಮೂವತ್ತರಿಂದ ಮೂವತ್ತೈದು ಪ್ರತಿಶತದಷ್ಟು ರಕ್ತದ ಘಟಕಗಳ ಕೊರತೆಯಿದೆ.

ಆದ್ದರಿಂದ, ಆರೋಗ್ಯವಂತ ಮತ್ತು ಅರ್ಹ ವ್ಯಕ್ತಿಗಳಿಂದ ರಕ್ತದಾನವನ್ನು ಪ್ರೋತ್ಸಾಹಿಸಲಾಗುತ್ತದೆ. ಅರ್ಹತೆಯ ಮಾನದಂಡಗಳು ಹಲವಾರು. ಅವುಗಳಲ್ಲಿ ಕೆಲವು ಈ ಕೆಳಗಿನವುಗಳನ್ನು ಒಳಗೊಂಡಿವೆ; ದಾನಿಯು ಹದಿನೆಂಟರಿಂದ ಅರವತ್ತು ವರ್ಷ ವಯಸ್ಸಿನವರಾಗಿರಬೇಕು, ಅವನು ಅಥವಾ ಅವಳು ಕ್ಯಾನ್ಸರ್ ಅಥವಾ

ಯಾವುದೇ ರಕ್ತ ಹೆಪ್ಪುಗಟ್ಟುವಿಕೆಯ ಕಾಯಿಲೆಯಿಂದ ಬಳಲುತ್ತಿರುವ ಅಥವಾ ಇತಿಹಾಸವನ್ನು ಹೊಂದಿರಬಾರದು, ವ್ಯಕ್ತಿಯು ಎಚ್‌ಐವಿ ಪಾಸಿಟಿವ್ ಆಗಿರಬಾರದು ಮತ್ತು ಅವನ ಅಥವಾ ಅವಳ ತೂಕ ೫೦ ಕಿಲೋಗ್ರಾಂಗಳಷ್ಟು ಇರ.



**ರಕ್ತದಾನ ವಿಧಾನ**

ಹೆಚ್ಚಿನ ರಕ್ತದಾನಗಳು ಪ್ರಮಾಣಿತ ವಿಧಾನವನ್ನು ಅನುಸರಿಸುತ್ತವೆ. ರಕ್ತವನ್ನು ಹೊರತೆಗೆಯಲು ಸೂಜಿಯನ್ನು ಚುಚ್ಚಲು ದಾನಿಯ ಕೈಯ ಒಂದು ಸಣ್ಣ ಭಾಗವನ್ನು ಕ್ರಿಮಿನಾಶಕದಿಂದ ಸ್ವಚ್ಛಗೊಳಿಸಲಾಗುತ್ತದೆ. ೪೦೦ ಎಮ್. ಎಲ್ ಮಾತ್ರ ರಕ್ತವನ್ನು ತೆಗೆದುಕೊಳ್ಳುತ್ತಾರೆ ಇದು ಸುಮಾರು ಎಂಟರಿಂದ ಹತ್ತು ನಿಮಿಷಗಳನ್ನು ತೆಗೆದುಕೊಳ್ಳುತ್ತದೆ.

**ರಕ್ತದಾನದ ಪ್ರಯೋಜನಗಳು**

ರಕ್ತದಾನ ಮಾಡುವ ಜನರು ಹೃದಯಾಘಾತ ಮತ್ತು ಕ್ಯಾನ್ಸರ್ ಅಪಾಯಕ್ಕೆ ಒಳಗಾಗುವ ಸಾಧ್ಯತೆ ಕಡಿಮೆ. ಕಾರಣ ಕಾಲಕಾಲಕ್ಕೆ ರಕ್ತದಾನ ಮಾಡುವುದರಿಂದ; ಅವರ ರಕ್ತವು ರಕ್ತನಾಳಗಳ ಒಳಪದರಕ್ಕೆ ಕಡಿಮೆ ಹಾನಿಯಾಗುವ ರೀತಿಯಲ್ಲಿ ಹರಿಯುತ್ತದೆ ಮತ್ತು ಕಡಿಮೆ ಅಪಧಮನಿಯ ಅಡೆತಡೆಗಳನ್ನು ಉಂಟುಮಾಡುತ್ತದೆ.

ರಕ್ತದಾನಕ್ಕೆ ಹಸಿರು ನಿಶಾನೆ ತೋರಿಸುವ ಮೊದಲು, ಅದರ ಮಾದರಿಯನ್ನು ಪರೀಕ್ಷಿಸಲು ಪ್ರಯೋಗಾಲಯಕ್ಕೆ ಕೊಂಡೊಯ್ಯಲಾಗುತ್ತದೆ. ಅದರ ಮೇಲೆ ಹದಿಮೂರು ವಿವಿಧ ರೀತಿಯ ಪರೀಕ್ಷೆಗಳನ್ನು ನಡೆಸಲಾಗುತ್ತದೆ ಮತ್ತು ಏನಾದರೂ ಕಾಯಿಲೆಯ ಬಗ್ಗೆ ತಿಳಿದುಬಂದರೆ, ತಕ್ಷಣವೇ ನಿಮಗೆ ಸೂಚನೆ ನೀಡಲಾಗುತ್ತದೆ. ನಿಮ್ಮ ನಾಡಿಮಿಡಿತ, ಹೃದಯ ಬಡಿತ ಮತ್ತು ರಕ್ತದೊತ್ತಡದ ಬಗ್ಗೆಯೂ ನೀವು ತಿಳಿದುಕೊಳ್ಳುತ್ತೀರಿ. ಇದು ಯಾವುದೇ ಶುಲ್ಕ ಅಥವಾ ಮೊತ್ತವನ್ನು ಪಾವತಿಸದೆ ಸಂಪೂರ್ಣ ಆರೋಗ್ಯ ತಪಾಸಣೆ ಮಾಡಿಸಿಕೊಂಡಂತೆ.

ರಕ್ತದಾನ ಮಾಡುವ ಜನರು ನಾಲ್ಕು ವರ್ಷಗಳವರೆಗೆ ಹೆಚ್ಚು ಕಾಲ ಬದುಕುತ್ತಾರೆ ಎಂದು ಅಧ್ಯಯನಗಳು ತೋರಿಸಿವೆ. ಇದರ ಅತ್ಯಂತ ಗಮನಾರ್ಹ ಪ್ರಯೋಜನವೆಂದರೆ ರಕ್ತದಾನ ಮಾಡಿದ ನೀವು ಹೆಮ್ಮೆಪಡುತ್ತೀರಿ ಮತ್ತು ಇತರ ಜನರ ಜೀವಗಳನ್ನು ಉಳಿಸಲು ನೀವು ಏನಾದರೂ ಕೊಡುಗೆ ನೀಡಿದ್ದೀರಿ ಎಂಬುದಕ್ಕೆ ಸಂತೋಷವನ್ನು ಕಂಡುಕೊಳ್ಳುತ್ತೀರಿ. ರಕ್ತದಾನವು ಒತ್ತಡವನ್ನು ಕಡಿಮೆ ಮಾಡಲು ಮತ್ತು ನಕಾರಾತ್ಮಕ ಆಲೋಚನೆಗಳು ಮತ್ತು ಭಾವನೆಗಳನ್ನು ತೊಡೆದುಹಾಕಲು ಸಹಾಯ ಮಾಡುತ್ತದೆ. ಇದು ಸೇರಿದವರ ಭಾವನೆಯನ್ನು ಉತ್ತೇಜಿಸುತ್ತದೆ ಮತ್ತು ವ್ಯಕ್ತಿಯ ಮಾನಸಿಕ ಆರೋಗ್ಯವನ್ನು ಉತ್ತಮಗೊಳಿಸುತ್ತದೆ.

WHO ಜೂನ್ ೧೪ನ್ನು ವಿಶ್ವ ರಕ್ತದಾನಿಗಳ ದಿನವನ್ನಾಗಿ ಆಚರಿಸುತ್ತದೆ. ವಿಶ್ವ ರಕ್ತದಾನಿಗಳ ದಿನ ಈ ಜೀವ ಉಳಿಸುವ ಪ್ರಕ್ರಿಯೆಯ ಬಗ್ಗೆ ಜಾಗೃತಿ ಮೂಡಿಸಲು, ಪ್ರಪಂಚವು ಜೂನ್ ೧೪ ಅನ್ನು ರಕ್ತದಾನಿಗಳ ದಿನವನ್ನಾಗಿ ಆಚರಿಸುತ್ತದೆ. ಇದು ರಕ್ತದಾನವನ್ನು ಉತ್ತೇಜಿಸುತ್ತದೆ ಮತ್ತು ರಕ್ತದಾನ ಮಾಡುವ ಮೂಲಕ ಜೀವಗಳನ್ನು ಉಳಿಸಲು ಜನರನ್ನು ಪ್ರೇರೇಪಿಸುತ್ತದೆ.

ಇದಲ್ಲದೆ, ಈ ದಿನವು ಬಹಳ ಮುಖ್ಯವಾದ ದಿನವಾಗಿದೆ ಏಕೆಂದರೆ ಇದು ಸುರಕ್ಷಿತ ರಕ್ತದ ಬಗ್ಗೆ ಜನರಿಗೆ ತಿಳಿಸುತ್ತದೆ. ಜನರು ರಕ್ತದಾನ ಮಾಡಲು ಮೂಲಭೂತ ಅಂಶಗಳನ್ನು ತಿಳಿದುಕೊಳ್ಳಬೇಕು. ಉದಾಹರಣೆಗೆ, ರಕ್ತದಾನ ಮಾಡಲು ಕೆಲವು ಮಾನದಂಡಗಳನ್ನು ಪೂರೈಸಬೇಕು. ಇದು ಎಲ್ಲರಿಗೂ ತಿಳಿದಿಲ್ಲ. ಹೀಗಾಗಿ, ಈ ದಿನವು ಹಾಗೆ ಮಾಡಲು ಸಹಾಯ ಮಾಡುತ್ತದೆ. ಬಹು ಮುಖ್ಯವಾಗಿ, ಈ ದಿನದಂದು, ರಕ್ತದಾನ




ಮಾಡಲು ಜನರನ್ನು ಆಹ್ವಾನಿಸುವ ಅಭಿಯಾನವನ್ನು WHO ಆಯೋಜಿಸುತ್ತದೆ. ರಕ್ತದಾನ ಮಾಡಲು ಅರ್ಹರಾಗಿರುವ ವ್ಯಕ್ತಿಯು ೧೭–೬೦ ವರ್ಷ ವಯಸ್ಸಿನವರಾಗಿರಬೇಕು. ಅವರು ೫೦ ಕಿಲೋಗ್ರಾಂಗಳಿಗಿಂತ ಹೆಚ್ಚು ತೂಕವನ್ನು ಹೊಂದಿರಬೇಕು ಮತ್ತು ಉತ್ತಮ ಆರೋಗ್ಯವನ್ನು ಹೊಂದಿರಬೇಕು. ಮಧುಮೇಹ, ಅಧಿಕ ರಕ್ತದೊತ್ತಡ ಮತ್ತಿತರ ಕಾಯಿಲೆಗಳಿಂದ ಬಳಲುತ್ತಿರುವವರು ರಕ್ತದಾನ ಮಾಡುವಂತಿಲ್ಲ. ಆದ್ದರಿಂದ, ವಿಶ್ವ ರಕ್ತದಾನಿಗಳ ದಿನದಂದು, ಜಗತ್ತನ್ನು ಉತ್ತಮ ಸ್ಥಳವಾಗಿಸಲು ರಕ್ತದಾನಿಗಳ ಕೊಡುಗೆಗಾಗಿ ಅವರು ಶ್ಲಾಘಿಸುತ್ತಾರೆ.

ಸಮಾಜ ಸೇವೆಗಿಂತ ಮಿಗಿಲಾದ ಸೇವೆ ಮತ್ತೊಂದಿಲ್ಲ. ಒಬ್ಬ ವ್ಯಕ್ತಿಯಿಂದ ತೆಗೆದ ಒಂದು ಯೂನಿಟ್ ರಕ್ತವು ಮೂರು ಜನರ ಜೀವವನ್ನು ಉಳಿಸಲು ಸಹಾಯ ಮಾಡುತ್ತದೆ. ರಕ್ತ ನೀಡಿದ ನಂತರ ತಲೆತಿರುಗುವಿಕೆ ಅಥವಾ ವಾಕರಿಕೆ ಉಂಟಾಗಬಹುದು. ಈ ಉದಾತ್ತ ಕ್ರಿಯೆಯನ್ನು ಮಾಡಿದ ನಂತರ ಅವರು ಚೆನ್ನಾಗಿ ವಿಶ್ರಾಂತಿ ಪಡೆಯುತ್ತಾರೆ ಮತ್ತು ಪೌಷ್ಟಿಕಾಂಶದ ಊಟವನ್ನು ತಿನ್ನುತ್ತಾರೆ ಎಂದು ಖಚಿತಪಡಿಸಿಕೊಳ್ಳಬೇಕು. ರಕ್ತದಾನ ಮಾಡುವುದು ಮಾನವನ ಕರ್ತವ್ಯ ಎಂದು ಭಾವಿಸುವುದು ಬಹಳ ಮುಖ್ಯ ರಕ್ತ ಕೊಟ್ಟರೆ ದೇಹ ದುರ್ಬಲವಾಗುತ್ತದೆ ಎಂಬ ತಪ್ಪು ಕಲ್ಪನೆ ಬೇಡ. ರಕ್ತದಾನದ ಈ ಚಟುವಟಿಕೆಯು ಅಗತ್ಯವಿರುವ ಜನರು ಮತ್ತು ನೀಡಲು ಇಷ್ಟಪಡುವ ಜನರ ನಡುವೆ ಅನೇಕ ಅದೃಶ್ಯ ಬಂಧಗಳನ್ನು ಸೃಷ್ಟಿಸುತ್ತದೆ.

ಆರೋಗ್ಯ ಪೂರೈಕೆದಾರರು ರಕ್ತದಾನದ ಬಗ್ಗೆ ಸಾಮಾಜಿಕ ಜಾಗೃತಿಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿರಬೇಕು ಮತ್ತು ಇತರರಿಗೆ ಸೇವೆ ಸಲ್ಲಿಸುವ ಯೋಚನೆಯನ್ನು ಜನರು ಹೆಚ್ಚು ಸ್ವಾಗತಿಸಬೇಕು.

ನೆನಪಿಡಿ:– ನೀವು ಒಂದು ಸಲ ಮಾಡುವ ರಕ್ತ ದಾನ ಮೂರು ಜನರ ಪ್ರಾಣ ಉಳಿಸುತ್ತದೆ. ನೀವು ಕೊಟ್ಟ ೧ ಬಾಟಲ್ ರಕ್ತವನ್ನು ರಕ್ತ ಬೇರ್ಪಡಿಸುವ ಘಟಕದಿಂದ ಕೆಂಪು ರಕ್ತ, (packed cell). ಹಳದಿ ರಕ್ತ (plasma) ಮತ್ತು ಬಿಳಿ ರಕ್ತ (platelets)ಗಳಾಗಿ ವಿಂಗಡಿಸಿ ಇಡಲಾಗುತ್ತದೆ. ಬೇಡಿಕೆಗೆ ಅನುಗುಣವಾಗಿ ಅವನ್ನು ರೋಗಿಗಳಿಗೆ ನೀಡಲಾಗುತ್ತದೆ. ●

### ವೈದ್ಯ ಲೋಕದ ವಿಸ್ಮಯಗಳು

# ಅಪರೂಪದ, ಅಲಕ್ಷಿತ ಹಾಗೂ ಅನಾಥ ರೋಗಗಳ ಲೋಕ



**ಡಾ. ನಾ. ಸೋಮೇಶ್ವರ**
ವಿಭಾಗೀಯ ಸಂಪಾದಕರು
ಮತ್ತು ಲೇಖಕರು

ಒಬ್ಬ ವೈದ್ಯನು ನಿರಂತರವಾಗಿ ೪೦ ವರ್ಷಗಳ ವೈದ್ಯಕೀಯ ವೃತ್ತಿಯಲ್ಲಿ ತೊಡಗಿದ್ದರೂ ಸಹ, ಒಂದೇ ಒಂದೇ ರೋಗಪ್ರಕರಣವು ಅವನ ಅನುಭವಕ್ಕೆ ಬರದಿರುವ ರೋಗಗಳೇ ಅಪರೂಪದ ರೋಗಗಳು, ಅಲಕ್ಷಿತ ರೋಗಗಳು ಹಾಗೂ ಅನಾಥ ರೋಗಗಳು. ಈ ಮೂರೂ ವರ್ಗದ ರೋಗಗಳು ಪರಸ್ಪರ ಸಂಬಂಧಿತವಾಗಿದ್ದರೂ ಸಹ ಕೆಲವು ತಾಂತ್ರಿಕ ಕಾರಣಗಳಿಗಾಗಿ ವಿಭಿನ್ನ ವ್ಯಾಖ್ಯೆಯನ್ನು ಪಡೆದಿವೆ. ಪ್ರತಿವರ್ಷ ಫೆಬ್ರವರಿ ೨೮ ಅಥವ ೨೯ ರಂದು 'ಅಂತಾರಾಷ್ಟ್ರೀಯ ಅಪರೂಪ ರೋಗಗಳ ದಿನಾಚರಣೆ'ಯು ನಡೆಯುತ್ತದೆ. ಈ ವರ್ಷ ಫೆಬ್ರವರಿ ೨೮ರಂದು ನಡೆಯಲಿರುವ ಈ ದಿನಾಚರಣೆಯ ಅಂಗವಾಗಿ ಈ ರೋಗಗಳ ಪ್ರಾಥಮಿಕ ಪರಿಚಯವನ್ನು ಮಾಡಿಕೊಡುವುದು ಈ ಲೇಖನದ ಉದ್ದೇಶ.

**ವರ್ಗೀಕರಣ:** ಅಪರೂಪದ ರೋಗಗಳು (ರೇರ್ ಡಿಸೀಸಸ್) ಅಲಕ್ಷಿತ ರೋಗಗಳು (ನೆಗ್ಲೆಕ್ಟೆಡ್ ಡಿಸೀಸಸ್) ಹಾಗೂ ಅನಾಥ ರೋಗಗಳು (ಆರ್ಫನ್ಸ್ ಡಿಸೀಸಸ್) ಎಂಬ ಮೂರು ವರ್ಗೀಕರಣವನ್ನು ಪ್ರಸ್ತಾಪಿಸಿದೆ. ವಾಸ್ತವದಲ್ಲಿ ಇವೆಲ್ಲ ಮೂರು ವಿಭಿನ್ನ ರೋಗಗಳೇನೂ ಅಲ್ಲ. ಆದರೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಹಿನ್ನೆಲೆಯಲ್ಲಿ ಈ ವರ್ಗೀಕರಣವನ್ನು ಮಾಡಲಾಗಿದೆ. ಹಾಗಾಗಿ ಈ ಮೂರೂ ವರ್ಗದ ರೋಗಗಳ ವ್ಯಾಖ್ಯೆಯನ್ನು ಮೊದಲು ತಿಳಿದುಕೊಳ್ಳೋಣ.



ಗಾಷರ್ಸ್ ಡಿಸೀಸ್

- ಅಪರೂಪದ ರೋಗಗಳು: ಅಪರೂಪದ ರೋಗಗಳನ್ನು ಸಂಖ್ಯಾಶಾಸ್ತ್ರೀಯವಾಗಿ (ಸ್ಟಾಟಿಸ್ಟಿಕಲಿ) ನಿರ್ಧರಿಸುವರು. ಒಂದು ಸಮುದಾಯದಲ್ಲಿ ನಿರ್ದಿಷ್ಟ ರೋಗಗಳ ಪ್ರಮಾಣವು ಸೀಮಿತ ಪ್ರಮಾಣದಲ್ಲಿ ಇರುವುದೇ ಈ ವರ್ಗ ರೋಗಗಳ ಪ್ರಮುಖ ಲಕ್ಷಣ.
- ಅಲಕ್ಷಿತ ಅಥವ ನಿರ್ಲಕ್ಷಿತ ರೋಗಗಳು: ಎಂದರೆ, ಸೀಮಿತ ಪ್ರಮಾಣದಲ್ಲಿ, ವಿಶೇಷತಃ ಬಡವರನ್ನೇ ಕಾಡುವ ರೋಗಗಳು. ರಾಜಕಾರಣಿಗಳಿಗೆ 'ವೋಟ್ ಬ್ಯಾಂಕ್' ಆಗಲಾರದ ಬಡಪಾಯಿಗಳು.
- ಅನಾಥ ಕಾಯಿಲೆಗಳು: ಎನ್ನುವುದು ಒಂದು ಆರ್ಥಿಕ ಪದ. ಈ ಕಾಯಿಲೆಗೆ ಸಂಬಂಧಿಸಿದ ಸಂಶೋಧನೆಯನ್ನು ಮಾಡುವುದು, ಔಷಧವನ್ನು ರೂಪಿಸುವುದು ಇಲ್ಲವೇ ಚಿಕಿತ್ಸೆಯನ್ನು ನೀಡುವುದು ಲಾಭದಾಯಕವಲ್ಲ. ಹಾಗಾಗಿ ನಾನಾ ಕಾಯಿಲೆಗಳು ಕಣ್ಣ ಮುಂದೆ ಇದ್ದರೂ ಸಹ ಸರ್ಕಾರವಾಗಲಿ ಅಥವ ಖಾಸಗಿಯವರಾಗಲಿ ಇಂತಹ ರೋಗಗಳ ತಂಟೆಗೇ ಹೋಗುವುದಿಲ್ಲ.

ನಾವು ನಮ್ಮ ನಮ್ಮ ಅನುಕೂಲಕ್ಕೆ, ಈ ರೋಗಗಳನ್ನು ಮೂರು ರೀತಿಯಲ್ಲಿ ವರ್ಗೀಕರಿಸಿಕೊಂಡಿದ್ದರೂ ಸಹ, ವೈಜ್ಞಾನಿಕವಾಗಿ ಹಾಗೂ ವೈದ್ಯಕೀಯವಾಗಿ ಈ ಮೂರೂ ವರ್ಗಗಳ ರೋಗಗಳು ಸಾಕಷ್ಟು ಸಮಾನ ಅಂಶಗಳನ್ನು ಒಳಗೊಂಡಿದೆ. ಹಾಗಾಗಿ ಲೇಖನದಲ್ಲಿ ಅಪರೂಪದ ರೋಗಗಳು ಎಂದರೆ, ಅದರ ಜೊತೆಯಲ್ಲಿ



ಡ್ಯೂಷೆನ್ ಮಸ್ಕ್ಯುಲರ್ ಡಿಸ್‌ಟ್ರೋಫಿ

ಅಲಕ್ಷಿತ ಹಾಗೂ ಅನಾಥ ರೋಗಗಳನ್ನೂ ಪರಿಗಣಿಸಬೇಕಾಗಿ ಪ್ರಾರ್ಥನೆ.

**ಹೇಗೆ ಬರುತ್ತವೆ?:** ನಮ್ಮ ದೇಹದಲ್ಲಿ ೨೩ ಜೊತೆ ವರ್ಣತಂತುಗಳು ಅಥವ ಕ್ರೋಮೋಸೋಮುಗಳಿವೆ. ಅವುಗಳಲ್ಲಿ ೨೦,೦೦೦–೨೧,೦೦೦ ವಂಶವಾಹಿಗಳು ಜಾಗೃತವಾಗಿದ್ದು ನಮ್ಮ ಹುಟ್ಟು, ಬದುಕು ಹಾಗೂ ಸಾವಿಗೆ ಕಾರಣವಾಗುತ್ತದೆ. ಇಷ್ಟು ವಂಶವಾಹಿಗಳಲ್ಲಿ ೩.೧+೩.೧=೬.೨ ಬಿಲಿಯನ್ ಬೇಸ್ ಪೇರ್ ಡಿ.ಎನ್.ಎ ಇರುತ್ತವೆ. ಮೈಟೋಕಾಂಡ್ರಿಯದಲ್ಲಿ ಸುಮಾರು ೩೭ ವಂಶವಾಹಿಗಳಿದ್ದು, ಅವುಗಳಲ್ಲಿ ಸುಮಾರು ೧೬,೫೬೯ ಡಿ.ಎನ್.ಎ ಬೇಸ್ ಪೇರ್‌ಗಳಿವೆ. ಬೀಜೀಯ ಡಿ.ಎನ್.ಎ ನಾವು ಯಾರು ಎನ್ನುವುದನ್ನು ನಿರ್ಧರಿಸಿದರೆ, ಮೈಟೋಕಾಂಡ್ರಿಯ ಡಿ.ಎನ್.ಎ ನಾವು ಬದುಕಲು ಅಗತ್ಯವಾದ ಎಲ್ಲ ಕೆಲಸ ಕಾರ್ಯಗಳನ್ನು ಕ್ಲುಪ್ತವಾಗಿ ಮಾಡಬಲ್ಲವೇ ಎಂದು ನಿರ್ಧರಿಸುತ್ತವೆ. ಹಾಗಾಗಿ ಹುಟ್ಟುವ ಸಂತಾನದಲ್ಲಿ ಎರಡೂ ರೀತಿಯ ಡಿ.ಎನ್.ಎಗಳು ಆರೋಗ್ಯವಾಗಿರಬೇಕು.

ಡಿ.ಎನ್.ಎಗಳು ಪಾಲಕರಿಂದ ಸಂತಾನಕ್ಕೆ ಹರಿದು ಬರಬೇಕಾದರೆ ಎಲ್ಲ ೬.೨ ಬಿಲಿಯನ್ ಬೇಸ್‌ಪೇರ್ ಮೂಲರೂಪದಲ್ಲಿ ಹರಿದುಬರಬೇಕು. ಒಂದು ಬೇಸ್‌ಪೇರ್ ವಿರೂಪಗೊಂಡರೆ, ಅದು ಒಂದು ಕಾಯಿಲೆಗೆ ಕಾರಣವಾಗಬಹುದು. ನಮ್ಮ ಬದುಕಿಗೆ ಅಗತ್ಯವಾದ ಕಿಣ್ವಗಳು (ಎನ್‌ಜೈಮ್) ಉತ್ಪಾದನೆಯಾಗದಿರಬಹುದು. ದೇಹ ರಚನೆಗೆ ಅಗತ್ಯವಾದ ಪ್ರೋಟೀನ್ ತಯಾರಾಗದೇ ಹೋಗಬಹುದು. ದೈನಂದಿನ ಬದುಕಿಗೆ ಅಗತ್ಯವಾದ ಅನೇಕ ರಾಸಾಯನಿಕ ಸೂಚನಾ ಪಥಗಳು (ಸಿಗ್ನಲಿಂಗ್ ಪಾಥ್ವೇ) ವಿರೂಪಗೊಳ್ಳಬಹುದು. ಈ ವಿರೂಪಗಳು ಸ್ವಯಂವಿನಾಶಕ ರೋಗಗಳಿಗೆ (ಆಟೋಇಮ್ಯೂನ್ ಡಿಸೀಸ್) ಜೈವಿಕ ರೋಗಗಳಿಗೆ (ಮೆಟಬಾಲಿಕ್ ಡಿಸೀಸ್) ಸೋಂಕು ರೋಗಗಳಿಗೆ ಕಾರಣವಾಗಬಹುದು. ಕೆಲವು ವೈಪರೀತ್ಯಗಳು ತಮ್ಮ ಗುಟ್ಟನ್ನು ಇನ್ನೂ ಪೂರ್ಣ ಬಿಟ್ಟುಕೊಟ್ಟಿಲ್ಲ. ಇವೆಲ್ಲವೂ ಅಪರೂಪದ ರೋಗಗಳಿಗೆ ಕಾರಣವಾಗುತ್ತವೆ. ಇವುಗಳಲ್ಲಿ ಕೆಲವು ಆನುವಂಶಿಕವಾಗಿ ಹರಿದು ಬಂದರೆ, ಹಲವು ವೈಪರೀತ್ಯಗಳು ಆನುವಂಶಿಕವಾಗಿ ಹರಿದು ಬರದಿರಬಹುದು.

**ಸಂಖ್ಯೆ:** ಇಡೀ ಜಗತ್ತಿನಲ್ಲಿ ಸುಮಾರು ೭೦೦೦ ಅಪರೂಪದ ರೋಗಗಳಿವೆ ಎಂದು ಒಂದು ಅಂದಾಜು. ಆದರೆ ಈ ಸಂಖ್ಯೆ ಅಂತಿಮವಲ್ಲ. ಅಪರೂಪದ ಆರೋಗ್ಯ ಸಮಸ್ಯೆಗಳ ಬಗ್ಗೆ ನಮ್ಮ ತಿಳಿವಳಿಕೆ ತೀರಾ ಸೀಮಿತ. ಹಾಗಾಗಿ ಇಂದಿಗೂ ಸಹ ಹೊಸ ಹೊಸ ರೋಗಗಳನ್ನು ಪತ್ತೆಹಚ್ಚುವ ಕೆಲಸವು, ಆಮೆಯ ವೇಗದಲ್ಲಾದರೂ ಸರಿ, ನಡೆಯುತ್ತಿದೆ ಎನ್ನುವುದು ಸಮಾಧಾನಕರ ವಿಚಾರ. ಭಾರತದಲ್ಲಿ ೪೫೦–೫೦೦ ಅಪರೂಪದ ರೋಗಗಳು ಇವೆ ಎನ್ನಲಾಗಿದೆ. ಇದು ವಾಸ್ತವ ಸಂಖ್ಯೆಯಲ್ಲ. ತಳೀಯವಾಗಿ (ಜೆನೆಟಿಕಲಿ) ಹಾಗೂ ಪ್ರಾಯೋಗಿಕವಾಗಿ (ಕ್ಲಿನಿಕಲಿ) ಎಲ್ಲ ಅಪರೂಪದ ಕಾಯಿಲೆಗಳನ್ನು ಗುರುತಿಸುವ ಅನುಕೂಲಗಳು ನಮ್ಮ ದೇಶದಲ್ಲಿ ತೀರಾ ಸೀಮಿತವಾಗಿದೆ. ಹಾಗಾಗಿ 'ಮಿದುಳು ಅರಿಯದ್ದನ್ನು ಕಣ್ಣು ಗುರುತಿಸಲಾರದು' (ಐಸ್ ಕ್ಯಾನಾಟ್ ಸೀ ವಾಟ್ ದಿ ಮೈಂಡ್ ಡಸ್‌ಂಟ್ ನೋ – ದಿ.ಎಚ್.ಲಾರೆನ್ಸ್, ಲೇಡಿ ಚಾಟರ್ಲೀಸ್ ಲವರ್) ಎಂಬ ವೈದ್ಯಕೀಯ ನಾಣ್ನುಡಿಯಂತೆ ನಮ್ಮ ಕಣ್ಣಮುಂದೆಯೇ ಅನೇಕ ಪ್ರಕರಣಗಳು ಇದ್ದರೂ ಅವನ್ನು ನಿಖರವಾಗಿ ಗುರುತಿಸಲಾರದಾಗಿದ್ದೇವೆ.



ಪಾಂಪೆ ಕಾಯಿಲೆ

**ನಾಮ ನಿರ್ಧಾರ:** ಒಂದು ಕಾಯಿಲೆಯನ್ನು ಅಪರೂಪದ ಕಾಯಿಲೆ ಎಂದು ನಿರ್ಧರಿಸಬೇಕಾದರೆ ಅದರ ಪ್ರಮುಖ ಲಕ್ಷಣವೇನು ಎನ್ನುವ ಪ್ರಶ್ನೆಯು ಮನಸ್ಸಿನಲ್ಲಿ ಹುಟ್ಟುತ್ತದೆ. ಕೆಲವು ದೇಶಗಳಲ್ಲಿ ಅಸ್ತಿತ್ವದಲ್ಲಿರುವ ನಿಯಮಗಳನ್ನು ಗಮನಿಸೋಣ.

**ಅಮೆರಿಕ:** ಅಮೆರಿಕ ದೇಶದ ಒಟ್ಟಾರೆ ಜನಸಂಖ್ಯೆಯಲ್ಲಿ, ಒಂದು ಕಾಯಿಲೆಯು ೨,೦೦,೦೦೦ಕ್ಕಿಂತ ಕಡಿಮೆ ಜನರನ್ನು ಕಾಡುತ್ತಿದ್ದರೆ, ಅದು ಅಪರೂಪದ ಕಾಯಿಲೆ ಎಂದು ಅನಿಸಿಕೊಳ್ಳುತ್ತದೆ. ಆರ್ಫನ್ ಡ್ರಗ್ ಆಕ್ಟ್ (೧೯೮೩) ಅನ್ವಯ ಈ ಸಂಖ್ಯೆಯು ನಿರ್ದಿಷ್ಟವಾದದ್ದು. ಎಂದಿಗೂ ಬದಲಾಗದು. ಅಮೆರಿಕದ ಜನಸಂಖ್ಯೆ ೩೩೦ ದಶಲಕ್ಷ ಎಂದು ಭಾವಿಸಿದರೆ, ಒಂದು ಕಾಯಿಲೆಯು ೧೬೫೦ ಜನರಲ್ಲಿ ಒಬ್ಬರಿಗೆ ಮಾತ್ರ ಬರುತ್ತಿದ್ದರೆ ಅದು ಅಪರೂಪದ ಕಾಯಿಲೆ ಎಂದು ಅನಿಸಿಕೊಳ್ಳುತ್ತದೆ.

| ಸಂ | ಕನ್ನಡ ಹೆಸರು | ಇಂಗ್ಲಿಷ್ ಹೆಸರು | ಜನಸಂಖ್ಯೆ | ಪೀಡಿತರ ಪ್ರಮಾಣ |
|---|---|---|---|---|
| ೧ | ಸ್ನಾಯು ನ್ಯೂನಪೋಷಣಾ ಪಾರ್ಶ್ವನರ ಪೆಡಸಣೆಯ ಬೇನೆ | ಏಮಯೋಪಿಕ್ ಲ್ಯಾಟರಲ್ ಸ್ಕ್ಲೀರೋಸಿಸ್ | ೧೧,೦೦೦ | ೧ |
| ೨ | ಗಾಷರ್ ಕಾಯಿಲೆ | ಗಾಷರ್ ಡಿಸೀಸ್ | ೨೨,೦೦೦ | ೧ |
| ೩ | ಬಾಲಮುಪ್ಪು | ಪ್ರೋಜೀರಿಯ | ೬,೬೦,೦೦೦ | ೧ |

**ಬ್ರಿಟನ್:** ಒಂದು ಕಾಯಿಲೆಯು ೨೦೦೦ ಜನರಲ್ಲಿ ಒಬ್ಬರನ್ನು ಕಾಡುತ್ತಿದ್ದರೆ, ಅದು ಅಪರೂಪದ ಕಾಯಿಲೆ ಎಂದೆನಿಸಿಕೊಳ್ಳುತ್ತದೆ. ಅತ್ಯಪರೂಪದ ಕಾಯಿಲೆ (ಅಲ್ಟ್ರಾ-ರೇರ್ ಡಿಸೀಸ್) ಎಂದು ಕರೆಯಬೇಕಾದರೆ, ಆ ಕಾಯಿಲೆಯು ೫೦,೦೦೦ ಜನಸಾಮಾನ್ಯರಲ್ಲಿ ಒಬ್ಬರನ್ನು ಮಾತ್ರ ಕಾಡುತ್ತಿರಬೇಕು.

| ಸಂ | ಕನ್ನಡ ಹೆಸರು | ಇಂಗ್ಲಿಷ್ ಹೆಸರು | ಜನಸಂಖ್ಯೆ | ಪೀಡಿತರ ಪ್ರಮಾಣ |
|---|---|---|---|---|
| ೧ | ಹಂಟಿಂಗ್ಟನ್ನನ ಕಾಯಿಲೆ | ಹಂಟಿಂಗ್ಟನ್ಸ್ ಡಿಸೀಸ್ | ೧೦,೦೦೦ | ೧ |
| ೨ | ಪಾಂಪೆ ಕಾಯಿಲೆ | ಪಾಂಪೆ ಡಿಸೀಸ್ | ೪೦,೦೦೦ | ೧ |
| ೩ | ನೀರ್ಚೀಲ ನಾರುಗಟ್ಟುವಿಕೆ | ಸಿಸ್ಟಿಕ್ ಫೈಬ್ರೋಸಿಸ್ | ೨೫೦೦ | ೧ |
| ೪ | ಬಾಲಮುಪ್ಪು | ಪ್ರೋಜೀರಿಯ | ಅತ್ಯಪರೂಪ | |

**ಯೂರೋಪಿಯನ್ ಒಕ್ಕೂಟ:** ೧೦,೦೦೦ ಜನರಲ್ಲಿ ಐವರಿಗೆ ಒಂದು ಕಾಯಿಲೆ ಬರುತ್ತಿದ್ದರೆ, ಅದು ಅಪರೂಪದ ಕಾಯಿಲೆ ಎಂದನಿಸಿಕೊಳ್ಳುತ್ತದೆ. ಅಂದರೆ ೨೦೦೦ ಜನರಲ್ಲಿ ಒಬ್ಬರಿಗೆ ಒಂದು ಕಾಯಿಲೆ ಬರುತ್ತಿದ್ದರೆ, ಅದು ಅಪರೂಪದ ಕಾಯಿಲೆಗಳ ವ್ಯಾಪ್ತಿಗೆ ಬರುತ್ತದೆ. ಈ ವ್ಯಾಖ್ಯೆಯನ್ನು ಯೂರೋಪಿಯನ್ ಮೆಡಿಸಿನ್ಸ್ ಏಜೆನ್ಸಿ (ಇಎಂಎ) ಆರ್ಫನ್ ಡ್ರಗ್ ಡೆಸಿಗ್ನೇಶನ್ ಫ್ರೇಮ್ ವರ್ಕ್ಸ್ ಸಂಸ್ಥೆಗಳು ಪರಿಪಾಲಿಸುತ್ತವೆ. ೪೫೦ ದಶಲಕ್ಷ ಜನರು ವಾಸಿಸುತ್ತಿರುವ ಯೂರೋಪಿಯನ್ ಒಕ್ಕೂಟ ದೇಶಗಳಲ್ಲಿ ಸುಮಾರು ೨,೦೦,೦೦೦ ಜನರು ಅಪರೂಪದ ಕಾಯಿಲೆಗಳಿಂದ ನರಳುತ್ತಿದ್ದಾರೆ ಎನ್ನಬಹುದು.

| ಸಂ | ಕನ್ನಡ ಹೆಸರು | ಇಂಗ್ಲಿಷ್ ಹೆಸರು | ಜನಸಂಖ್ಯೆ | ಪೀಡಿತರ ಪ್ರಮಾಣ |
|---|---|---|---|---|
| ೧ | ಮಿದುಳುಬಳ್ಳಿಯ ಸ್ನಾಯು ಕ್ಷಯ | (ಸ್ಪೈನಲ್ ಮಸ್ಕ್ಯುಲರ್ ಡಿಸ್ಟ್ರೋಫಿ) | ೧೦,೦೦೦ | ೧ |
| ೨ | ಫ್ಯಾಬ್ರಿ ಕಾಯಿಲೆ | ಫ್ಯಾಬ್ರಿ ಡಿಸೀಸ್ | ೪೦,೦೦೦ | ೧ |

| | | | | |
|---|---|---|---|---|
| ೩ | ಮೂಳೆಶರ್ಕರ ಬೇನೆ–ನಮೂನೆ ೨ | ಮ್ಯೂಕೋಪಾಲಿಸ್ಯಾಕರೈಡೋಸಿಸ್–ಟೈಪ್ ೨ | ೧,೦೦,೦೦೦ | ೧ |
| ೪ | ಆಲ್ಕ್ಯಾಪ್ಟಾನ್ ಮೂತ್ರ | ಆಲ್ಕ್ಯಾಪ್ಟೋನ್ಯೂರಿಯ | ೨,೫೦,೦೦೦ | ೧ |

**ಭಾರತ:** ಅಪರೂಪದ ರೋಗಗಳಿಗೆ ಸಂಬಂಧಪಟ್ಟ ಭಾರತದಲ್ಲಿ ನಿರ್ದಿಷ್ಟವಾದ ಕಾನೂನುಗಳಿಲ್ಲ. ಆದರೆ ಅಪರೂಪದ ರೋಗಗಳ ರಾಷ್ಟ್ರೀಯ ಕಾರ್ಯನೀತಿ–೨೦೨೧ (ನ್ಯಾಶನಲ್ ಪಾಲಿಸಿ ಫಾರ್ ರೇರ್ ಡಿಸೀಸಸ್–೨೦೨೧) ಮಾರ್ಗದರ್ಶನವು ಒಂದು ಕಾಯಿಲೆಯು ೧೦,೦೦೦ ಜನರಲ್ಲಿ ಒಬ್ಬರಿಗೆ ಕಂಡು ಬರುತ್ತಿದ್ದರೆ, ಅದನ್ನು ಅಪರೂಪದ ರೋಗವೆಂದು ಪರಿಗಣಿಸುತ್ತದೆ. ಒಂದು ಕಾಯಿಲೆಯು ೫,೦೦೦ ಜನರಲ್ಲಿ ಒಬ್ಬರಿಗೆ ಕಂಡು ಬರುತ್ತಿದ್ದರೆ, ಅದನ್ನು ಆದ್ಯತೆಯ ಮೇರೆಗೆ ಪರಿಗಣಿಸುತ್ತದೆ.

ಭಾರತದಂತಹ ಅಭಿವೃದ್ಧಿಶೀಲ ದೇಶವು ಒಂದು ನಿರ್ದಿಷ್ಟ ವ್ಯಾಖ್ಯೆಯನ್ನು ರೂಪಿಸಲು ಅಸಮರ್ಥವಾಗಿದೆಯೇ ಎಂಬ ಪ್ರಶ್ನೆಯು ನಮ್ಮ ಮನಸ್ಸಿನಲ್ಲಿ ಹುಟ್ಟುತ್ತದೆ. ಇದಕ್ಕೆ ಕಾರಣವಿಷ್ಟೇ. ನಮ್ಮ ವಿಶಾಲ ದೇಶ. ಜಗತ್ತಿನಲ್ಲಿ ಅತ್ಯಂತ ಹೆಚ್ಚಿನ ಜನರಿರುವ ದೇಶ. ವಿವಿಧ ಜನಾಂಗಗಳ, ಬುಡಕಟ್ಟಿನ, ವೈವಿಧ್ಯಮಯ ತಳಿಮೂಲಗಳ ಜನರು ವಾಸಿಸುವ ದೇಶ. ಹಾಗಾಗಿ ಇಡೀ ಜನಸಂಖ್ಯೆಯು ಸಮೀಕ್ಷೆ ಸಧ್ಯಕ್ಕೆ ಕಷ್ಟ. ಆದರೆ ಸಧ್ಯಕ್ಕೆ ಸರ್ಕಾರವು ಒಪ್ಪಿರುವ ೧೦,೦೦೦ ಜನರಲ್ಲಿ ಒಬ್ಬರು ಎಂಬ ಮಾಹಿತಿಯನ್ನು ಇಡೀ ದೇಶಕ್ಕೆ ಅನ್ವಯಿಸಿದರೆ, ಕನಿಷ್ಠ ೧,೪೦,೦೦೦ ರೋಗಿಗಳು ರಾಷ್ಟ್ರಾದ್ಯಂತ ಇರಲೇಬೇಕು.

ಭಾರತದಲ್ಲಿ ಯಾಕೆ ಅಪರೂಪದ ರೋಗಗಳ ಪತ್ತೆಯಾಗುತ್ತಿಲ್ಲ ಎಂಬುದಕ್ಕೆ ಕಾರಣಗಳಿವೆ.

೧. ನವಜಾತ ಶಿಶುಗಳ ಸಾರ್ವತ್ರಿಕ ತಪಾಸಣೆಯು ವ್ಯವಸ್ಥಿತವಾಗಿ ನಡೆಯುತ್ತಿಲ್ಲ.
೨. ತಳಿಪರೀಕ್ಷೆಗಳ ಸೀಮಿತ ಸೌಲಭ್ಯ
೩. ಅಧಿಕ ಆರಂಭಿಕ ಶಿಶು ಸಾವಿನ ಪ್ರಮಾಣ
೪. ಸಾಮಾಜಿಕ ಕಳಂಕ
೫. ಹೆಚ್ಚಿನ ಚಿಕಿತ್ಸೆಗೆ ಅನಿರ್ದಿಷ್ಟ ಮಾರ್ಗದರ್ಶನ
೬. ಕಡ್ಡಾಯ ವರದಿಯ ನಿರ್ಬಂಧವಿಲ್ಲದಿರುವಿಕೆ.

ಮೇಲಿನ ಆರು ಅಂಶಗಳ ಹಿನ್ನೆಲೆಯಲ್ಲಿ ನಮ್ಮ ಸಮಾಜದ ಎಷ್ಟು ಜನರಲ್ಲಿ ಒಬ್ಬರಿಗೆ ಅಪರೂಪದ ಕಾಯಿಲೆ ಬರುತ್ತದೆ ಎನ್ನುವುದನ್ನು ಒಂದು ವೈಜ್ಞಾನಿಕ ತರ್ಕದ ಆಧಾರಲ್ಲಿ ಪರಿಗಣಿಸಬೇಕೇ ಹೊರತು, ನಿರ್ದಿಷ್ಟ ಅಂಕೆ ಸಂಖ್ಯೆಗಳನ್ನು ಆಧರಿಸಿ ಅಲ್ಲ. ಈ ಸತ್ಯದ ಹಿನ್ನೆಲೆಯಲ್ಲಿ ಕೆಲವು ಕಾಯಿಲೆಗಳನ್ನು ಪರಿಗಣಿಸೋಣ.

| ಸಂ | ಕನ್ನಡ ಹೆಸರು | ಇಂಗ್ಲಿಷ್ ಹೆಸರು | ಜನಸಂಖ್ಯೆ | ಪೀಡಿತರ ಪ್ರಮಾಣ |
|---|---|---|---|---|
| ೧ | ಮಿದುಳುಬಳ್ಳಿಯ ಸ್ನಾಯು ನಮೆಯುವಿಕೆ | ಸ್ಪೈನಲ್ ಮಸ್ಕ್ಯುಲಾರ್ ಅಟ್ರೋಫಿ | ೮,೦೦೦ – ೧೦,೦೦೦ | ೧ |
| ೨ | ಪ್ರಧಾನ ಥಲಸ್ಸೀಮಿಯ | ಥಲಸ್ಸೀಮಿಯ ಮೇಜರ್ | ೨೫೦೦ – ೩೦೦೦ | ೧ |
| ೩ | ಕುಡಲ್ಕಣ ಕಾಯಿಲೆ | ಸಿಕಲ್ ಸೆಲ್ ಅನೀಮಿಯ | ಕೆಲವು ಬುಡಕಟ್ಟುಗಳಲ್ಲಿ ೪೦% | |
| ೪ | ಗಾಷರ್ ಕಾಯಿಲೆ | ಗಾಷರ್ ಡಿಸೀಸ್ | ೪೦,೦೦೦ – ೬೦,೦೦೦ | ೧ |

| | | | | |
|---|---|---|---|---|
| ೫ | ಪಾಂಪೆ ಕಾಯಿಲೆ | ಪಾಂಪೆ ಡಿಸೀಸ್ | ೪೦,೦೦೦ | ೧ |
| ೬ | ಮೂಳೆಶರ್ಕರ ಬೇನೆ (ನಮೂನೆ ೧, ೨ ಮತ್ತು ೪) | ಮ್ಯೂಕೋಪಾಲಿ ಸ್ಯಾಕರಿಡೋಸಿಸ್ – ಟೈಪ್ ೧, ೨ ಮತ್ತು ೪ | ೨೦,೦೦೦–೨೫,೦೦೦ | ೧ |
| ೭ | ಕುಸುಮರೋಗ ಎ ಮತ್ತು ಬಿ | ಹೀಮೋಫೀಲಿಯ ಎ ಅಂಡ್ ಬಿ | ೫೦೦೦ | ೧ |
| ೮ | ಡ್ಯೂಶೆನ್ ಸ್ನಾಯು ನ್ಯೂನ ಪೋಷಣೆ | ಡ್ಯೂಷೆನ್ ಮಸ್ಕ್ಯುಲಾರ್ ಡಿಸ್ಟ್ರೋಫಿ | ३೫೦೦–೫೦೦೦ | ೧ |
| ೯ | ಫೀನೈಲ್‌ಕೀಟೋನ್ ಮೂತ್ರ | ಫೀನೈಲ್‌ಕೀಟೋನ್ಯೂರಿಯ | ೧೦,೦೦೦–೧೫,೦೦೦ | ೧ |
| ೧೦ | ಜನ್ಮದತ್ತ ಅಡ್ರಿನಲ್ ಅತಿವೃದ್ಧಿ | ಕಂಜೆನೈಟಲ್ ಆಡ್ರಿನಲ್ ಹೈಪರ್‌ಪ್ಲಾಸಿಯ | ೧೦,೦೦೦–೧೫,೦೦೦ | ೧ |
| ೧೧ | ಪ್ರಾಥಮಿಕ ರೋಗನಿರೋಧಕ ಕೊರತೆಯ ವೈಪರೀತ್ಯಗಳು | ಪ್ರೈಮರಿ ಇಮ್ಯುನೋಡೆಫಿಶಿಯನ್ಸ್ ಡಿಸಾರ್ಡರ್ಸ್ | ೫,೦೦೦–೧೦,೦೦೦ | ೧ |
| ೧೨ | ವಿಲ್ಸನ್ಸ್ ಕಾಯಿಲೆ | ವಿಲ್ಸನ್ಸ್ ಡಿಸೀಸ್ | ३೦,೦೦೦ | ೧ |
| ೧३ | ಬಣ್ಣಭರಿತ ಅಕ್ಷಿಪಟಲುರಿಯೂತ | ರೆಟಿನೈಟಿಸ್ ಪಿಗ್ಮೆಂಟೋಸ | ३೦೦೦–೪೦೦೦ | ೧ |
| ೧೪ | ಆಲ್ಕ್ಯಾಪ್ಟಾನ್ ಮೂತ್ರ | ಆಲ್ಕ್ಯಾಪ್ಟೋನ್ಯೂರಿಯ | ೨೫೦೦೦೦–೧೦,೦೦,೦೦೦ | ೧ |

**ಉಪಕಾರ:** ಅಪರೂಪದ ರೋಗಗಳು ಎಂದರೆ ಮೂಗು ಮುರಿಯುವವರೇ ಹೆಚ್ಚು. ವೈದ್ಯರಿಗೆ ಅಗತ್ಯ ತಪಾಸಣಾ ಸೌಕರ್ಯಗಳಿಲ್ಲ. ಸಾಕಷ್ಟು ಶುಲ್ಕ ದೊರೆಯುವುದಿಲ್ಲ. ಔಷಧ ಸಂಸ್ಥೆಗಳಿಗೆ ಲಾಭದಾಯಕವಲ್ಲ. ಈ ಕಾಯಿಲೆಗಳು ಬಡವರಿಗೆ ಹೆಚ್ಚು ಕಂಡಬರುವ ಕಾರಣ ಅವರ ವೋಟ್ ಬ್ಯಾಂಕ್ ಹೆಚ್ಚುವುದಿಲ್ಲ. ಆದರೆ ವೈದ್ಯಕೀಯ ವಿಜ್ಞಾನವು ಬೆಳೆಯುವುದಕ್ಕೆ ಅಪರೂಪದ ರೋಗಗಳ ಅಧ್ಯಯನವು ಸಹಕಾರಿಯಾಗಿದೆ.

३ ಬಿಲಿಯನ್ ವಂಶವಾಹಿಗಳಲ್ಲಿ ಒಂದು ವಂಶವಾಹಿಯು ತಪ್ಪಾಗಿ ನಕಲುಗೊಂಡರೆ ಅದು 'ಫೀನೈಲ್ ಕೀಟೋನ್ಯೂರಿಯ' ಎಂಬ ಮಾರಕ ಅಪರೂಪದ ರೋಗಕ್ಕೆ ಕಾರಣವಾಗುತ್ತದೆ. ಈಗ ಅದನ್ನು ನವಜಾತ ಶಿಶುವೈದ್ಯಕೀಯ ತಪಾಸಣೆಗಳಲ್ಲಿ ಪತ್ತೆಹಚ್ಚಬಹುದು. ಸೂಕ್ತ ಪಥ್ಯಾಹಾರದಿಂದ ಆ ಮಗುವು ಬದುಕುಳಿಯಬಹುದು. ಬಾಲಮುಪ್ಪು ಎನ್ನುವ ವಿಶಿಷ್ಟ ಕಾಯಿಲೆಯಲ್ಲಿ ೮ ವರ್ಷದ ಮಗುವಿನ ದೇಹಕ್ಕೆ ೮೦ ವರ್ಷಗಳಾಗಿರುತ್ತದೆ. ಜೀವಕೋಶದಲ್ಲಿ ವೃದ್ಧಾಪ್ಯದ ಲಕ್ಷಣಗಳನ್ನು ನಿರ್ಧರಿಸುವ ಅಂಶಗಳು ಯಾವವು, ಹೇಗೆ ಆರಂಭವಾಗುತ್ತದೆ, ಹೇಗೆ ಮುಂದುವರೆಯುತ್ತವೆ ಹಾಗೂ ಹೇಗೆ ತಡೆಗಟ್ಟಬಹುದು ಎನ್ನುವುದರ ಬಗ್ಗೆ ಆಳವಾದ ನಿರ್ಧರಿಸುವ ಅ ಅಂಶಗಳ ಬಗ್ಗೆ ಸಂಶೋಧನೆಯು ನಡೆದು 'ಜರಾವಿಜ್ಞಾನ' ಎನ್ನುವ ಹೊಸ ವಿಜ್ಞಾನ ಶಾಖೆಯು ಆರಂಭವಾಗಲು ಕಾರಣವಾಗಿದೆ. ಕೊಲೆಸ್ಟೀರಾಲ್ ಉಪಾಪಚಯ (ಕೊಲೆಸ್ಟೀರಾಲ್ ಮೆಟಬಾಲಿಸಂ) ನ್ನು ಅರ್ಥ ಮಾಡಿಕೊಳ್ಳಲು ಈ ಅಪರೂಪದ ಕಾಯಿಲೆಯೇ ಕಾರಣವಾಗಿದೆ. ಅತ್ಯಪರೂಪದ ವಂಶವಾಹಿಜನ್ಯ ಅಧಿಕಕೊಲೆಸ್ಟೀರಾಲ್ ಬೇನೆಯನ್ನು (ರೇರ್ ಫೆಮಿಲಿಯಲ್ ಹೈಪರ್‌ಕೊಲೆಸ್ಟೀರೋಲೀಮಿಯ) ಅಧ್ಯಯನ ಮಾಡಿದ ನಂತರವೇ ಕೊಲೆಸ್ಟೀರಾಲಿನ ರಹಸ್ಯ ಹೊರಬಂದಿತು. ಈ ತಿಳಿವಿನಿಂದ ಕೋಟ್ಯಾಂತರ ಜನರ



ಸಿಸ್ಟಿಕ್ ಫೈಬ್ರೋಸಿಸ್

ಆರೋಗ್ಯವನ್ನು ರಕ್ಷಿಸಲು ಇಂದು ಸಾಧ್ಯವಾಗಿದೆ. ಜನ್ಮದತ್ತ ಥೈರಾಯ್ಡ್ ಅಲ್ಪೋತ್ಪಾದನೆ, ಕುಸುಮರೋಗ, ಮಯಸ್ಥೀನಿಯ ಗ್ರಾವಿಸ್, ಜ಼ೀರೊಡರ್ಮ ಪಿಗ್ಮೆಂಟೊಸ, ವಿಲ್ಸನ್ ಡಿಸೀಸ್, ಸಿಸ್ಟಿಕ್ ಫೈಬ್ರೋಸಿಸ್, ಲಾಂಗ್ ಕ್ಯುಟಿ ಸಿಂಡ್ರೋಮ್ ಇತ್ಯಾದಿ ಕಾಯಿಲೆಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಅಪರೂಪದ ರೋಗಗಳ ಅಧ್ಯಯನವು ಕಾರಣವಾಗಿದೆ.

ನೂರಕ್ಕಿಂತಲೂ ಕಡಿಮೆ: ಕೆಲವು ಅಪರೂಪದ ರೋಗಗಳು ಇಡೀ ಜಗತ್ತಿನ ಜನರಲ್ಲಿ ನೂರಕ್ಕಿಂತ ಕಡಿಮೆ ಜನರನ್ನು ಕಾಡುತ್ತಿರುವುದು ಕಟು ವಾಸ್ತವ. ಕೆಲವು ಉದಾಹರಣೆಗಳನ್ನು ಗಮನಿಸೋಣ.

**೧. ಲೈಸೋಸೋಮಲ್ ಸ್ಟೋರೇಜ್ ಡಿಸಾರ್ಡರ್**

೧. ಮ್ಯುಕೋಲಿಪಿಡೋಸಿಸ್–ಟೈಪ್ ೨: ಜಗತ್ತಿನಾದ್ಯಂತ ೧೦೦ಕ್ಕೂ ಕಡಿಮೆ ಪ್ರಕರಣಗಳು ವರದಿಯಾಗಿವೆ. ಮುಖಲಕ್ಷಣ ಒರಟು. ಸ್ನಾಯು ವೈಪರೀತ್ಯಗಳು. ಬೆಳವಣಿಗೆಯ ವೈಫಲ್ಯ. ಮೇಲುನೋಟಕ್ಕೆ ತೀವ್ರ ಸ್ವರೂಪದ ಜನ್ಮದತ್ತ ಸೋಂಕು ಇಲ್ಲವೇ ನಿರ್ನಾಳ ಗ್ರಂಥಿಗಳ ವೈಪರೀತ್ಯದಂತೆ ಕಾಣುತ್ತದೆ. ಶೈಶವದಲ್ಲಿ ಸಾಯುತ್ತದೆ.

೨. ಗ್ಯಾಲಕ್ಟೋಸಿಯಾಲೋಡೋಸಿಸ್: ಕೆಲವು ಡಜ಼ನ್ ಪ್ರಕರಣಗಳು ವರದಿಯಾಗಿವೆ. ಲೈಸೋಜೈಮ್ ರಚನೆ ಮತ್ತು ಕಾರ್ಯದಲ್ಲಿ ಕಂಡುಬರುವ ವೈಪರೀತ್ಯಗಳೇ ಕಾರಣ.

೩. ಸಿಯಾಲೋಡೋಸಿಸ್–ಟೈಪ್ ೨: ೫೦ಕ್ಕಿಂತ ಕಡಿಮೆ ಪ್ರಕರಣಗಳು ವರದಿಯಾಗಿವೆ. ನವಜಾತ ಶಿಶುವಿನ ಒಡಲ ಊತ (ಹೈಡ್ರಾಪ್ಸ್ ಫಿಟಾಲಿಸ್) ಅಂದರೆ ಶಿಶುವಿನ ಎರಡು ಭಾಗಗಳಲ್ಲಿ ನೀರು ಸಂಗ್ರಹವಾಗಿರುತ್ತದೆ. ದೈಹಿಕ ವಿರೂಪತೆ (ಡಿಸ್ಮಾರ್ಫಿಸಂ) ಸಾಮಾನ್ಯ. ಬದುಕುವುದಿಲ್ಲ.



ಥಾಲಸೀಮಿಯ ಮೇಜರ್

**೨. ಅತ್ಯಪರೂಪದ ಮೈಟೋಕಾಂಡ್ರಿಯ ಕೋಶದ ಬೇನೆಗಳು (ಅಲ್ಟ್ರಾ ರೇರ್ ಮೈಟೋಕಾಂಡ್ರಿಯಲ್ ಸೈಟೋಪಥೀಸ್):** ನಮ್ಮ ಜೀವಕೊಶದಲ್ಲಿರುವ ಮೈಟೋಕಾಮ್ಡ್ರಿಯ ಎಂಬ ಕಣಾಂಗವು ಜೀವಕೋಶದ ಶಕ್ತಿ ಉತ್ಪಾದನಾ ಕೇಂದ್ರ (ಪವರ್ ಹೌಸ್ ಆಫ್ ದಿ ಸೆಲ್) ಎಂದು ಕರೆಯುವುದುಂಟು. ಮೈಟೋಕಾಮ್ಡ್ರಿಯದಲ್ಲಿರುವ ೧೫೫೬೯ ಡಿ.ಎನ್.ಎಗಳಲ್ಲಿ ಕೆಲವು ವಿರೂಪಗೊಂಡರೆ ಮಗು ಉಳಿಯಲಾರದು. ಆಯಾ ಜೀನ್ / ಡಿ.ಎನ್.ಎ ಸಂಬಂಧಿಸಿದಂತೆ ಈ ಅತ್ಯಪರೂಪದ ಕಾಯಿಲೆಗಳನ್ನು ನಾಮಕರಣ ಮಾಡುವುದುಂಟು.

೧. ಎಂ.ಟಿ.ಪಿ ಎಟಿಪಿ–೬ ರೆಲೇಟೆಡ್ ಲೈ ವೇರಿಯಂಟ್ಸ್: ಜಾಗತಿಕವಾಗಿ ಸುಮಾರು ೨೦ ಪ್ರಕರಣಗಳು ವರದಿಯಾಗಿವೆ. ನರಮಂಡಲ ನಶಿಸುವುದು ಹಾಗೂ ಲ್ಯಾಕ್ಟಿಕ್ ಆಮ್ಲೀಯತೆ (ಲ್ಯಾಕ್ಟಿಕ್ ಅಸಿಡೋಸಿಸ್) ಕಂಡುಬರುತ್ತದೆ.

೨. ಮೈಟೋಕಾಂಡ್ರಿಯಲ್ ಮೆಂಬ್ರೇನ್ ಪ್ರೋಟೀನ್ ಅಸೋಸಿಯೇಟೆಡ್ ನ್ಯೂರೋಡಿಜೆನೆರೇಶನ್ (ಎಂಪಿಎಎನ್) : ಬೆರಳೆಣಿಕೆಯ ಪ್ರಕರಣಗಳು ವರದಿಯಾಗಿವೆ.

೩. ಕಾಕ್ಸ್ ಅಸೆಂಬ್ಲಿ ಫ್ಯಾಕ್ಟರ್ ಡೆಫಿಶಿಯನ್ಸಿ (ಉದಾ: ಕಾಕ್ಸ್೧೦, ಕಾಕ್ಸ್೧೫ ಇತ್ಯಾದಿ); ಜಗತ್ತಿನಾದ್ಯಂತ ೧೦ ಕ್ಕಿಂತ ಕಡಿಮೆ ಪ್ರಕರಣಗಳು. ಮಾರಕ ಶೈಶವ ಮಿದುಳು ಸ್ನಾಯು ಬೇನೆ (ಫೆಟಲ್ ಇನ್‌ಫಂಟೈಲ್ ಎನ್ಸೆಫಲೋಮಯೋಪಥಿ)

**೩. ನಿರ್ದಿಷ್ಟ ಸಂಪರ್ಕ ಮಾರ್ಗ ಬೇನೆಗಳು (ಸ್ಪೆಸಿಫಿಕ್ ಚಾನೆಲೋಪಥೀಸ್) :** ನಿರ್ದಿಷ್ಟ ವಂಶವಾಹಿಯಲ್ಲಿ ತಲೆದೋರುವ ಉತ್ಪರಿವರ್ತನೆಯ ಕಾರಣ ಈ ಅಪರೂಪದ ಕಾಯಿಲೆಗಳು ಕಂಡುಬರುತ್ತವೆ. ಮಿದುಳು, ನರಮಂಡಲ, ಸ್ನಾಯು, ಹೃದಯ ಕರಾರುವಾಕ್ಕಾಗಿ ಕೆಲಸ ಮಾಡಲು ಸೋಡಿಯಂ ಅಯಾನುಗಳು ಸಂಚರಿಸುವ ಅಯಾನು ಮಾರ್ಗ ಯಾವುದೇ ಕಾರಣಕ್ಕೆ ವಿರೂಪಗೊಳ್ಳಬಾರದು. ಇವು ವೈಪರೀತ್ಯಕ್ಕೆ ಒಳಗಾದ


ಎಮಯೋಟ್ರೋಪಿಕ್ ಲ್ಯಾಟರಲ್ ಸ್ಕ್ಲೀರೋಸಿಸ್

ಅಪಸ್ಮಾರ, ಸೆಳವು, ನಾನಾ ರೀತಿಯ ಸ್ನಾಯು ನೋವು, ಸ್ನಾಯುಬಿಗುಪು (ಮಯೋಟೋನಿಯ) ಮತ್ತು ಹೃದಯ ಮಿಡಿತ ವೈಪರೀತ್ಯಗಳು ಸಂಭವಿಸುತ್ತವೆ. ಪೊಟಾಷಿಯಂ ಅಯಾನು, ಕ್ಯಾಲ್ಷಿಯಂ ಅಯಾನು, ಕ್ಲೋರೈಡ್ ಅಯಾನು ಚಾನೆಲ್ಲುಗಳೂ ಸಹ ವಿರೂಪಗೊಳ್ಳಬಲ್ಲವು. ಇವು ಹೃದಯವನ್ನು ಹಠಾತ್ ನಿಲ್ಲಿಸಬಲ್ಲವು. ಒಂದು ನರದ ಕೆಲಸವನ್ನು ಸ್ಥಗಿತ ಮಾಡಬಲ್ಲವು. ಸ್ನಾಯುವನ್ನು ನಿಶ್ಚೇತಗೊಳಿಸಬಲ್ಲವು. ರಾತೋರಾತ್ರಿ ಮಗುವಿನ ಸಾವಿಗೆ ಕಾರಣವಾಗಬಹುದು.

೧. ಆಂಡರ್ಸನ್–ಟವಿಲ್ ಲಕ್ಷಣಾವಳಿ: ಸುಮಾರು ೧೦ ಕುಟುಂಬಗಳಲ್ಲಿ ಕಂಡುಬಂದಿವೆ. ಇದರ ತ್ರಿವಳಿ ಲಕ್ಷಣವೆಂದರೆ ನಿಯಮಿತ ಅವಧಿಗೊಮ್ಮೆ ತಾತ್ಕಾಲಿಕ ಲಕ್ವ ಕಂಡುಬರುತ್ತದೆ. ಮಿಡಿತ ವೈಪರೀತ್ಯ ಸಾಮಾನ್ಯ. ದೈಹಿಕ ವಿರೂಪತೆಯೂ ಇರುತ್ತದೆ.

೨. ಜನ್ಮದತ್ತು ವೇದನಾ ಹೀನತೆ ಮತ್ತು ಬೆವರದಿರುವಿಕೆ (ಕಂಜೆನೈಟಲ್ ಇನ್ ಸೆನ್ಸಿಟಿವಿಟಿ ಟು ಪೇಯ್ನ್ ಅಂಡ್ ಅನ್‌ಹೈಡ್ರೋಸಿಸ್) ಇದು ಕುಟುಂಬದ ಸದಸ್ಯರಲ್ಲಿ ಕಂಡುಬರುತ್ತದೆ.

೩. ಶೈಶವದ ಮಾರಕ ಗುಳೆ ಹೋಗುವ ಭಾಗಶಃ ಸೆಳವು (ಮಾಲಿಗ್ನಂಟ್ ಮೈಗ್ರೇಟಿಂಗ್ ಪಾರ್ಷಿಯಲ್ ಸೀಝರ್ಸ್ ಆಫ್ ಇನ್‌ಫನ್ಸಿ) ನವಜಾತ ಶಿಶುವಿನಲ್ಲಿ ಕಂಡು ಬರುವ ಅತ್ಯಪರೂಪದ ರೋಗ ಬೆರಳೆಣಿಕೆಯ ಮಕ್ಕಳಲ್ಲಿ ಕಂಡುಬರುತ್ತದೆ.

**೪.ಜನ್ಮದತ್ತ ಉಪಾಪಚಯ ವೈಪರೀತ್ಯಗಳು (ಇನ್‌ಬಾರ್ನ್ ಎರರ್ಸ್ ಆಫ್ ಮೆಟಬಾಲಿಸಂ):**

೧. ಮೆಲೋನಿಕ್ ಆಮ್ಲೀಯ ಮೂತ್ರ (ಮೆಲೋನಿಕ್ ಅಸಿಡ್ಯೂರಿಯ): ಜಗತ್ತಿನಲ್ಲಿ ೧೦೦ ಕ್ಕಿಂತಲೂ ಕಡಿಮೆ ಪ್ರಕರಣಗಳು ವರದಿಯಾಗಿವೆ.

**೫.ಅತ್ಯಪರೂಪದ ಸ್ನಾಯು ನ್ಯೂನ ಬೇನೆಗಳು:**

೧. ಮೆಲ್ನಿಕ್ ನೀಡಲ್ ಸಿಂಡ್ರೋಮ್ ಇದುವರೆಗೂ ನೂರಕ್ಕೆ ಕಡಿಮೆ ಪ್ರಕರಣ ವರದಿಯಾಗಿದೆ. ಮುಖ, ಕತ್ತು ಮತ್ತು ಶರೀರವು ವಿಶಿಷ್ಠ ರೀತಿಯಲ್ಲಿ ವಿರೂಪಗೊಂಡ ಸ್ಥಿತಿ. ಗಂಡ ಮಕ್ಕಳಲ್ಲಿ ಮಾರಕ.

೨. ಆಪ್ಸಿಸ್ಮೋಡಿಸ್ಪ್ಲೇಸಿಯ: ವಿಶ್ವದಾದ್ಯಂತ ಸುಮಾರು೫೦ ಪ್ರಕರಣಗಳ ವರದಿ. ಕುಬ್ಜ ಅವಯವಗಳು ಈ ಅವಸ್ಥೆಯ ಪ್ರಮುಖ ಲಕ್ಷಣ.

೩. ಕ್ಯಾಂಪೋಮಿಲಿಚ್ ಡಿಸ್ಪ್ಲಸಿಯ: ಬದುಕುವುದು ಅಸಾಧ್ಯ. ಆದರೆ ಈ ನಮೂನೆಯು ಮನುಷ್ಯನ ಮೂಳೆಗಳಿಗೆ ಸಂಬಂಧಪಟ್ಟ ತಳಿವಿಜ್ಞಾನದ ಅಭಿವೃದ್ದಿಗೆ ಕಾರಣವಾಗಿದೆ ಎನ್ನುವುದು ಸಂತಸದ ವಿಚಾರ.

**೬. ಅತ್ಯಪರೂಪದ ನರನಶಿಸುವ ಬೇನೆಗಳ ಲಕ್ಷಣವಳಿ:** ಕುಫೆರ್ ರೇಕಬ್ ಸಿಂಡ್ರೋಮ್, ಗಾರ್ಡನ್ ಹೋಮ್ ಸಿಂಡ್ರೋಮ್, ಪಿಎಲ್ಎ೨ಜಿ೬ ಇತ್ಯಾದಿ. ಇವು ಆಲ್ಝೈಮರ್ ಅಥವ ಪಾರ್ಕಿನ್ಸನ್ ಕಾಯಿಲೆಯಲ್ಲಿ ಕೊನೆಗೊಳ್ಳುತ್ತವೆ

ಉಪಸಂಹಾರ: ಅಪರೂಪದ ರೋಗಗಳು ನಿಜಕ್ಕೂ ಅಪರೂಪವೇ? ಬಹುಶಃ ಇಲ್ಲ. ನಮಗೆ ಕಾಣುತ್ತಿರುವುದು ಮಂಜುಗಡ್ಡೆಯ ತುದಿ ಮಾತ್ರ.

- ಅಪರೂಪದ ಕಾಯಿಲೆಗಳು ಒಟ್ಟಾರೆಯಾಗಿ ಅಪರೂಪವಲ್ಲ.
- ರೋಗಗಳ ನಿಖರ ತಪಾಸಣೆಗೆ ಅನುಕೂಲತೆಗಳಿಲ್ಲ. ಹಾಗಾಗಿ ತಪ್ಪು ತಪ್ಪು ರೋಗನಿದಾನವನ್ನು ಮಾಡುವುದು ಸರ್ವಸಾಮಾನ್ಯ.
- ವೈದ್ಯರು ತಮ್ಮ ಮೂಲಭೂತ ಕುತೂಹಲವನ್ನು ಉಳಿಸಿಕೊಂಡು ಅಧ್ಯಯನ ಮಾಡಿದರೆ ಜೀವಗಳು ಉಳಿಯಬಲ್ಲವು.
- ಸರ್ಕಾರದ ಆರೋಗ್ಯ ನೀತಿಯೂ ಮುಖ್ಯ. ಸಂಶೋಧನೆಗೆ ಅಗತ್ಯ ಅನುಕೂಲತೆಗಳನ್ನು ರಾಷ್ಟ್ರೀಯ, ರಾಜ್ಯ ಹಾಗೂ ಪ್ರಾಂತೀಯ ಮಟ್ಟದಲ್ಲಿ ಆರಂಭಿಸಬೇಕು.
- ಅಪರೂಪದ ಕಾಯಿಲೆಗಳ ಅಧ್ಯಯನವು ನಾಳಿನ ಅನೇಕ ರೋಗಗಳನ್ನು ಗುಣಪಡಿಸಲು ಇಲ್ಲವೇ ನಿಯಂತ್ರಿಸಲು ಅಗತ್ಯವಾದ ಬೆಳಕನ್ನು ನೀಡಬಲ್ಲುವು.
- ವೈದ್ಯಕೀಯ ಸಂಶೋಧನೆಯು ಆಮೆಗತಿಯಲ್ಲಾದರೂ ಸಾಗಿದರೆ, ಅದು ನಮ್ಮ ಭವಿಷ್ಯದ ಬದುಕನ್ನು ಹಸನಾಗಿಸೀತು.

●

ವೈದ್ಯೇತರ

# ಪ್ರಜ್ಞಾಪೂರ್ವಕ ಬದುಕು – ಜೀವನದ ಸಾರ್ಥಕತೆಗೆ ದಾರಿ



ಡಾ. ಅಮೂಲ್ಯ ಫ. ಯರಗುಪ್ಪಿ
ಜೆಜಿಎಂಎಂಎಂಸಿ, ಹುಬ್ಬಳ್ಳಿ



ಡಾ. ಕಿರಣ ಪೇಟಕರ್
ವಿಭಾಗೀಯ ಸಂಪಾದಕರು

ನಾನು ಬದುಕುತ್ತಿರುವ ಜೀವನ ನಿಜವಾಗಿಯೂ ಉಪಯುಕ್ತವೇ ಎಂಬ ಪ್ರಶ್ನೆ ಕೆಲವೊಮ್ಮೆ ಮನಸ್ಸಿನ ಆಳದಿಂದ ಉದ್ಭವಿಸುತ್ತದೆ. ಇದು ಭಯದಿಂದ ಅಥವಾ ನಿರಾಶೆಯಿಂದ ಹುಟ್ಟಿದ ಸಂಶಯವಲ್ಲ; ಬದಲಾಗಿ ನಾವು ಬದುಕುತ್ತಿರುವ ಸಮಾಜ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಬೇಕೆಂಬ ಆತ್ಮಸಾಕ್ಷಾತ್ಕಾರದ ಪ್ರಯತ್ನ. ಕೆಲ ವಿಜ್ಞಾನಿಗಳು ತಮ್ಮ ಜೀವನವನ್ನೇ ಜ್ಞಾನಕ್ಕಾಗಿ ಅರ್ಪಿಸಿದರೂ, ಪ್ರಕೃತಿಯೊಂದಿಗೆ ಸಮತೋಲನಯುತ ಬದುಕನ್ನು ಸಾಧ್ಯವಾಗಿಸುವ ಪರಿಸರ ಸ್ನೇಹಿ ತಂತ್ರಜ್ಞಾನಗಳ ಮೂಲಕ ಭವಿಷ್ಯದ ದಾರಿಯನ್ನು ರೂಪಿಸುತ್ತಿದ್ದರೂ ಸಮಾಜದಿಂದ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿರುವುದು ಕಂಡಾಗ, ನಮ್ಮ ವ್ಯವಸ್ಥೆಯ ನ್ಯಾಯ ಮತ್ತು ಮೌಲ್ಯಗಳ ಬಗ್ಗೆ ಗಂಭೀರ ಪ್ರಶ್ನೆಗಳು ಎದ್ದುಕೊಳ್ಳುತ್ತವೆ.

ಈ ಸಂದರ್ಭಗಳಲ್ಲಿ ಜೀವನದ ಮೌಲ್ಯವನ್ನು ನಾವು ಹೇಗೆ ಅಳೆಯುತ್ತಿದ್ದೇವೆ ಎಂಬುದು ಸ್ಪಷ್ಟವಾಗುತ್ತದೆ. ಹಣ, ಹುದ್ದೆ, ಅಧಿಕಾರಗಳೇ ಬದುಕಿನ ಅರ್ಥವಾಗಿಬಿಟ್ಟಿವೆಯೇ? ಅಥವಾ ಮಾನವೀಯತೆ, ಕೃತಜ್ಞತೆ ಮತ್ತು ಪ್ರಜ್ಞೆಗೂ ಸ್ಥಾನವಿದೆಯೇ? ಇಂತಹ ಗೊಂದಲಗಳು ನಮ್ಮನ್ನು ಒಳಗೆ ತಿರುಗಿ ನೋಡುವಂತೆ ಮಾಡುತ್ತವೆ. 'ನಮ್ಮಿಂದ ಈ ವ್ಯವಸ್ಥೆಯಲ್ಲಿ ಸುಧಾರಣೆ ಸಾಧ್ಯವೇ?' ಎಂಬ ಪ್ರಶ್ನೆ ತೀವ್ರವಾಗುತ್ತದೆ. ಈ ಪ್ರಶ್ನೆಗೆ ಉತ್ತರ ಹುಡುಕುವಾಗ ಒಂದು ವಿಚಾರ ಸ್ಪಷ್ಟವಾಗಿ ಕಾಣುತ್ತದೆ – ಪ್ರತಿ ವ್ಯಕ್ತಿಯೂ ಪ್ರಜ್ಞಾಪೂರ್ವಕ ಜೀವನವನ್ನು ಅಳವಡಿಸಿಕೊಳ್ಳಬೇಕು.

ಪ್ರಜ್ಞಾಪೂರ್ವಕ ಜೀವನವೆಂದರೆ ಸ್ವಾರ್ಥಕೇಂದ್ರಿತ ಬದುಕಿನಿಂದ ಹೊರಬಂದು, ನಮ್ಮ ಚಿಂತನೆ, ಮಾತು ಮತ್ತು ಕ್ರಿಯೆಗಳ ಪರಿಣಾಮವನ್ನು ಸಮಾಜದ ಮೇಲೂ, ಪ್ರಕೃತಿಯ ಮೇಲೂ ಅರಿತು ಬದುಕುವುದು. ಇದು ತಕ್ಷಣದ ದೊಡ್ಡ ಬದಲಾವಣೆ ತರದಿರಬಹುದು, ಆದರೆ ದೀರ್ಘಾವಧಿಯಲ್ಲಿ ಸಮಾಜದ ಮುಖವನ್ನೇ ಬದಲಾಯಿಸಬಲ್ಲ ಶಕ್ತಿ ಇದಕ್ಕಿದೆ. ಪ್ರತಿಯೊಬ್ಬ ವ್ಯಕ್ತಿಯೊಳಗೆ ಈ ಪ್ರಜ್ಞೆ ಬೆಳೆದರೆ, ವ್ಯವಸ್ಥೆಯೂ ಸಹ ಮಾನವೀಯವಾಗುತ್ತದೆ.

ಇಂದು ನಾವು ಗಳಿಸುವುದು – ಉಳಿಸುವುದು ಎಂಬ ಲೆಕ್ಕಾಚಾರದಲ್ಲೇ ಬದುಕನ್ನು ಸೀಮಿತಗೊಳಿಸಿಕೊಂಡಿದ್ದೇವೆ. ಆದರೆ ಜೀವನದ ಸಾರ್ಥಕತೆ ಅಲ್ಲಿ ಅಂತ್ಯಗೊಳ್ಳುವುದಿಲ್ಲ. ಗಳಿಸುವುದಕ್ಕಿಂತ ಬೆಳೆಸುವ ಮನಸ್ಥಿತಿಗೆ ತಲುಪಿದಾಗ – ಮೌಲ್ಯಗಳನ್ನು, ಸಂಬಂಧಗಳನ್ನು, ಸಹಾನುಭೂತಿಯನ್ನು ಬೆಳೆಸಿದಾಗ – ನಿಜವಾದ ಶ್ರೀಮಂತಿಕೆ ಹುಟ್ಟುತ್ತದೆ. ಇಂತಹ ಮನಸ್ಥಿತಿ ವ್ಯಕ್ತಿಯ ಬದುಕನ್ನಷ್ಟೇ ಅಲ್ಲ, ಸಮಾಜದ ಆತ್ಮವನ್ನೂ ಶ್ರೀಮಂತಗೊಳಿಸುತ್ತದೆ. ಎಲ್ಲರೂ ಪ್ರಜ್ಞಾಪೂರ್ವಕ ಜೀವನ ನಡೆಸಿದರೆ, ದೇವರು ಕೊಟ್ಟ ಈ ಜೀವನ ಎಂಬ ಆಟದಲ್ಲಿ ನಾವು ಗೆದ್ದಂತೆಯೇ. ಆಗ ವಿಜ್ಞಾನಿಗೂ ಗೌರವ, ಸಾಮಾನ್ಯ ವ್ಯಕ್ತಿಗೂ ಮಾನವೀಯ ಬದುಕು ದೊರೆಯುತ್ತದೆ. ವಿಶ್ವದ ಜೀವಿಕುಲವೇ ನಮ್ಮತ್ತ ನೋಡಿ, "ಅಯ್ಯೋ, ಬದುಕಬೇಕೆಂದರೆ ಹೀಗೆ ಬದುಕಬೇಕು – ಮನುಕುಲದಂತೆ" ಎಂದು ಹೇಳುವ ದಿನಗಳು ಖಂಡಿತ ಬರಲಿವೆ.

ಹೀಗಾಗಿ, ನನ್ನ ಜೀವನ ಉಪಯುಕ್ತವೇ ಎಂಬ ಪ್ರಶ್ನೆಗೆ ಉತ್ತರ ಹೊರಗಲ್ಲ; ಅದು ನಮ್ಮೊಳಗಿನ ಪ್ರಜ್ಞೆಯಲ್ಲಿ ಇದೆ. ಪ್ರಜ್ಞಾಪೂರ್ವಕ ಬದುಕನ್ನು ಆಯ್ಕೆ ಮಾಡಿದ ಕ್ಷಣದಿಂದಲೇ ಜೀವನ ಅರ್ಥಪೂರ್ಣವಾಗುತ್ತದೆ, ಉಪಯುಕ್ತವಾಗುತ್ತದೆ, ಮತ್ತು ಮನುಕುಲದ ಭವಿಷ್ಯಕ್ಕೆ ಬೆಳಕಾಗುತ್ತದೆ.

## ಕಾನೂನು ಮತ್ತು ವೈದ್ಯಕೀಯ ವಿಭಾಗ

# ವೈದ್ಯಕೀಯ ಮತ್ತು ಕಾನೂನು



**ಡಾ. ಶಿವರಾಜ್ ಪಾಟೀಲ**
ವಿಭಾಗೀಯ ಸಂಪಾದಕರು ಮತ್ತು ಲೇಖಕರು
ಮಕ್ಕಳ ತಜ್ಞರು ಮತ್ತು ಕಾನೂನು ಅಧ್ಯಯನ ವಿದ್ಯಾರ್ಥಿ, ಸಿಂಧನೂರು

**ಸುಪ್ರೀಂ ಕೋರ್ಟ್ ತೀರ್ಪುಗಳ ಆಧಾರದ ಮೇಲೆ ವೈದ್ಯರ ಮೇಲೆ ಪ್ರಥಮ ಮಾಹಿತಿ ವರದಿ (FIR) ಮತ್ತು ಬಂಧನ ವಾರೆಂಟ್ ಯಾವಾಗ?**

**೧ ಜಕೋಬ್ ಮಾತೆವ್ ಸ್ಟೇಟ್ ಆಫ್ ಪಂಜಾಬ್ ೨೦೨೫**
ವೈದ್ಯರ ಮೇಲಿನ FIR ಮತ್ತು ಅರೆಸ್ಟ್ ಕುರಿತು ಅತ್ಯಂತ ಪ್ರಮುಖ ತೀರ್ಪು. ಸುಪ್ರೀಂ ಕೋರ್ಟ್ ಹೇಳಿದ್ದು. ಪ್ರತಿ ವೈದ್ಯಕೀಯ ವಿಫಲತೆ ಅಪರಾಧವಲ್ಲ. ವೈದ್ಯರ ಮೇಲೆ ಐಪಿಸಿ ೩೦೪ಂ (ನಿರ್ಲಕ್ಷ್ಯದಿಂದ ಮರಣ) ಅಡಿಯಲ್ಲಿ ಕೇಸ್ ಹಾಕಲು ಗಂಭೀರ ಅಪರಾಧಾತ್ಮಕ ನಿರ್ಲಕ್ಷ್ಯ ಇರಬೇಕು. ವೈದ್ಯಕೀಯ ತಜ್ಞರ ಅಭಿಪ್ರಾಯ ಇಲ್ಲದೆ FIR ದಾಖಲು ಮಾಡಬಾರದು ಮತ್ತು ಬಂಧಿಸಬಾರದು. ವೈದ್ಯರ ಬಂಧನವನ್ನು ಸಾಮಾನ್ಯ ಪ್ರಕ್ರಿಯೆಯಂತೆ ಕೈಗೊಳ್ಳಬಾರದು.

**೨ ಮಾರ್ಟಿನ್ ಎಫ್. ಡಿ'ಸೋಜಾ ಮೊಹಮ್ಮದ್ ಇಸ್ಫಾಕು (೨೦೦೯)**
**ಕೋರ್ಟ್ ಮಾರ್ಗಸೂಚಿ:**
ರೋಗಿ ಅಥವಾ ಸಂಬಂಧಿಕರ ದೂರು ಬಂದ ತಕ್ಷಣ ಪೊಲೀಸ್ ಅಥವಾ ಮ್ಯಾಜಿಸ್ಟ್ರೇಟ್ FIR ಮಾಡಬಾರದು. ಮೊದಲು ಸರ್ಕಾರಿ ವೈದ್ಯಕೀಯ ಮಂಡಳಿ / ತಜ್ಞರಿಂದ ಅಭಿಪ್ರಾಯ ಪಡೆಯಬೇಕು. ತಜ್ಞರು ಗಂಭೀರ ಅಪರಾಧಾತ್ಮಕ ನಿರ್ಲಕ್ಷ ಇದೆ, ಎಂದರೆ ಮಾತ್ರ ಮುಂದಿನ ಕ್ರಮ. ಇದರಿಂದ ವೈದ್ಯರಿಗೆ ಅನಗತ್ಯ ಕೇಸ್‌ಗಳಿಂದ ರಕ್ಷಣೆ. ಭಯದ ವಾತಾವರಣ ತಪ್ಪಿಸಲು ಕೋರ್ಟ್ ಸ್ಪಷ್ಟ ಸೂಚನೆ.

**೩. ಡಾ. ಸುರೇಶ್ ಗುಪ್ತ ಕೇಸ್(೨೦೦೪) ತೀರ್ಪಿನ ಸಾರ**
ಕೇವಲ ಅಜಾಗರೂಕತೆ ಅಥವಾ (Error Judgment) ಆ ಕ್ಷಣದ ನಿರ್ಣಯ ದೋಷದ ಒಂದೇ ಕಾರಣದಿಂದ ವೈದ್ಯರ ಮೇಲೆ. ಕ್ರಿಮಿನಲ್ ಕೇಸ್ ಅಡಿಯಲ್ಲಿ FIR ಮಾಡುವಂತಿಲ್ಲ.

**KPME Act + IPC ಏನು ಹೇಳುತ್ತದೆ?**
**KPME Act ಉಲ್ಲಂಘನೆ:**
ದಂಡ / ಲೈಸೆನ್ಸ್ ರದ್ದು / ಆಡಳಿತಾತ್ಮಕ ಕ್ರಮ. IPC ೩೦೪A / ೩೩೭ / ೩೩೮FIR ಸಾಧ್ಯ ಆದರೆ ಸುಪ್ರೀಂ ಕೋರ್ಟ್ ಮಾರ್ಗಸೂಚಿ ಪಾಲಿಸಬೇಕು. ಅಂತಿಮವಾಗಿ ಸ್ಪಷ್ಟ ಉತ್ತರ.
ಜಕೋಬ್ ಮಾತೆವ್ ಸ್ಟೇಟ್ ಆಫ್ ಪಂಜಾಬ್ ೨೦೨೫

**ಪ್ರಥಮ ಮಾಹಿತಿ ವರದಿ ಆದರೂ ವೈದ್ಯರಿಗೆ ರಕ್ಷಣೆ ಇರುವ ಪ್ರಮುಖ ಕಾರಣಗಳು.**
೧. ಅರೆಸ್ಟ್ ಸ್ವಯಂಚಾಲಿತ ಅಲ್ಲ. FIR, ಅರೆಸ್ಟ್ ಕಡ್ಡಾಯವಲ್ಲ. ವೈದ್ಯಕೀಯ ಪ್ರಕರಣಗಳಲ್ಲಿ : ತಜ್ಞ

ವೈದ್ಯ ಮಂಡಳಿಯ ಅಭಿಪ್ರಾಯ ಇಲ್ಲದೆ ಅರೆಸ್ಟ್ ಮಾಡಬಾರದು. ಎಲ್ಲಾ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಬಂಧಿಸುವುದು ತಪ್ಪು. ಸಹಕರಿಸಿದರೆ ಅರೆಸ್ಟ್ ಅಗತ್ಯವೇ ಇಲ್ಲ. ತನಿಖೆಗೆ ಸಹಕರಿಸಿದರೆ. ದಾಖಲೆಗಳನ್ನು ನೀಡಿದರೆ. ಸಾಕ್ಷ್ಯನಾಶ ಮಾಡದಿದ್ದರೆ, ಅರೆಸ್ಟ ಮಾಡುವ ಅಗತ್ಯವೇ ಬರುವುದಿಲ್ಲ.
ಹಾಗಾದರೆ ವೈದ್ಯರು ಏನು ಮಾಡಬೇಕು? (ಬಹಳ ಮುಖ್ಯ)
ಎಫ್ ಐ ಆರ್ ಆದ ತಕ್ಷಣ :

- ಒಳ್ಳೆಯ ವಕೀಲರನ್ನು ಸಂಪರ್ಕಿಸಿ.
- ಎಲ್ಲಾ ವೈದ್ಯಕೀಯ ದಾಖಲೆಗಳನ್ನು ಸುರಕ್ಷಿತವಾಗಿ ಉಳಿಸಿ.
- ತನಿಖೆಗೆ ಸಹಕರಿಸಿ.
- ಅಗತ್ಯವಿದ್ದರೆ ನಿರೀಕ್ಷಣ ಜಾಮೀನಿ ಅರ್ಜಿ ಸಲ್ಲಿಸಿ.
- ಆಸ್ಪತ್ರೆ / KPME ನೋಂದಣಿ ದಾಖಲೆ ಸಿದ್ಧವಾಗಿ ಇಟ್ಟುಕೊಳ್ಳಿ.

**ಅರೆಸ್ಟ್ ವಾರೆಂಟ್... ಯಾವಾಗ ಭಯಪಡಬೇಕು?**
**ಈ ಸಂದರ್ಭಗಳಲ್ಲಿ ಮಾತ್ರ :**

(Expert Medical Board) ತಜ್ಞ ವ್ಯದ್ಯರ ಮಂಡಳಿ ಸ್ಪಷ್ಟವಾಗಿ. ವೈದ್ಯಕೀಯ ನಿರ್ಲಕ್ಷ / ಗಂಭಿರ ನಿರ್ಲಕ್ಷತೆ ಎಂದು ಅಭಿಪ್ರಯ ಪಟ್ಟರೆ.

ಗಂಭೀರವಾದ ಅಪರಾಧಾತ್ಮಕ ಇದೆ ಎಂದರೆ. ತನಿಖೆಗೆ ಸಹಕರಿಸದಿದ್ದರೆ. ಸಾಕ್ಷ್ಯ ನಾಶ ಮಾಡುವ ಪ್ರಯತ್ನ. ಮರುಮರು ಸಮನ್ಸ್ ನಿರ್ಲಕ್ಷ್ಯ, ಇವು ಇಲ್ಲದಿದ್ದರೆ ಭಯಪಡುವ ಅಗತ್ಯವಿಲ್ಲ. ಸರಳ ಉದಾಹರಣೆ. ರೋಗಿ ಮೃತಪಟ್ಟಿದಾನೆ FIR ಆಯಿತು. ವೈದ್ಯರು SOP ಪಾಲಿಸಿದ್ದಾನೆ, ದಾಖಲೆ ಸರಿಯಾಗಿದೆ. Expert opinion ಇಲ್ಲ, ಕೇಸ್ ಬಹುಶಃ ರದ್ದು / ಕ್ಲೋಸ್ ಅಂತಿಮವಾಗಿ FIR – ತಪ್ಪು ಸಾಬೀತು, FIR – ತಕ್ಷಣ ಅರೆಸ್ಟ್ ಇಲ್ಲ. FIR – ಕಾನೂನು ಪ್ರಕ್ರಿಯೆಯ ಆರಂಭ ಮಾತ್ರ.

**ಎಫ್ ಐ ಆರ್ ಆದ ಕ್ಷಣದಿಂದ ಕೇಸ್ ಕ್ಲೋಸ್ ಆಗುವವರೆಗೂ ಏನು ಮಾಡಬೇಕು?**
DOCTOR LEGAL SUPPORT KIT. ವೈದ್ಯರ ಕಾನೂನು ಸಹಾಯ ಕಿಟ್.
೧. ಎಫ್ ಐ ಆರ್‌ಆದ ತಕ್ಷಣ, ಮೊದಲ ೧೨ ಗಂಟೆ. ಮಾಡಬೇಕಾದದ್ದು.

FIR ಪ್ರತಿ ಪಡೆಯಿರಿ (IPC section ಗಮನಿಸಿ) ನಿಮ್ಮ ಪರಿಚಯದ ವಕೀಲರನ್ನು ಸಂಪರ್ಕಿಸಿ.. ನೀವು ಕೆಲಸದ ಸ್ಥಳದ ಆಸ್ಪತ್ರೆಯ ಮ್ಯಾನೇಜ್ಮೆಂಟ್ ಅವರಿಗೆ ಮಾಹಿತಿ ಕೊಡಿ. ಸಾಮಾಜಿಕ ಜಾಲ ತಾಣಗಳಲ್ಲಿ ಈ ಚರ್ಚೆ ಮಾಡಬೇಡಿ. ಪೋನ್ ಅಲ್ಲಿ ಕೂಡ ಬೇಡ. ದಾಖಲೆಗಳನ್ನು ತಿದ್ದುವ ಮತ್ತು ನಾಶ ಪಡಿಸುವಿಕೆ ಬೇಡ (ಇದು ಕ್ರಿಮಿನಲ್ ಅಪರಾಧ).
೨ ದಾಖಲೆಗಳ (documentation) ರಕ್ಷಣೆ ಪ್ಲಾನ್.

ಅತಿ ಅವಶ್ಯ ಇರುವ ಒಂದು folder ಮಾಡಿ (originals + photocopies): ಹೊರ ಮತ್ತು ಒಳರೋಗಿ ಕೇಸ್ ಶೀಟ್, ಒಪ್ಪಿಗೆ ಪತ್ರ, ನರ್ಸಿಂಗ್ ನೋಟ್ಸ್, ರೋಗಿ ಪರೀಕ್ಷೆ ರಿಪೋರ್ಟ್, ಟ್ರೀಟ್ಮೆಂಟ್ ಚಾರ್ಟ್, ರೆಫರಲ್ ಚಾರ್ಟ್, ಮರಣ ಪತ್ರ / ಡಿಸ್ಚಾರ್ಜ್ ಪತ್ರ.
ಮೂಲಭೂತ ನಿಯಮ.

ಕೇಸ್ ಶೀಟ್‌ನಲ್ಲಿ ನಮೂದಾಗಿದ್ದರೆ ಮಾತ್ರ ವೈದ್ಯರು ಚಿಕಿತ್ಸೆ ನೀಡಿದ್ದಾರೆ ಅಂತ ಅರ್ಥ. ಕೇಸ್ ಶೀಟ್‌ನಲ್ಲಿ ನಮೂದಾಗಿರದಿದ್ದರೆ ನೀವು ಚಿಕಿತ್ಸೆ ನೀಡಿಲ್ಲವೆಂದು ಆರ್ಥ. (court ದೃಷ್ಟಿಯಲ್ಲಿ)

೩. ಪೊಲೀಸ್ ಅಧಿಕಾರಿ ಮುಂದೆ ಹೇಳಿಕೆ ದಾಖಲು ಮಾಡುವ ಸಮಯದಲ್ಲಿ ನೀವು ಅನುಸರಿಸಬೇಕಾದ ನಿಯಮಗಳು. “ನಾನು ಪ್ರಮಾಣಿತ ವಿಧಾನ ಮತ್ತು ಅಂಗಿಕೃತ ವಿಧಾನದ ಪ್ರಕಾರ ಚಿಕಿತ್ಸೆ ನೀಡಿದ್ದೇನೆ. ದಾಖಲೆಗಳು ನಮ್ಮ ಬಳಿ ಇವೆ. ತಜ್ಞ ವೈದ್ಯರ ವರದಿ ಬಂಧ ನಂತರ ಹೆಚ್ಚಿನ ವಿವರ ನೀಡುತ್ತೇನೆ”

ಈ ಮಾತುಗಳನ್ನು ಎಂದಿಗೂ ಬಳಸಬೇಡಿ:

ಹೌದು ಚಿಕಿತ್ಸೆ ನೀಡಲು ವಿಳಂಬ ಆಯ್ತು "Risk ಜಾಸ್ತಿ ಇತ್ತು". ಪರಿಣಾಮದ ಬಗ್ಗೆ ಮಾಹಿತಿ ಇದ್ದಿಲ್ಲ. ನಿರೀಕ್ಷಣಾ ಜಾಮೀನು. ಯಾವಾಗ ಕಡ್ಡಾಯ? IPC ೩೦೪A/೩೩೮ ಇದ್ದರೆ. ಸಾಮಾನ್ಯವಾಗಿ ಅಂದೇ ಜಾಮೀನು ಸಿಗುತ್ತದೆ.

೪ ವೈದ್ಯಕೀಯ ಮಂಡಳಿ / ತಜ್ಞರ ಅಭಿಪ್ರಾಯ? ಹೇಗೆ ತಯಾರಿ?

ವೈದ್ಯಕೀಯ ಮಂಡಳಿ ನೋಡುವುದು :

SOP follow ಆಗಿದೆಯಾ? ಒಪ್ಪಿಗೆ ಸರಿಯಾಗಿ ತೆಗೆದುಕೊಂಡಿದೆಯಾ? (Referral Delay) ಹೆಚ್ಚಿನ ಚಿಕಿತ್ಸೆಗಾಗಿ ಉನ್ನತ ಚಿಕಿತ್ಸಾ ಕೇಂದ್ರಗಳಿಗೆ ಕಳುಹಿಸುವಲ್ಲಿ ತಡವಾಗಿದೆಯೇ? (Documentation Clarity) ದಾಖಲಿಕರಣದಲ್ಲಿ ಸ್ಪಷ್ಟತೆ ಇದೆಯೇ ನಿಮ್ಮ ವಕೀಲರ ಮೂಲಕ ಲಿಖಿತವಾದ ಸಲ್ಲಿಕೆ. ಇಲ್ಲಿ ತಜ್ಞ ವೈದ್ಯರ ಪ್ರಮಾಣ ಪತ್ರ ಕೇಸ್‌ನಲ್ಲಿ ಪ್ರಮುಖ ಪಾತ್ರ. ಚಾರ್ಜ್ ಶೀಟ್ ಪ್ರಕಾರ ದಾಖಲಾತಿ ಸಲ್ಲಿಸಿ ವಿಚಾರಣೇ ಮುಗಿದಾಗ. ನಿಮ್ಮ ವಕೀಲರು ಆರೋಪ ಮುಕ್ತಿ ಅರ್ಜಿ ಸಲ್ಲೀಸುವಿಕೆ. ಬಹುತೇಕ ಕೇಸ್‌ಗಳು, NO MENS REA ಅಡಿಯಲ್ಲಿ ಮುಕ್ತಾಯಗೊಳ್ಳುತ್ತವೆ.

**NO MENS REA ಉದ್ದೇಶದ ಕೊರತೆ ಎಂದರೇನು ?**

ಅರ್ಜಿದಾರರಾದ ವೈದ್ಯರಿಗೆ ಯಾವುದೇ ಅಪರಾಧ ಮನೋಭಾವ (mens rea) ಇಲ್ಲ. ರೋಗಿಗೆ ಹಾನಿ ಮಾಡುವ ಉದ್ದೇಶ ಇರದೆ, ಕೇವಲ ರೋಗಿಯ ಜೀವ ಉಳಿಸುವ ಉದ್ದೇಶದಿಂದಲೇ ಚಿಕಿತ್ಸೆ ನೀಡಲಾಗಿದೆ.NO Gross negligence ? ತೀರ್ವ ನಿರ್ಲಕ್ಷ್ಯ ಇಲ್ಲ. ಚಿಕಿತ್ಸೆ ವೇಳೆ ಉಂಟಾದ ಸಂಕೀರ್ಣತೆ ಅಥವಾ ನಿರ್ಧಾರದಲ್ಲಿ ಉಂಟಾದ ತಪ್ಪಾಗಿರಬಹುದು. ಆದರೆ ಇದನ್ನು ತೀವ್ರ ಅಥವಾ ಕಿಮಿನಲ್ ನಿರ್ಲಕ್ಷ್ಯ ಎಂದು ಕರೆಯಲು ಸಾಧ್ಯವಿಲ್ಲ. ಅಂಗೀಕೃತ ವೈದ್ಯಕೀಯ ಮಾರ್ಗಸೂಚಿ ಮತ್ತು ಮಾನ್ಯ ಚಿಕಿತ್ಸಾ ವಿಧಾನಗಳನ್ನು. ಸಂಪೂರ್ಣವಾಗಿ ಪಾಲಿಸಲಾಗಿದೆ. ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿರುವಂತೆ. ತೀವ್ರ ನಿರ್ಲಕ್ಷ್ಯದ ಪ್ರಾಥಮಿಕ ಸಾಕ್ಷ್ಯವಿಲ್ಲದೆ ವೈದ್ಯರ ಮೇಲೆ ಕ್ರಿಮಿನಲ್ ಕ್ರಮ ಕೈಗೊಳ್ಳಬಾರದು. ದುರ್ಘಟನೆಯಿಂದ ಉಂಟಾದ ಭಾವನಾತ್ಮಕ ನೋವಿನ ಪರಿಣಾಮವಾಗಿ ಈ FIR ದಾಖಲಿಸಲಾಗಿದ್ದು. ಇದು ಕಾನೂನು ಪ್ರಕ್ರಿಯೆಯ ದುರುಪಯೋಗವಾಗಿದೆ. ಈ ಪ್ರಕರಣವು ಸಂಪೂರ್ಣವಾಗಿ ವೈದ್ಯಕೀಯ ದಾಖಲೆಗಳ ಮೇಲೆ ಆಧಾರಿತವಾಗಿರುವುದರಿಂದ. ಅರ್ಜಿದಾರರನ್ನು ಬಂಧಿಸುವ ಅಗತ್ಯವೇ ಇಲ್ಲ. ಆರ್ಜಿದಾರರು ತನಿಖೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ಹಾಗೂ ಮಾನ್ಯ ನ್ಯಾಯಾಲಯ ವಿಧಿಸುವ ಎಲ್ಲಾ ಷರತ್ತುಗಳನ್ನು ಪಾಲಿಸುವುದಾಗಿ ಭರವಸೆ ನೀಡುತ್ತಾರೆ. ಇಲ್ಲಿ ಅಪರಾಧ ಉದ್ದೇಶವೂ ಇಲ್ಲ. ತೀವ್ರ ನಿರ್ಲಕ್ಷ್ಯವೂ ಇಲ್ಲ : ಆದರಿಂದ ಅರ್ಜಿದಾರರ ಮೇಲೆ ಯಾವುದೇ ಕ್ರಿಮಿನಲ್ ಹೊಣೆಗಾರಿಕೆ ವಿಧಿಸಲು ಸಾಧ್ಯವಿಲ್ಲ.

ಒಂದು ವೇಳೆ FIR ಯಿಂದ ನಿಮ್ಮ ಮುಂದಿನ ಭವಿಷ್ಯತನಲ್ಲಿ ತೊಂದರೆ ಆಗುವ ಸಂಭವ ಇದ್ದರೆ FIR ರದ್ದುಪಡಿಸುವ ಅರ್ಜಿ (FIR Quash Petition) ಕರಡು ಮಾನ್ಯ ನ್ಯಾಯಾಲಯದ ಮುಂದೆ ಸಲ್ಲಿಸಬಹುದು. ಅರ್ಜಿದಾರರಾದ ವೈಧ್ಯರು ತಮ್ಮ ವೃತ್ತಿಪರ ಕರ್ತವ್ಯವನ್ನು ಪ್ರಮಾಣಿತ ಕಾರ್ಯವಿಧಾನ (SOP) ಮತ್ತು ಅಂಗೀಕೃತ ಪದ್ದತಿ ಅನುಸರಿಸಿ ನಿರ್ವಹಿಸಿದ್ದಾರೆ. ಈ ಪ್ರಕರಣದಲ್ಲಿ ಕೇವಲ ನಿರ್ಣಯದ ದೋಷ ಅಥವಾ ಅಜಾಗರೂಕತೆ ಎಂಬ ಆರೋಪ ಮಾತ್ರವಿದ್ದು. ಇದು ಗಂಭೀರ ಅಪರಾಧಾತ್ಮಕ ನಿರ್ಲಕ್ಷ್ಯದ ಮಟ್ಟಕ್ಕೆ ತಲುಪುವುದಿಲ್ಲ. ತಜ್ಞ ವೈದ್ಯಕೀಯ ಅಭಿಪ್ರಾಯ ಪಡೆಯದೇ FIR ದಾಖಲಿಸಲಾಗಿದೆ. ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳ ಪ್ರಕಾರ ವೈದ್ಯರ ವಿರುದ್ದ ರೂಢಿಮಟ್ಟದಲ್ಲಿ FIR ದಾಖಲಿಸುವುದು. ಅನುಚಿತವಾಗಿದೆ. ಮಾರ್ಗಸೂಚಿಗಳು ಹಾಗೂ ಪಠ್ಯಪುಸ್ತಕ ಉಲ್ಲೇಖಗಳು ಆಧರಿಸಿ ನೀಡಲಾಗಿದ್ದು, As written, as treated ಎಂಬ ದಾಖಲೆ ಸ್ಪಷ್ಟತೆಯಿದೆ. ಅರ್ಜಿದಾರರಿಗೆ ಹಾನಿ ಮಾಡುವ ಅಥವಾ ಕೊಲೆ ಮಾಡುವ ಯಾವುದೇ ಪ್ರೇರಣೆ ಇರಲಿಲ್ಲ. ಆದ್ದರಿಂದ. ಈ FIR ಮುಂದುವರಿಸುವುದು. ಕಾನೂನು ಪ್ರಕ್ರಿಯೆಯ ದುರುಪಯೋಗವಾಗಿರುವುದರಿಂದ. FIR ರದ್ದುಪಡಿಸಲು ಮಾನ್ಯ ನಾಯಾಲಯವನ್ನು ವಿನಂತಿಸಲಾಗುತ್ತದೆ.

IMA KPPS

**ವೈದ್ಯಕೀಯ ಸೇವೆಯ ಸಂಪೂರ್ಣ ರಕ್ಷಣೆಗೆ ಭಾರತೀಯ ವೈದ್ಯಕೀಯ ಸಂಘದ KPPS ವೃತ್ತಿ ಪರ ವಿಮಾ ರಕ್ಷಣೆ ಸ್ಕೀಮ್ ಅಲ್ಲಿ ನೋಂದಾಯಿಸಿ, ವೃತ್ತಿಯ ಒತ್ತಡವಿಲ್ಲದೆ ನಿಮ್ಮ ಸೇವೆಯನ್ನು ಒದಗಿಸಿ**





## ಪದ ಸಂಪದ

# ಶಬ್ದ ಗುಣ

**ಡಾ. ಗೋವಿಂದ ಹೆಗಡೆ**
ವಿಭಾಗೀಯ ಸಂಪಾದಕರು
ಮತ್ತು ಲೇಖಕರು

### ೧) ತೀವಿ ಮತ್ತು ತಿವಿ

ಮೊನ್ನೆ ಮಾಸ್ತಿ ಅವರ ಸಮಗ್ರ ಕತೆಗಳ ಸಂಪುಟ ಮೂರನ್ನು ಓದುತ್ತಿದ್ದೆ. ಒಂದೆಡೆ 'ತೀವಿ' ಎಂಬ ಶಬ್ದ ಸಿಕ್ಕಿತು. ಹಾಗೆಂದರೆ ಏನೆಂಬುದು ಸಾಂದರ್ಭಿಕವಾಗಿ ಅರ್ಥವಾಯಿತಾದರೂ ಪದಶಃ ಅರ್ಥವನ್ನು ತಿಳಿಯೋಣ ಎನ್ನಿಸಿ ಅಂತರ್ಜಾಲದಲ್ಲಿ ಹುಡುಕಲು ಹೊರಡುವಾಗ, ಸೋಮೇಶ್ವರ ಶತಕದ 'ಫಲಂ ತೀವಿದಾ' ಎಂಬ ಸಾಲು ನೆನಪಾಯಿತು. 'ಚರಿಪಾರಣ್ಯದ ಪಕ್ಷಿಗೊಂದು ತರು ಗೊಡ್ಡಾಗಲ್ ಫಲಂ ತೀವಿದಾ। ಮರಗಳ್ ಪುಟ್ಟವೆ?' ಇಲ್ಲಿನ ಭಾವವನ್ನು ಗಮನಿಸಿದರೆ, ಫಲವಿರುವ ಮರ ಎಂಬ ಅರ್ಥ ಬರುತ್ತದೆ. ಹಾರುವ ಹಕ್ಕಿಗೆ, ಕಾಡಿನಲ್ಲಿ ಒಂದು ಮರದಲ್ಲಿ ಫಲವಿಲ್ಲದಿದ್ದರೆ, ಫಲವಿರುವ ಬೇರೆ ಮರ ದೊರೆಯದೇನು ಎನ್ನುತ್ತದೆ ಈ ಸಾಲು. ಮುಂದೆ, ಒಂದು ಹೂ ಬಳಲಿದರೆ, ದುಂಬಿಗೆ ಬೇರೆ ಹೂವು ಸಿಕ್ಕುವುದಿಲ್ಲವೇ ಎಂದು ಕೇಳುತ್ತಾನೆ ಸೋಮನಾಥ. ಈ ಉದಾಹರಣೆಗಳನ್ನು ಹೇಳಿ, ಒಬ್ಬರು ದಾತರು ಇಲ್ಲದಿದ್ದರೆ ಬೇರೊಬ್ಬರು ಸಿಗರೇ ಎನ್ನುತ್ತಾನೆ. ೧೩ನೇ ಶತಮಾನದ ಕಾವ್ಯದಲ್ಲಿ ಬಳಕೆಯಾದ ಈ ಶಬ್ದವನ್ನು ತುಂಬ ಸಹಜವಾಗಿ ಬಳಸಿ, ಮತ್ತೆ ಮುನ್ನೆಲೆಗೆ ತಂದ ಮಾಸ್ತಿಯವರನ್ನು ಸ್ಮರಿಸಬೇಕು. ಈಗ ತೀವು ಶಬ್ದದ ಅರ್ಥಗಳನ್ನು ಪರಿಶೀಲಿಸೋಣ.

ತೀವು (ಕ್ರಿ.) ೧. ತುಂಬು. ೨. ತುಂಬಿರು. ೩. ಹರಡು. ೪. ತುಂಬಿಹರಿ. ೫. (ಕಾಲವು) ಮುಗಿ. ೬. ಸುತ್ತುಗಟ್ಟು. ೭. ಸೇರು. ೮. ಹೊರಿಸು. ೯. ಹರಡುವಂತೆ ಮಾಡು. ೧೦. ಒದಗಿಬರು. ೧೧. ಸಂಪೂರ್ಣವಾಗು. ಭರ್ತಿಮಾಡು;ಭರ್ತಿಯಾಗಿರು;ವ್ಯಾಪಿಸು; ಹೊರಸೂಸು;ಪೂರ್ಣವಾಗು ; ಆವರಿಸು; ಕೂಡು; ಆರೋಪಿಸು; ಪ್ರಸಾರಮಾಡು; ಕೂಡಿಬರು; ಪರಿಪೂರ್ಣವಾಗು; ಕನ್ನಡ ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ಕನ್ನಡ –ಕನ್ನಡ ನಿಘಂಟು ನೀಡಿದ ಅರ್ಥಗಳು ಇವು. ಅಲ್ಲಿಗೆ ಸೋಮೇಶ್ವರ ಶತಕದಲ್ಲಿ ಬಂದ 'ಫಲಂ ತೀವಿದಾ' ಪ್ರಯೋಗಕ್ಕೆ 'ಫಲ ತುಂಬಿದ' ಎಂದು ಅರ್ಥೈಸಬೇಕು. ತೀವಿದಾ ಎಂಬುದನ್ನು ತಿವಿದಾ ಎಂದುಕೊಳ್ಳಬಾರದು! ಆದರೂ ಮಾಸ್ತಿಯವರು ಮಾಡಿದ ಬಳಕೆ ನನ್ನನ್ನು 'ತಿವಿದಿದ್ದರ' ಪರಿಣಾಮವೇ ಈ ತೀವು ಶಬ್ದದ ಬೆನ್ನು ಹತ್ತುವಂತಾಯಿತು!

ಇಲ್ಲಿಯೇ ತಿವಿ ಶಬ್ದವನ್ನು ಕೂಡ ಪರಿಶೀಲಿಸೋಣ. ತಿವಿ (ಕ್ರಿ.)

೧. ಮುಷ್ಟಿಯಿಂದ ಹೊಡೆ. ೨. ಇರಿ. ೩. ಹಬ್ಬು. ೪. ಓಡಿಸು. ಗುದ್ದು ; ಚುಚ್ಚು ; ವ್ಯಾಪಿಸು ; ಮುನ್ನುಗ್ಗಿಸು ಈಗ ನಮಗೆ ತಿವಿ ಮತ್ತು ತೀವಿ (ತೀವು ಶಬ್ದದ ಭೂತಕೃದಂತ ರೂಪ. ಮಾಡು>ಮಾಡಿ ಇದ್ದಂತೆ)ಗಳ ನಡುವೆ ಗೊಂದಲವಾಗಲು ಕಾರಣವಿಲ್ಲ.

**೨) ಆವುಗೆ ಮತ್ತು ಹಾವುಗೆ** ಬರಹಗಾರರೊಬ್ಬರು ತಮ್ಮ ಕವಿತೆಯಲ್ಲಿ 'ಆವುಗೆಯ ಮೆಟ್ಟಿ' ಎಂದು ಬಳಸಿದ್ದರು. ಇನ್ನೊಬ್ಬರು ಅದು 'ಹಾವುಗೆ' ಎಂದಾಗಬೇಕು ಎಂದು ಸೂಚಿಸಿದರು. ಆವುಗೆ ಎಂದು ಬರೆದವರು ಉತ್ತರ ಕರ್ನಾಟಕದವರು. 'ಪ್ರಾದೇಶಿಕ ವ್ಯತ್ಯಾಸವಿದೆ. ನಮ್ಮಲ್ಲಿ ಆವುಗೆ, ಆವಿಗೆ ಎನ್ನುತ್ತಾರೆ' ಎಂದು ಅವರಿಂದ ಉತ್ತರ ಬಂತು. ಈಗ ಇವೆರಡರ ಅರ್ಥ ಮತ್ತು ಬಳಕೆಯನ್ನು ನೋಡೋಣ. ಹಾವುಗೆ ಎಂದರೆ ಮರದಿಂದ ಮಾಡಿದ

ಪಾದರಕ್ಷೆ, ಪಾದುಕೆ. ಆವುಗೆ ಎಂದರೆ ಕುಂಬಾರನು ಮಡಕೆಯನ್ನು ಬೇಯಿಸಲು ಮಾಡಿಕೊಂಡ ವ್ಯವಸ್ಥೆ ಮಡಕೆಯನ್ನು ಸುಡುವ ಕುಂಬಾರನ ಒಲೆ. ಇದಕ್ಕೆ ಆವಗೆ, ಆವಿಗೆ ಎಂಬ ರೂಪಗಳೂ ಇವೆ. ವಿಜ್ಞಾನ ತಂತ್ರಜ್ಞಾನ ಪದಕೋಶದಲ್ಲಿ ಆವಿಗೆ ಪದಕ್ಕೆ ಈ ರೀತಿಯಾಗಿ ಅರ್ಥವನ್ನು ನೀಡಿದ್ದಾರೆ : ಆವಿಗೆ ಕನ್ನಡ ಅರ್ಥ: ರೊಟ್ಟಿಯನ್ನು ಅಥವಾ ಇತರ ಆಹಾರ ಪದಾರ್ಥ ಗಳನ್ನು ಸುಡುಗಾಳಿಯಿಂದ ಬೇಯಿಸುವ ಇಟ್ಟಿಗೆಯ, ಕಲ್ಲಿನ ಅಥವಾ ಕಬ್ಬಿಣದ (ಗೂಡು) ಒಲೆ ಇಂಗ್ಲಿಷ್ ಅರ್ಥ : oven ಕುಂಬಾರಿಕೆ ವೃತ್ತಿ ಪದಕೋಶದಲ್ಲಿ ಈ ಪದವನ್ನು ಸುದೀರ್ಘವಾಗಿ ಚರ್ಚಿಸಿ, ಈ ಕೆಳಗಿನ ಉಲ್ಲೇಖಗಳನ್ನು ನೀಡಿದ್ದಾರೆ:

೧. "ಆವಿಗೆಯ ಕಿಚ್ಚಿನಂತೆ ಸುಳಿ ಸುಳಿದು ಬೆಂದೆ" (ಅಕ್ಕಮಹಾದೇವಿ)

೨. "ಆವಗೆಯೊಳಗೆ ತಂಪುಗಳುಂಟೆ" (ಭೀಮ ಕವಿ)

೩. "ಆವಿಗೆಯ ಬಲುಗಿಚ್ಚಿನುರಿಯೊಳು ಬೇವ ಮಡಕೆಗಳಂತ" (ಮಹಲಿಂಗರಂಗ) ಕುಂಬಾರನ ಆವಿಗೆಯಲ್ಲಿ ಚೆಂಬು ಹುಡುಕಿದ ಹಾಗೆ (ಗಾದೆ).

ಈ ಮೂಲಕ ವಿಶದವಾಗುವುದೆಂದರೆ, ಆವಿಗೆ, ಆವುಗೆಗಳು ಬೇಯಿಸುವ, ಸುಡುವ ವ್ಯವಸ್ಥೆಗೆ ಸಂಬಂಧಿಸಿದವು. ಶರಣರ ಕಾಲದಿಂದ ಆರಂಭಿಸಿ, ಈವರೆಗೆ ಈ ಶಬ್ದಗಳನ್ನು ಹಾವುಗೆಗೆ ಬದಲಾಗಿ ಬಳಸಿದಂತಿಲ್ಲ. ಹಾಗಾಗಿ ಹಾವುಗೆ ಎಂದರೆ ಪಾದುಕೆ. ಆವುಗೆ, ಆವಿಗೆ ಎಂದರೆ oven.

**೩) ತಪ್ಪು – ಒಪ್ಪು :** ಈ ಭಾಗದಲ್ಲಿ ಐದು ಪದಗಳ, ಸಾಮಾನ್ಯ ಬಳಕೆಯಲ್ಲಿ ಕಂಡುಬರುವ ತಪ್ಪು ರೂಪಗಳನ್ನು ಮತ್ತು ಅವುಗಳ ಸರಿಯಾದ ರೂಪಗಳನ್ನು ನೋಡೋಣ.

ಅದೇಷ್ಟು – ಅದೆಷ್ಟು
ಸಾಮಾಗ್ರಿ– ಸಾಮಗ್ರಿ
ಶಾಪಗ್ರಸ್ಥ– ಶಾಪಗ್ರಸ್ತ
ಧೃವ– ಧ್ರುವ
ಅದ್ಬುತ – ಅದ್ಭುತ

ಕನ್ನಡ ಬಳಸಿ... ವೈದ್ಯ ಸಾಹಿತ್ಯ ಬೆಳೆಸಿ...
ವೈದ್ಯ ಸಂಪದ ಪತ್ರಿಕೆಯ ಚಂದಾದಾರರಾಗಿ ಪ್ರೋತ್ಸಾಹಿಸಿ

ರೂ. ೧೦೦೦/–
ಪಾವತಿಸಿ ೧ ವರುಷ ಪುಸ್ತಕ ಪಡೆಯಿರಿ
ಇಂದೇ ಚಂದಾದಾರರಾಗಿ ಪ್ರೋತ್ಸಾಹಿಸಿ

ಈ ಕೋಡ್ ಬಳಸಿ
ನಿಮ್ಮ ಹೆಸರು, ವಿಳಾಸ ದಾಖಲಿಸಿ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಡಾ. ಸುರೇಶ ಸಗರದ ೯೪೪೪ ೮೧೩ ೯೩೯, ಡಾ. ವೀಣಾ ಎನ್. ಸುಳ್ಯ ೯೪೪೪ ೮೨೧ ೫೪೦



## ಕೃತಿ ಪರಿಚಯ

# ತೊತ್ತೊ-ಚಾನ್

ಡಾ. ಉಮಾ ಚಿಕ್ಕರಡ್ಡಿ
ವಿಭಾಗೀಯ ಸಂಪಾದಕರು ಮತ್ತು ಲೇಖಕರು

ಯುದ್ಧ... ಬಾಂಬ್ ದಾಳಿ... ಸಾವು... ನೋವು... ವಿನಾಶ...
ಕಳೆದ ಶತಮಾನಗಳಲ್ಲಿ ನಡೆದ ಮಹಾಯುದ್ಧಗಳ ದುರಂತಗಳನ್ನು ಅರಿತ ಮೇಲೂ, ಕೆಲವು ದೇಶಗಳ ನಾಯಕರು ೨೧ನೇ ಶತಮಾನದಲ್ಲಿಯೂ ಯುದ್ಧವನ್ನು ಆರಂಭಿಸಿದ್ದೂ ಅಲ್ಲದೇ ತಿಂಗಳುಗಳ-ವರ್ಷಗಳವರೆಗೂ ಮುಂದುವರೆಸುತ್ತಿರುವುದೂ ದೂರ ದೇಶದಲ್ಲೆಲ್ಲೋ ಕುಳಿತು ಕೇಳುತ್ತಿರುವ/ನೋಡುತ್ತಿರುವ ನಮಗೇ ಇಷ್ಟೊಂದು ದುಃಖವಾಗುತ್ತದೆ. ಪುಟ್ಟ ಪುಟ್ಟ ಕಂದಮ್ಮಗಳು ಅನಾಥವಾಗುವ, ಅನಾಥ ಹೆಣವಾಗುವಂತಹ ಸುದ್ದಿಗಳನ್ನು ಕೇಳಿದಾಗ ಕರುಳು ಕಿವುಚಿದಂತಾಗುತ್ತದೆ. ಎರಡನೇ ಮಹಾಯುದ್ಧದಲ್ಲಿ, ಜಪಾನಿನ ಮೇಲೆ ಯುದ್ಧವಾದಾಗ, ಅಲ್ಲಿನ ಸುಂದರ ಶಾಲೆಯೊಂದು ಸುಟ್ಟು ಬೂದಿಯಾದ ಕಥೆಯೊಂದನ್ನು ಓದುವಾಗ ಅಂಥದೇ ಭಾವ.

ತೊತ್ತೊ-ಚಾನ್ (Totto-chan) ಪುಸ್ತಕವು ಜಪಾನಿನ ಬರಹಗಾರ್ತಿ ತೆತ್ಸುಕೊ ಕುರೊಯಾನಾಗಿ ಅವರ ಬಾಲ್ಯದ ಅನುಭವಗಳನ್ನು ಆಧರಿಸಿದ ಆತ್ಮಕಥನವಾಗಿದ್ದು, ತೊಮೊಯೆ ಗೋಕಾಯೆನ್ (೧೯೩೭-೧೯೪೫) ಎಂಬ ವಿಶಿಷ್ಟ ಶಾಲೆಯನ್ನು ಪರಿಚಯಿಸುತ್ತದೆ. ತೊಮೊಯೆ ಶಾಲೆಯ ಹಳೆಯ ವಿದ್ಯಾರ್ಥಿನಿಯಾದ ಲೇಖಕಿ ತಮ್ಮ ಈ ಪುಸ್ತಕವನ್ನು ಅದರ ಮುಖ್ಯೋಪಾಧ್ಯಾಯರಾದ ಕೊಬಾಯಾಶಿಯವರಿಗೆ ಸಮರ್ಪಿಸಿದ್ದಾರೆ. ಜಪಾನಿ ಭಾಷೆಯ ಮೂಲ ಕೃತಿ ೧೯೮೧ ರಲ್ಲಿ ಪ್ರಕಟವಾಗಿದ್ದು, ೨೦೦೦ದ ಇಸವಿಯಲ್ಲಿ ವಿ. ಗಾಯತ್ರಿಯವರು ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಶಿಕ್ಷಣವೆಂದರೆ ಕೇವಲ ಪಠ್ಯಪುಸ್ತಕಗಳಲ್ಲ, ಮಕ್ಕಳ ಕುತೂಹಲ, ಸೃಜನಾತ್ಮಕತೆ, ಆಟೋಟ, ಸಂಗೀತ ಮತ್ತು ಪ್ರಕೃತಿಯೊಂದಿಗೆ ಬೆರೆಯುವಿಕೆಯೂ ಮುಖ್ಯ ಎಂದು ಹೇಳುವ ಈ ಕೃತಿ, ಶಿಕ್ಷಕರು ಮತ್ತು ಪೋಷಕರು ಮಕ್ಕಳನ್ನು ನೋಡುವ ದೃಷ್ಟಿಕೋನವನ್ನು ಬದಲಾಯಿಸಬಲ್ಲ ಮಹತ್ವದ ಪುಸ್ತಕವಾಗಿದೆ.

ಸುಮಾರು ೧೫-೨೦ ವರ್ಷಗಳ ಹಿಂದೆ ನಾನು MBBS ಕಲಿಯುವಾಗ, ನನ್ನ ಶಾಲಾ ಸ್ನೇಹಿತೆಯರಿಬ್ಬರು ಆಗ ತಾನೇ D.Ed ಮುಗಿಸಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ನೇಮಕಗೊಂಡ ಹೊಸತು. ಅವರಿಗೆ ತರಬೇತಿಯ ಸಮಯದಲ್ಲಿ "ತೊತ್ತೊ-ಚಾನ್" ಮತ್ತು "ಹಗಲುಗನಸು" ಎಂಬ ಎರಡು ಪುಸ್ತಕಗಳನ್ನು ಶಿಕ್ಷಣ ಇಲಾಖೆ ಉಚಿತವಾಗಿ ಹಂಚಿದ್ದನ್ನು ನನಗೂ ಓದಲು ನೀಡಿದ್ದರು. ಅಂದು ಕಾಲೇಜಿನ ದಿನಗಳಲ್ಲಿದ್ದಾಗ ಮೊಟ್ಟಮೊದಲ ಬಾರಿಗೆ ಈ ಪುಸ್ತಕವನ್ನು ಓದಿದ್ದರೂ ಅದು ದೀರ್ಘಕಾಲದವರೆಗೆ ನನ್ನ ಮನಸ್ಸಿನಲ್ಲಿ ಉಳಿದುಬಿಟ್ಟಿದೆ. ಅಂದಿನಿಂದ, ಬಾಲ್ಯದ ಕುರಿತು ನನಗಿದ್ದ ದೃಷ್ಟಿಕೋನವನ್ನು ಅದು ಆಳವಾಗಿ ಪ್ರಭಾವಿಸಿ, ಶಿಕ್ಷಣದ ಬಗ್ಗೆ ನನ್ನ ವಿಚಾರಗಳನ್ನು ರೂಪಿಸಿದ್ದಲ್ಲದೇ, ನನ್ನ ಮಗಳನ್ನು ಒಂದನೇ ತರಗತಿಯಿಂದ ಯಾವ ಶಾಲೆಗೆ ಸೇರಿಸಬೇಕು ಎಂದು ಮೊನ್ನೆ ಮೊನ್ನೆಯವರಿಗೂ ನನ್ನಲಿದ್ದ ಗೊಂದಲಕ್ಕೆ ಪರಿಹಾರವನ್ನು ಸೂಚಿಸಿದೆ. ನಾನು ಹುಟ್ಟುವುದಕ್ಕೂ ಮೊದಲೇ ಪ್ರಕಟಗೊಂಡ ಪುಸ್ತಕವು ನನ್ನ ಮಗಳು ಹುಟ್ಟಿದ ಮೇಲೂ ಪ್ರಸ್ತುತವಾಗಿರುವುದೇ ಅದರ ಹೆಗ್ಗಳಿಕೆ.

ತೊತ್ತೊ ಚಾನ್ ಎಂಬ ಆರು ವರ್ಷದ ತುಂಟ ಹುಡುಗಿಯನ್ನು "ಅವಳು ವಿಪರೀತ ಕುತೂಹಲದಿಂದ

ಏನಾದರೂ ತುಂಟತನ ಮಾಡುತ್ತಲೇ ಇರುತ್ತಾಳೆ, ಇದರಿಂದ ಬೇರೆ ಮಕ್ಕಳೂ ಅವಳೊಂದಿಗೆ ಸೇರಿ ಕಲಿಕೆಯಲ್ಲಿ ಆಸಕ್ತಿ ತೋರುವುದಿಲ್ಲವೆಂದು" ದೂರು ನೀಡಿ ಶಾಲೆಯಿಂದ ಹೊರಹಾಕಿರುತ್ತಾರೆ. ಹೊಸ ಶಾಲೆಯಲ್ಲಾದರೂ ಇವಳಿಗೆ ಒಂದನೇ ತರಗತಿಗೆ ಪ್ರವೇಶ ಸಿಗುತ್ತದಾ? ಎಂಬುದು ಅವಳಮ್ಮನ ಚಿಂತೆ. ಮಗಳನ್ನು ಶಾಲೆಯಿಂದ ಹೊರ ಹಾಕಿರುವ ವಿಷಯವನ್ನು ಅವಳಿಗೆ ತಿಳಿಸದೇ, ಕಳವಳದಲ್ಲೇ 'ತೊಮೆಯೆ ಗಾಕುಯೆನ್' ಶಾಲೆಗೆ ಮಗಳೊಂದಿಗೆ ಬರುತ್ತಾಳೆ. ಆ ದಿನ ಶಾಲೆಯ ಮುಖ್ಯೋಪಾಧ್ಯಾಯರಾದ ಕೊಬಾಯಾಶಿಯವರು ತೊತ್ತೊ ಚಾನ್‌ಳ ಮಾತುಗಳನ್ನು ತಾಳ್ಮೆಯಿಂದ ನಾಲ್ಕು ಗಂಟೆ ಕೇಳುತ್ತಾರೆ! ಇದು ಮಗುವಿಗೆ, ಮತ್ತು ಮಗುವಿನ ಭಾವನೆಗಳ ಅಭಿವ್ಯಕ್ತಿಗೆ ಅವರು ಕೊಡುತ್ತಿದ್ದ ಗೌರವವನ್ನು ತೋರಿಸುತ್ತದೆ. 'ನೀನು ನಿಜವಾಗಿಯೂ ಒಳ್ಳೆಯ ಹುಡುಗಿ' ಎಂದು ಪದೇ ಪದೇ ಹೇಳುವ ಮೂಲಕ ಮುಂದೆ ಅವಳ ಆತ್ಮವಿಶ್ವಾಸವನ್ನು ಬಲಪಡಿಸುವ ಸನ್ನಿವೇಶಗಳು ಸಾಕಷ್ಟು ಕಾಣಸಿಗುತ್ತವೆ. ತೊತ್–ಚಾನ್ ಎಂಬ ತುಂಟ ಬಾಲಕಿಯನ್ನು ಸಭ್ಯ ಪ್ರಜೆಯನ್ನಾಗಿ, ಅಂಗವೈಕಲ್ಯದ ಬಾಲಕನನ್ನು ಆತ್ಮವಿಶ್ವಾಸದ ಚಿಲುಮೆಯನ್ನಾಗಿ ಪರಿವರ್ತಿಸಿದ ಶಾಲೆ. "ಶಾಲೆಯು ಮಗುವನ್ನು ಸೇರಿಸಿಕೊಳ್ಳುವುದಲ್ಲ ಬದಲಾಗಿ ಮಗುವಿಗೆ ಶಾಲೆ ಸೇರಬೇಕು (ಇಷ್ಟವಾಗಬೇಕು)" ಎಂಬುದು ಅವರ ವಾದ. ಎಂಥವರಿಗೂ ಇಷ್ಟವಾಗುವ ವಾತಾವರಣ ಅವರ ಶಾಲೆಯಲ್ಲಿತ್ತು.







ಶಾಲೆಯ ವಿಶೇಷತೆಗಳನ್ನು ಹಾಗೂ ತೊತ್–ಚಾನ್‌ಳ ಬಾಲ್ಯದ ತುಂಟಾಟದ, ಸಾಹಸದ ಹಾಗೂ ಮೋಜಿನ ಕತೆಗಳನ್ನು ಪುಸ್ತಕದ ತುಂಬೆಲ್ಲ ಎಳೆಎಳೆಯಾಗಿ ಹೆಣೆದಿಟ್ಟಿದ್ದಾರೆ. ತೊಮೊಯೆ ಶಾಲೆಯಲ್ಲಿ ಹಳೆಯ ನಿರುಪಯುಕ್ತ ರೈಲು ಬೋಗಿಗಳನ್ನು ತರಗತಿಗಳಾಗಿ ಬಳಸಲಾಗುತ್ತಿತ್ತು ಮತ್ತು ಮಕ್ಕಳು ಬಯಲಿನಲ್ಲಿ ಅಡುಗೆ, ಸಂಗೀತ, ನಾಟಕ ಮುಂತಾದ ಚಟುವಟಿಕೆಗಳನ್ನು ಕಲಿಯುತ್ತಿದ್ದರು. ಪಠ್ಯಕ್ರಮದ ಜೊತೆಗೆ ಹೇಗೆ ಮಕ್ಕಳ ಆಸಕ್ತಿ ಮತ್ತು ಸೃಜನಶೀಲತೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿತ್ತು ಎಂಬುದನ್ನ ಲೇಖಕಿ ಸಣ್ಣ ಸಣ್ಣ ಕಥಾ ಸರಣಿಗಳ ಮೂಲಕ ವಿವರವಾಗಿ ದಾಖಲಿಸಿದ್ದಾರೆ.




ಮುಖ್ಯೋಪಾಧ್ಯಾಯರಾದ ಕೊಬಾಯಾಶಿಯವರು ಮಕ್ಕಳಿಗೆ ಸಾಧ್ಯವಿದ್ದಷ್ಟು ಹಳೆ ಬಟ್ಟೆ ತೊಡಿಸಿ ಶಾಲೆಗೆ ಕಳಿಸಲು ಹೇಳುತ್ತಾರೆ ಯಾಕೆಂದರೆ ಮಕ್ಕಳು ಬಟ್ಟೆ ಕೊಳೆ ಮಾಡಿಕೊಂಡರೆ/ಹರಿದುಕೊಂಡರೆ ತಾಯಂದಿರು ಬಯ್ಯಬಾರದೆಂಬ ಕಾಳಜಿಯಿಂದ. ಶಾಲೆಯಲ್ಲಿ ಮಕ್ಕಳು ತಮಗಿಷ್ಟ ಬಂದಂತೆ ಆಡಬಹುದಿತ್ತು. ಮಕ್ಕಳು ಶಾರೀರಿಕವಾಗಿ ಸಧೃಢರಾಗಲು ವ್ಯಾಯಾಮ ಅತೀ ಅಗತ್ಯ. ಆದರೆ ವ್ಯಾಯಾಮ ಶಿಸ್ತಿನ ಕಾಟಾಚಾರದ ಚಟುವಟಿಕೆಯಾಗದೇ ಮಕ್ಕಳು ಆಸಕ್ತಿಯಿಂದ ಸಂತಸದಿಂದ ಪಾಲ್ಗೊಳ್ಳಲು ಸಂಗೀತದ ತಾಳಗಳೊಂದಿಗೆ ವ್ಯಾಯಾಮ ಮಾಡುವದರ ಬಗ್ಗೆ ಅಪಾರ ಸಂಶೋಧನೆಯನ್ನೂ ಕೈಗೊಂಡು ಅದನ್ನು ರೂಢಿಗೆ ತರುತ್ತಾರೆ. ಕ್ರೀಡೋತ್ಸವಗಳನ್ನು ಕೂಡಾ ವಿಶೇಷವಾಗಿ ಆಯೋಜಿಸಲಾಗುತ್ತಿತ್ತು, ಕೇವಲ ಶಕ್ತಿವಂತರೆ ಸ್ಪರ್ಧೆ ಗೆಲ್ಲುವಂತಾಗದೇ

ಶಕ್ತಿ-ಯುಕ್ತಿ ಮೇಳೈಸಿರುವ ವಿಶೇಷ ಚೇತನ ಮಕ್ಕಳೂ ಸ್ಪರ್ಧೆ ಗೆಲ್ಲುವಂತೆ ಅವಕಾಶ ಕಲ್ಪಿಸಲಾಗುತ್ತಿತ್ತು.

ಮಕ್ಕಳಿಗೆ ಸಮತೋಲನ ಆಹಾರ ತಿನ್ನಿಸುವ ಉದ್ದೇಶದಿಂದ "ಸ್ವಲ್ಪ ನೆಲದ್ದು, ಸ್ವಲ್ಪ ಜಲದ್ದು ಆಹಾರ" ತರಲು ಹೇಳಲಾಗುತ್ತಿತ್ತು. ಮಕ್ಕಳ ಬುತ್ತಿಯನ್ನೂ ಪರೀಕ್ಷಿಸಿ ಅವರಿಂದಲೇ ನೆಲದ-ಜಲದ ಆಹಾರ ವಿಂಗಡಿಸಲು ಹೇಳಿ, ಯಾರಾದರೂ ತರದೇ ಬಂದಿದ್ದರೆ, ಶಾಲೆಯಲ್ಲಿಯೇ ಇದ್ದ ಅಡಿಗೆ ಮನೆಯಲ್ಲಿ ತಯಾರಿಸಿದ್ದನ್ನು ಮಕ್ಕಳಿಗೆ ಕೊಡಲಾಗುತ್ತಿತ್ತು. ಸಸ್ಯಗಳು, ಹೂಗಳು, ಹಣ್ಣುಗಳು ಇವನ್ನೆಲ್ಲಾ ಆಯಾ ಪ್ರದೇಶಕ್ಕೇ ಹೋಗಿ ತೋರಿಸಿ ಕಲಿಸಲಾಗುತ್ತಿತ್ತು. ವಾಕಿಂಗ್ ಹೋಗೋಣವಾ ಎಂದು ಹೊರಟ ಶಿಕ್ಷಕಿ ಸಾಸಿವೆ ಗಿಡಗಳತ್ತ ಕರೆದೊಯ್ದು ಪರಾಗಸ್ಪರ್ಶ ಇತ್ಯಾದಿ ಕುರಿತು ಹೇಳುತ್ತಾರೆ. ಹೀಗೆ ಕಲಿಯುತ್ತಿದ್ದೇನೆಂಬ ಅನುಭವ ಬರದಂತೆ ಶಿಕ್ಷಣ ಶಿಕ್ಷೆಯಾಗದೇ ಸಂತಸದಾಯಕವಾಗಿ ಕಲಿಸುತ್ತಾರೆ. ಹೊರಸಂಚಾರಗಳ ಮೂಲಕ ಪ್ರಕೃತಿಯ ಪರಿಚಯ, ಕಾಡು, ಬೆಟ್ಟಗುಡ್ಡಗಳ, ನದಿಜಲಪಾತಗಳ, ಗಿಡಮರಗಳ, ಹೂಗಳ, ಕೀಟಗಳ ಹೀಗೆ ಎಲ್ಲವನ್ನು ತಿಳಿಹೇಳುತ್ತ ಅವುಗಳನ್ನು ಆಸ್ವಾದಿಸುವಂತೆ ಮಕ್ಕಳಿಗೆ ತಿಳಿಸಲಾಗುತ್ತಿತ್ತು.



"ಈಗ ನೀನು ಈ ಶಾಲೆಯ ವಿದ್ಯಾರ್ಥಿನಿ" ಎಂದು ಮುಖ್ಯೋಪಾಧ್ಯಾಯರು ಹೇಳಿದ ಮೇಲೆ ತೊತ್ತೊ-ಚಾನ್ ನಾಳೆ ಬೆಳಗಾಗುವುದನ್ನೇ ಕಾಯ್ದಳು. ಈ ಮೊದಲು ಆಕೆ ಎಂದೂ ಹಾಗೆ ಕಾಯ್ದಿರಲಿಲ್ಲ. ಪುಟ್ಟ ತೊತ್ತೊ-ಚಾನ್ ತೊಮೊಯೆ ಗಾಕುಯೆನ್ ಶಾಲೆಯ ವಾತಾವರಣ ತಾನು ಹಾಗೂ ತನ್ನ ತರಗತಿಯ ಎಲ್ಲ ವಿದ್ಯಾರ್ಥಿಗಳಿಗೆ ಇಷ್ಟವಾಗಬೇಕು ಹಾಗೂ ಸಮವಸ್ತ್ರ ಮತ್ತು ಪಠ್ಯಕ್ರಮಕ್ಕಿಂತ ಮಕ್ಕಳಿಗೆ ಬೇಕಾದ ಸ್ವಾದಿಷ್ಟ ಊಟದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವ ಮುಖ್ಯೋಪಾಧ್ಯಾಯರು ಇರಬೇಕು ಎಂದು ಆಶಿಸಿದ್ದಳು. ಅಲ್ಲಿ ಎಲ್ಲ ಮಕ್ಕಳು ಸಂಗೀತ ಕಲಿಯುತ್ತಿದ್ದರು, ಆಟವಾಡುತ್ತಿದ್ದರು, ಬೇಸಿಗೆಯಲ್ಲಿ ಹೊರಗೆ ಕ್ಯಾಂಪು ಹಾಕುತ್ತಿದ್ದರು, ಬಿಸಿನೀರಿನ ಬುಗ್ಗೆಯಲ್ಲಿ ನಡೆದಾಡುತ್ತಿದ್ದರು, ನಾಟಕ ಆಡುತ್ತಿದ್ದರು ಹಾಗೂ ಬಯಲಿನಲ್ಲಿ ಅಡುಗೆ ಮಾಡುವ ಆನಂದ ಅನುಭವಿಸುತ್ತಿದ್ದರು. ಆ ಮಕ್ಕಳಲ್ಲಿ ಕೆಲವರು ಹಾಡುಗಾರರಿದ್ದರು, ಆಟಗಾರರಿದ್ದರು ಹಾಗೂ ಒಬ್ಬ ಭಾವೀ ಡಾಕ್ಟರ್ ಕೂಡ ಇದ್ದ.

ಇದೆಲ್ಲವೂ ಸ್ನೇಹಶೀಲ ಹಾಗೂ ಕಲ್ಪನಾಶೀಲ ಮುಖ್ಯೋಪಾಧ್ಯಾಯ ಶ್ರೀ ಕೊಬಾಯಾಶಿ ಅವರಿಂದ ಸಾಧ್ಯವಾಯಿತು. ಅವರು ತೊತ್ತೊ-ಚಾನ್‌ಗೆ ಯಾವಾಗಲೂ ಹೇಳುತ್ತಿದ್ದರು: "ನೀನು ಖಂಡಿತಾ ಒಳ್ಳೆಯ ಹುಡುಗಿ!" ನಿಸ್ಸಂದೇಹವಾಗಿ ಅವರು ಇದೇ ಪ್ರೋತ್ಸಾಹಕ ಮಾತನ್ನು ಇತರ ಮಕ್ಕಳಿಗೂ ಹೇಳುತ್ತಿದ್ದಿರಬೇಕು. ಮಕ್ಕಳನ್ನು ಉಲ್ಲಾಸದಿಂದಿಡುವ ಕಡೆಗೆ ಅವರು ಹೆಚ್ಚಿನ ಗಮನಹರಿಸುತ್ತಿದ್ದರು. ಅವರ ಶಾಲೆ ಮಕ್ಕಳಿಗೆ ಮನೆಯಿಂದ ದೂರವಿರುವ ಮತ್ತೊಂದು ಮನೆಯಂತಿತ್ತು. ಆಗಿನ ಪುಟ್ಟ ಹುಡುಗಿ ತೊತ್ತೊ-ಚಾನ್ ಈಗ ದೊಡ್ಡವಳಾಗಿ ತೆತ್ಸುಕೊ ಕುರೊಯಾನಾಗಿ ಎಂಬ ಹೆಸರಿನಲ್ಲಿ ಜಪಾನಿನಾದ್ಯಂತ ಪ್ರಸಿದ್ಧಿ ಪಡೆದ ಯಶಸ್ವೀ ಟೆಲಿವಿಷನ್ ಕಲಾವಿದೆ. ಆಕೆ ತನ್ನ ಶಾಲೆಯ ಬಗ್ಗೆ ಬಹಳಷ್ಟು ವಿಷಯಗಳನ್ನು ಹೇಳುತ್ತಾರೆ. ಜಪಾನಿನಿಂದ ಯುನಿಸೆಫ್‌ನ ಸದ್ಭಾವನಾ ರಾಯಭಾರಿಯಾಗಿ ನೇಮಕಗೊಂಡಿರುವ ಅವರಿಂದ ಮಕ್ಕಳು, ಹಾಗೆಯೇ ಮಕ್ಕಳ ಜೊತೆ ಒಂದಲ್ಲ ಒಂದು ರೀತಿಯ ಸಂಬಂಧವನ್ನು ಹೊಂದಿರುವ ಶಿಕ್ಷಕರು, ತಂದೆ-ತಾಯಿಗಳು, ಅಜ್ಜ-ಅಜ್ಜಿಯರು ತಿಳಿದುಕೊಳ್ಳುವುದು ಬಹಳಷ್ಟಿದೆ. ಜಪಾನಿನ ಈ ಜನಪ್ರಿಯ ಪುಸ್ತಕ ತನ್ನ ಪ್ರಭಾವಶಾಲಿ ಸಂದೇಶ ಸಾರುತ್ತದೆ:

ಅರಳಲಿ ಹೂಗಳು ನೂರಾರು
ನಡೆಯಲಿ ವಿಚಾರ ಸಂಘರ್ಷಗಳು ಸಾವಿರಾರು

ಶ್ರೀಮತಿ ವಿ. ಗಾಯತ್ರಿಯವರು ಈ ಪುಸ್ತಕವನ್ನು ಅನುವಾದಿಸಿದ್ದಾರೆ.

Totto-Chan *(Kannada)*

₹ 100.00
ISBN 812373103-5

nbt.india
ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

19201456

ಒಟ್ಟಾರೆಯಾಗಿ ಹೇಳಬೇಕೆಂದರೆ ತುಂಟಿಯಾಗಿ 'ಕೆಟ್ಟ ಹುಡುಗಿ' ಎಂಬ ಕೆಟ್ಟ ಬಿರುದು ಪಡೆದ ತೊತ್ತೋ ಚಾನ್ ಈ ಶಾಲೆಯ ದೆಸೆಯಿಂದಾಗಿ 'ಒಳ್ಳೆಯ ಹುಡುಗಿ' ಯಾಗಿ ಪರಿವರ್ತನೆಗೊಂಡ ಬಗೆಯನ್ನು ಪುಸ್ತಕ ಬಿಚ್ಚಿಡುತ್ತದೆ. ಒಬ್ಬ ವ್ಯಕ್ತಿಯ ವ್ಯಕ್ತಿತ್ವ ಅರಳಲು ಸಮಾಜಯೋಗ್ಯವಾದ ವ್ಯಕ್ತಿಯಾಗಿ ಬೆಳೆಯಲು ಶಿಕ್ಷಕನೆಷ್ಟು ಕಾರಣೀಕರ್ತನೆಂಬುದನ್ನು ಓದುಗನಿಗೆ ಮನವರಿಕೆ ಮಾಡಿಕೊಡುತ್ತದೆ.

ಹೌದು, ಮಕ್ಕಳನ್ನು ಪ್ರೋತ್ಸಾಹಿಸುತ್ತ ಅವರನ್ನು ಅವರಿಚ್ಛೆಯಂತೆ ಕಲಿಯಲು ಪ್ರೇರೆಪಿಸುವ ಕೊಬಾಯಾಶಿಯವರ ತೊಮೊಯೆ ಶಾಲೆ ಅಮೇರಿಕಾದ ಬಿ-೨೯ ವಿಮಾನ ಹಾಕಿದ ಬಾಂಬ್ ದಾಳಿಯಿಂದ ೧೯೪೫ ರಲ್ಲಿ ನಾಶಗೊಳ್ಳುತ್ತದೆ. ಆ ಕತ್ತಲ ರಾತ್ರಿಯಲ್ಲಿ ಆರಿಸಲು ಅಸಾಧ್ಯವಾದ ಬೆಂಕಿಯು ತೊಮೊಯೆಯನ್ನು ಕಬಳಿಸಿದ್ದನ್ನು ರಸ್ತೆಯಲ್ಲಿ ನಿಂತು ನೋಡುತ್ತಲೇ "ಮುಂದೆ ಎಂತಹ ಶಾಲೆಯನ್ನು ನಾವು ಕಟ್ಟೋಣ?" ಎಂದು ಅದರ ಪುನರ್ನಿರ್ಮಾಣಕ್ಕೆ ಪಣತೊಟ್ಟು ಅದು ಕೈಗೊಳ್ಳುವ ಮೊದಲೇ ೧೯೬೩ ರಲ್ಲಿ ತಮ್ಮ ೬೯ ನೇ ವಯಸ್ಸಿನಲ್ಲೇ ಅಸುನೀಗುತ್ತಾರೆ. ಆ ಶಾಲೆಯಲ್ಲೇ ಶಿಕ್ಷಕಿಯಾಗಿ ಸೇವೆ ಸಲ್ಲಿಸುವ ಎಂಬ ತೊತ್ತೊ-ಚಾನ್‌ಳ ಬಯಕೆಯೂ ಇಡೇರಲಿಲ್ಲ. ಆದರೆ ಅಂದು ಕೊಬಾಯಾಶಿಯವರು ತೊಮೆಯಲ್ಲಿ ಸೃಷ್ಟಿಸಿದ್ದ ಶಾಲೆಯ ಹಾಗೂ ಅವರ ಕಲಿಕಾ ವಿಧಾನಗಳನ್ನು ಲೇಖಕರು ತೊತ್ತೊ-ಚಾನ್ (ತಮ್ಮದೇ) ಪಾತ್ರದ ಮೂಲಕ ಜಪಾನಿನ ತೊಮೆಯೆ, ಕೊಬಾಯಾಶಿಯ ಶಿಕ್ಷಣದ ವಿನೂತನ ಪ್ರಯೋಗಗನ್ನು ಜಗತ್ತಿಗೆ ಪರಿಚಯಿಸಿದ್ದಾರೆ. ಈ ಪುಸ್ತಕವು ಬಿಡುಗಡೆಯಾದ ಮೇಲೆ ಜಗತ್ತಿನಾದ್ಯಂತ ಮೂಡಿಸಿದ ಸಂಚಲನವನ್ನು ಮುನ್ನುಡಿಯಲ್ಲಿ ವಿವರವಾಗಿ ದಾಖಲಿಸಿದ್ದಾರೆ. ಶಿಕ್ಷಣದ ವಿಭಿನ್ನ ಕಲಿಕೆಯ ಮಾದಿರಗಳನ್ನು ಅರಿಯಲು ಪ್ರತಿಯೊಬ್ಬ ಶಿಕ್ಷಕರು, ಪಾಲಕರು, ಶಿಕ್ಷಣ ತಜ್ಞರು ಓದಲೇಬೇಕಾದ ಪುಸ್ತಕ ಇದು. ಓದುವಾಗ ನಿಮ್ಮ ಬಾಲ್ಯದ ನೆನಪು ಬರದೇ ಇದ್ದರೆ ಹೇಳಿ. ಅಂದ ಹಾಗೆ ನನ್ನ ಮಗಳು ಅನ್ವಿ ಈಗ ಧಾರವಾಡದ ಬಾಲಬಳಗ ಶಾಲೆಯ ಹುಡುಗಿ ಅವಳೂ ಸಹ ದೊಡ್ಡವಳಾದ ಮೇಲೆ ಅದೇ ಶಾಲೆಯಲ್ಲಿ ಮೌಶಿ (ಶಿಕ್ಷಕಿ) ಆಗುತ್ತಾಳಂತೆ !

## ಕೃತಿ ಪರಿಚಯ

# ಇತ್ತೀಚಿಗೆ ಬಿಡುಗಡೆಯಾದ ವೈದ್ಯರ ಕೃತಿಗಳು



ಡಾ. ಉಮಾ ಚಿಕ್ಕರೆಡ್ಡಿ
ವಿಭಾಗಿಯ ಸಂಪಾದಕರು

**೧. ಕನ್ನಡ ಹನುಮಾನ್ ಚಾಲೀಸಾ ಮತ್ತು ಬೇಲೂರ ಚೆಲುವ ಚೆನ್ನಿಗ**

ಲೇಖಕರು : ಡಾ. ದಯಾನಂದ ಲಿಂಗೇಗೌಡ
ಪ್ರಕಾಶನ : ಕದಂಬ ಪಬ್ಲಿಕೇಷನ್
ಪುಟಗಳು : ೧೦೦
ಪುಸ್ತಕದ ದರ : ೮೦/-
ಕೃತಿಯ ಬಗ್ಗೆ : ಹನುಮಾನ್ ಚಾಲೀಸದ ಕನ್ನಡ ಅನುವಾದ ಹಾಗೂ ಬೇಲೂರು ಚೆನ್ನಕೇಶವ ದೇವರ ಮೇಲೆ ಬರೆದ ದಾಸ ಸಾಹಿತ್ಯ ಶೈಲಿಯ ಕೀರ್ತನೆಗಳು ಮತ್ತು ಉಗಾಭೋಗಗಳಿವೆ.







**೨. ರೆಡ್‌ಲೈಟ್ 'ಅರ್ಜ್' ದೊಳಗಿನ ದಿನಗಳು**

ಲೇಖಕರು : ಡಾ. ಸಂಜೀವ್ ಕುಲಕರ್ಣಿ
ಪ್ರಕಾಶನ : ಸ್ವಯಂದೀಪ ಝುನ್ ಕೇಂದ್ರ
ಪುಟಗಳ ಸಂಖ್ಯೆ : ೯೮
ಪುಸ್ತಕದ ದರ : ೧೦೦/-
ಕೃತಿಯ ಬಗ್ಗೆ : ಡಾ. ರೂಪೇಶ್ ಪಾಟಕರ್ ಅವರ ಮರಾಠಿ ಭಾಷೆಯ "ಅರ್ಜ್ ಮಧಲೆ ದಿವಸ್" ಎಂಬ ಮೂಲ ಕೃತಿಯ ಅನುವಾದವಾಗಿದ್ದು ಒಬ್ಬ ಮನೋರೋಗತಜ್ಞ ರೆಡ್ ಲೈಟ್ ಏರಿಯಾ ವೈಶ್ಯೆಯರೊಂದಿಗೆ ಕೆಲಸ ಮಾಡುತ್ತಿರುವಾಗ ಪಡೆದ ಅನುಭವಗಳನ್ನು ಒಳಗೊಂಡಿದೆ.

**೩. ಒಲಿದಂತೆ ಹಾಡು (ತೊಂಬತ್ತು ಮತ್ತೊಂಬತ್ತು)**

ಲೇಖಕರು : ಡಾ. ರವಿ ರಾಜೇಶ್ವರ
ಪುಟಗಳ ಸಂಖ್ಯೆ : ೧೩೪
ಪುಸ್ತಕದ ದರ : ೨೦೦/-
ಕೃತಿಯ ಬಗ್ಗೆ : ಒಲಿದಂತೆ ಹಾಡು ಕೃತಿಯು,। ಡಾ. ರವಿ ರಾಜೇಶ್ವರ ಅವರ ಎರಡನೇ ಕವನ ಸಂಕಲನವಾಗಿದ್ದು, ಒಟ್ಟು ೯೯ ಕವಿತೆಗಳನ್ನು ಒಳಗೊಂಡಿದೆ.



**೪. ಕ್ಯಾನ್ಸರ್ ತಡೆಗಟ್ಟಬಹುದು ನಿಮಗಿದು ಗೊತ್ತೆ: ಪ್ರತಿಯೊಬ್ಬ ಮಹಿಳೆಗಾಗಿ ವೈದ್ಯರ ಕೈಪಿಡಿ**

ಲೇಖಕರು : ಡಾ. ಜ್ಯೋತಿ ಎಸ್. ಘೊಂಗಡೆಮಠ
ಪ್ರಕಾಶನದ ಹೆಸರು : ಸ್ವಾಮಿ ಸಿಂಫನಿ ಪ್ರಕಾಶನ, ಬೆಂಗಳೂರು
ಒಟ್ಟು ಪುಟಗಳ ಸಂಖ್ಯೆ : ೨೦೦
ಪುಸ್ತಕದ ದರ : ೨೫೦/–
ಕೃತಿಯ ಬಗ್ಗೆ : ಈ ಪುಸ್ತಕವು ಗರ್ಭಕಂಠ, ಅಂಡಾಶಯ ಮತ್ತು ಸ್ತನ ಕ್ಯಾನ್ಸರ್ ಸೇರಿದಂತೆ ವಿವಿಧ ಕ್ಯಾನ್ಸರ್‌ಗಳ ಬಗ್ಗೆ ವೈಜ್ಞಾನಿಕ ಹಾಗೂ ಸುಲಭವಾಗಿ ಅರ್ಥವಾಗುವ ಮಾಹಿತಿ, ಮಾರ್ಗಸೂಚಿಗಳು ಮತ್ತು ಕ್ಯಾನ್ಸರ್ ಗೆದ್ದವರ ಕಥೆಗಳನ್ನು ಒಳಗೊಂಡಿದೆ.







**೫. "ಹೃದಯ ತಾರುಣ್ಯ"**

ಲೇಖಕರು : ಡಾ. ರಣಜಿತ ಬೀರಣ್ಣ ನಾಯ್ಕ
ಕೆಂಚನ್ ಹಿರೇಗುತ್ತಿ
ಪ್ರಕಾಶನ : ಸಪ್ನಾ ಬುಕ್ ಹೌಸ್
ಪುಸ್ತಕದ ದರ : ೨೨೫/–
ಕೃತಿಯ ಬಗ್ಗೆ : ಡಾ. ರಣಜಿತ ಬೀರಣ್ಣ ನಾಯ್ಕರ ಒಂಬತ್ತನೇ ಕೃತಿಯಾಗಿದೆ. ಯುವ ಜನಾಂಗದಲ್ಲಿ ಹೆಚ್ಚುತ್ತಿರುವ ಹೃದಯ ರೋಗ ಕುರಿತು ಬೆಳಕು ಚೆಲ್ಲಿ, ಸಮಾಜದ ಗಮನ ಸೆಳೆದು, ಪರಿಹಾರ ಕಂಡುಕೊಳ್ಳಲು ಪ್ರೇರೇಪಿಸುವ ಉದ್ದೇಶವನ್ನು ಈ ಪುಸ್ತಕ ಹೊಂದಿದೆ.

**೬. ವಾತ್ಸಲ್ಯದ ಒಸಗೆ**

ಲೇಖಕರು : ಡಾ ರಾಜಲಕ್ಷ್ಮಿ
ಪ್ರಕಾಶಕರು : ಸಾರಂಗ ಪ್ರಕಾಶನ ಉಡುಪಿ
ಪುಟಗಳ ಸಂಖ್ಯೆ : ೧೬೮
ಪುಸ್ತಕದ ದರ : ೨೧೦/–
ಕೃತಿಯ ಬಗ್ಗೆ : ಋತುಮತಿಯಾಗುವಲ್ಲಿನಿಂದ ಋತುಬಂಧದ ವರೆಗಿನ ಹದಿಹರೆಯದ ದೈಹಿಕ, ಮಾನಸಿಕ ಸಮಸ್ಯೆಗಳು, ಗರ್ಭಿಣಿಯರ ಆರೋಗ್ಯ, ಆಹಾರ, ವ್ಯಾಯಾಮ, ಅಪಾಯಕಾರಿ ಗರ್ಭಧಾರಣೆ, ಸಂತಾನಹೀನತೆ, ಮೆನೋಪಾಸ್ ಹಾಗೂ ಜೀವನ ಶೈಲಿಯ ಕಾಯಿಲೆಗಳ ಕುರಿತು ಸಾರ್ವಜನಿಕ ಅರಿವು ಮೂಡಿಸುವ ಲೇಖನಗಳ ಸಂಕಲನ







**೭. ಮಕ್ಕಳ ಆರೋಗ್ಯ ಮತ್ತು ಪರಿಸರ**

ಲೇಖಕರು : ಡಾ. ಸೋಮಶೇಖರ್. ಎ. ಆರ್.
ಎಂ. ಎನ್. ಜಯಶ್ರೀ
ಪ್ರಕಾಶಕರು : ಸಪ್ನಾ ಬುಕ್ ಹೌಸ್
ಪುಟಗಳ ಸಂಖ್ಯೆ : ೨೫೯
ಪುಸ್ತಕದ ದರ : ೨೫೦/–
ಕೃತಿಯ ಬಗ್ಗೆ : ಮಕ್ಕಳ ಆರೋಗ್ಯದ ಮೇಲೆ ಪರಿಸರ ಮಾಲಿನ್ಯ ಉಂಟು ಮಾಡುವ ದುಷ್ಪರಿಣಾಮ ಹಾಗು ಪರಿಹಾರಗಳನ್ನೂ ಒಳಗೊಂಡಿದೆ.

ಕಥೆ

# ಪಿತ್ತಕೋಶದ ಕಲ್ಲುಗಳು



**ಡಾ. ಶಿಶಿರ ಎಸ್. ರಾನಡೆ**
ಸಹಾಯಕ ಪ್ರಾಧ್ಯಾಪಕರು, ಸುರೂಪಿಕ ಶಸ್ತ್ರಚಿಕಿತ್ಸಾ ವಿಭಾಗ, ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು



ಡಾ. ದಿವ್ಯಾ ಕೆ. ಎನ್.
ವಿಭಾಗೀಯ ಸಂಪಾದಕರು

ಅಂದು ಎಂದಿನಂತೆ ಬೆಳಗ್ಗೆ ಎದ್ದು ವಾರ್ಡ್ ರೌಂಡ್ ಮಾಡುತ್ತಾ ಇದ್ದಾಗ ಶುಶ್ರೂಷಕ ಗೆಳೆಯ ಮಹೇಶ್ ಸಿಕ್ಕಿ “ಗುಡ್ ಮಾರ್ನಿಂಗ್ ಸರ್” ಎಂದ. ಪ್ರತಿನಮಸ್ಕರಿಸಿ “ಏನಯ್ಯ ನಿನ್ನ ಊರಿನ ತಾತಪ್ಪ ಹೇಗಿದ್ದಾರಂತೆ? ಏನಾದರೂ ಗೊತ್ತಾಯ್ತಾ?” ಎಂದೆ. “ಅಯ್ಯೋ ಆ ಮಾದೇಗೌಡ ಪೇಶಂಟ್ ಅಲ್ವಾ, ಅವರು ತೀರಿಕೊಂಡರು ಸಾರ್” ಎಂದ. “ಅಯ್ಯೋ ಪಾಪ, ಸರ್ಜರಿ ಮಾಡಿಸಿಕೊಂಡ ನಂತರ ಏನಾದರೂ ತೊಂದರೆ ಆಗಿ ಹಾಗಾಯಿತೇನೋ?” ಎಂದೆ. “ಇಲ್ಲ ಸರ್, ಅದಾದ ಮೇಲೆ ಮೂರು ತಿಂಗಳು ಚೆನ್ನಾಗಿದ್ದರು. ಹೊಲಕ್ಕೆಲ್ಲ ಹೋಗಿ ಬರ್ತಿದ್ರು ತಾತ. ಈಗ ವಯೋಸಹಜವಾಗಿ ತೀರಿಕೊಂಡರು ಅನ್ಸುತ್ತೆ” ಎಂದ. “ಪಾಪ ಯಾರು ಇರ್ಲಿಲ್ಲ ಅಲ್ವಾ? ಬಡವರು,” ಎಂದಿದ್ದಕ್ಕೆ “ಏನಿಲ್ಲ ಸರ್, ಊರಿಗೆ ಊರೇ ಬಂದು ತಿಥಿ ಊಟ ಮಾಡಿಕೊಂಡು ಹೋದ್ರು. ಆಸ್ಪತ್ರೆಗೆ ಅಂದ್ರೆ ದುಡ್ಡು ಬಿಚ್ಚಲ್ಲ. ಅದೇ ತಿಥಿಗೆ ಅಂದ್ರೆ ನೆಂಟರೆಲ್ಲ ಬಂದು ಕಾರ್ಯ ನಡೆಸಿದ್ರು” ಎಂದ. ಇರಲಿ ಬಿಡಿ ಈಗಾದರೂ ಯಾರೋ ಬಂದರಲ್ಲ ಎಂದು ಸುಮ್ಮನಾದೆ.

ಸುಮಾರು ಮೂರು ನಾಲ್ಕು ತಿಂಗಳ ಹಿಂದೆ ಹೊರರೋಗಿ ವಿಭಾಗಕ್ಕೆ ಒಬ್ಬ ವಯಸ್ಸಾದ ರೈತ ಸುಮಾರು ೭೦ ವರ್ಷ ಇರಬಹುದು “ಮಾದೇಗೌಡ” ಅಂತ ಹೆಸರಿನವ ಬಂದು, “ಸಾರ್ ಬಿಟ್ಟು ಬಿಟ್ಟು ಹೊಟ್ಟೆ ನೋವು ಬರ್ತದೆ. ಗುಳಿಗೆ, ಸ್ಕ್ಯಾನಿಂಗ್ ಎಲ್ಲ ಮಾಡಿವ್ನಿ. ಹೋಗಕಿಲ್ಲ ಅಂತದೇ” ಎಂದ.

ನಾನು “ಮಲ್ಕೊಳ್ಳಿ ತಾತ, ನೋಡೋಣ” ಎಂದೆ. ಕೂಲಂಕಷವಾಗಿ ಪರಿಶೀಲಿಸಿ, “ಪಿತ್ತಕೋಶದಲ್ಲಿ ಕಲ್ಲಿದೆ, ತೆಗಿಬೇಕು ತಾತ. ಸಣ್ಣ ತೂತು ಮಾಡಿ ಪಿತ್ತಚೀಲ ತೆಗಿತೀವಿ. ಮತ್ತೆ ಕಲ್ಲು ಬರಲ್ಲ, ನೋವು ಇರಲ್ಲ” ಎಂದೆ.



“ಏನೋ ಮಾಡಪ್ಪ, ಆದರೆ ದೊಡ್ಡದಾಗಿ ಕುಯ್ಯಬೇಡಿ. ಸಣ್ಣ ತೂತು ಇದ್ದರೆ ಪರವಾಗಿಲ್ಲ” ಎಂದ. “ಇಲ್ಲ ತಾತ, ಇದು ಹೊಟ್ಟೆ ಒಳಗಡೆ ಕ್ಯಾಮೆರಾ ಹಾಕಿ ಅದ್ರಲ್ಲೇ ಆಪರೇಷನ್ ಮಾಡ್ತೀವಿ. ಬೇಗ ಮನೆಗೆ ಹೋಗಬಹುದು” ಎಂದೆ ಒಪ್ಪಿಗೆ ಸಿಕ್ಕಿ, ದಾಖಲಾತಿಯೂ ಆಯ್ತು. ಸಂಬಂಧಿಕರು ಶಸ್ತ್ರಚಿಕಿತ್ಸೆಯ ದಿನ ಬರುವುದೆಂದು

ನಿಗದಿಯಾಯಿತು.

ವಾರ್ಡಿನಲ್ಲಿ ಉಳಿದೆಲ್ಲಾ ಪರೀಕ್ಷೆ ನಡೆಸಿ, ಶಸ್ತ್ರಚಿಕಿತ್ಸೆಗೆ ಬೇಕಾಗಬಹುದಾದ ರಕ್ತವನ್ನು ದಾನಿಯಿಂದ ಸಂಗ್ರಹಿಸಿ, ರಕ್ತನಿಧಿಯಲ್ಲಿ ಶೇಖರಿಸಿ ಇಡಲಾಯಿತು. ಪದೇಪದೇ ಮಾದೇಗೌಡರದು ಒಂದೇ ರಾಗ "ಸರ್ ಏನೇ ಮಾಡಿ, ದೊಡ್ಡದಾಗಿ ಕುಯ್ಯಬೇಡಿ ಅಷ್ಟೇ. ಆದಷ್ಟು ಸಣ್ಣದಾಗಿ ಮಾಡ್ಕೊಡಪ್ಪಾ."

ಅಂತೂ ಶಸ್ತ್ರಚಿಕಿತ್ಸೆಯ ದಿನ ಬಂದೇ ಬಿಟ್ಟಿತು. ಆಗಾಗ ಬರುತ್ತಿದ್ದ ಹೊಟ್ಟೆ ನೋವಿನಿಂದ ಪದೇ ಪದೇ ಉಂಟಾಗಿರಬಹುದಾದ ಪಿತ್ತಕೋಶದ ಸೋಂಕನ್ನು ಪರಿಗಣಿಸಿ ಅದರಿಂದ ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಉಂಟಾಗಬಹುದಾದ ತೊಂದರೆಗಳನ್ನು ಆಲೋಚಿಸಿಕೊಂಡು ನಮ್ಮ ಪ್ರೊಫೆಸರ್ ಮಾದೇಗೌಡರನ್ನು ಶಸ್ತ್ರಚಿಕಿತ್ಸಾ ಪಟ್ಟಿಯಲ್ಲಿ ಮೂರನೇ ಹೆಸರಿನಲ್ಲಿ ಸೇರಿಸಿದ್ದರು.

ಎರಡು ನೇರವಾದ ಪಿತ್ತಕೋಶದ ಶಸ್ತ್ರಚಿಕಿತ್ಸೆಗಳು ನಡೆದು ಮಾದೇಗೌಡರ ಸರಣಿ ಬರುವಾಗ ಮಧ್ಯಾಹ್ನ ೨:೦೦ ದಾಟಿತ್ತು. ಅರೆವಳಿಕೆ ನೀಡಿ, ಹೊಟ್ಟೆ ಭಾಗವನ್ನು ಅಣಿಗೊಳಿಸಿ, ಉದರದರ್ಶಕವನ್ನು ಹೊಕ್ಕಳಿನ ಭಾಗದಿಂದ ಸೇರಿಸಿ, ಅದರಲ್ಲಿಗೆ ಇಂಗಾಲದ ಡೈಯಾಕ್ಸೈಡ್ ಗಾಳಿಯನ್ನು ತುಂಬಿಸಲಾಯಿತು. ಒಳಗೆ ನೋಡಿದರೆ ಶಸ್ತ್ರಚಿಕಿತ್ಸೆಯು ಸ್ವಲ್ಪ ಕ್ಲಿಷ್ಟ ಅನಿಸುತ್ತಿತ್ತು.

ನಿಧಾನವಾಗಿ ಯಕೃತ್ತಿನ (ಲಿವರ್) ಕೆಳಭಾಗದಲ್ಲಿರುವ ಪಿತ್ತಕೋಶ (ಗಾಲ್ ಬ್ಲಾಡರ್) ಅಥವಾ ಪಿತ್ತಚೀಲವನ್ನು ಬಿಡಿಸುತ್ತಾ, ಅದರ ಕುತ್ತಿಗೆ ಭಾಗದಲ್ಲಿರುವ ಪಿತ್ತನಾಳ ಮತ್ತು ರಕ್ತನಾಳಗಳಿಗೆ ಕ್ಲಿಪ್‌ಗಳನ್ನು ಅಳವಡಿಸಿ, ಪಿತ್ತಚೀಲವನ್ನು ಬೇರ್ಪಡಿಸಿ ತೆಗೆದದ್ದು ಆಯ್ತು. ಆದರೆ ಅಲ್ಲಿಯ ಯಕೃತ್ತಿನಿಂದ ಬರುತ್ತಿದ್ದ ಮುಖ್ಯ ನಾಳವು (ಕಾಮನ್ ಬೈಲ್ ಡಕ್ಟ್) ಪಿತ್ತಚೀಲದೊಂದಿಗೆ ಗಾಢವಾಗಿ ಅಂಟಿಕೊಂಡಿದ್ದ ಕಾರಣ ಬಹುಶಃ ಅದೂ ಘಾಸಿಯಾಗಿ ಪಿತ್ತವು ಸೋರುತ್ತಿರುವುದು ಕಂಡಿತು.

ಸಾಮಾನ್ಯವಾಗಿ ಯಕೃತ್ತಿನಿಂದ ಹೊರಟ ಮುಖ್ಯ ನಾಳವು, ಮೆದೋಜಿರಕಾಂಗದ (ಪ್ಯಾಂಕ್ರಿಯಾಸ್) ನಾಳದೊಂದಿಗೆ ಸೇರಿ ಕೊನೆಗೆ ಒಂದೇ ನಾಳವಾಗಿ, ಅದರಲ್ಲೇ ಎರಡರ ಸ್ರವಿಕೆಗಳು ಮಿಶ್ರವಾಗಿ ಸಣ್ಣಕರುಳಿನ ಮೇಲ್ಭಾಗದಲ್ಲಿ ಸಣ್ಣ ಮುಖದ ರಚನೆಯಲ್ಲಿ ತೆರೆದುಕೊಳ್ಳುತ್ತದೆ. ಇಲ್ಲಿ ಜಠರದಿಂದ ಬಂದ ಜೀರ್ಣವಾದ ಪದಾರ್ಥ ಯಕೃತ್ತು ಹಾಗೂ ಮೆದೋಜಿರಕಾಂಗದ ಗ್ರಂಥಿಗಳ ಸ್ರವಿಕೆಗಳೊಂದಿಗೆ ಸೇರಿ ಪಚನ ಕ್ರಿಯೆ ಮುಂದುವರೆಯುತ್ತದೆ. ಈ ಯಕೃತ್ತಿನ ಮುಖ್ಯ ನಾಳವು ಮೆದೋಜಿರಕಾಂಗದ ನಾಳದೊಂದಿಗೆ ಸೇರುವ ಮೊದಲು ಸಾಮಾನ್ಯವಾಗಿ ಬಲಬದಿಗೆ ಒಂದು ಸಣ್ಣ ಪಿತ್ತನಾಳದ ಮೂಲಕ (ಸಿಸ್ಟಿಕ್ ಡಕ್ಟ್) ಯಕೃತ್ತಿನ ಕೆಳಭಾಗದಲ್ಲಿರುವ ಪಿತ್ತಚೀಲವನ್ನು ಸೇರುತ್ತದೆ.

ಯಕೃತ್ತಿನಿಂದ ಸ್ರವಿಸುವ ಪಿತ್ತರಸವು (ಬೈಲ್ ಜ್ಯೂಸ್) ಈ ನಾಳದ ಮೂಲಕ ಪಿತ್ತಕೋಶವನ್ನು ಸೇರಿ ಅಲ್ಲಿ, ಹೆಚ್ಚುವರಿ ನೀರಿನ ಅಂಶವು ಹೀರಲ್ಪಟ್ಟು ಉಳಿದ ಪಿತ್ತರಸವು ಸಾಂದ್ರಿಕೃತಗೊಂಡು ಶೇಖರಗೊಳ್ಳುತ್ತದೆ. ಸಣ್ಣ ಕರುಳಿಗೆ ಬಂದ ಕೂಡಲೇ ಆಗುವ ರಾಸಾಯನಿಕ ಬದಲಾವಣೆಗಳಿಂದ ಪಿತ್ತಕೋಶದ ಸಾಂಗ್ರಿಕೃತಗೊಂಡ (ಕಾನ್ಸೆಂಟ್ರೇಟೆಡ್ ಬೈಲ್) ಪಿತ್ತರಸವು ಡುಯೋಡಿನಮ್‌ಗೆ (ಸಣ್ಣ ಕರುಳಿನ ಮೊದಲ ಭಾಗ) ಬಂದು ಕೈಮ್‌ನೊಂದಿಗೆ ಸೇರಿ ಸಣ್ಣಕರುಳಿನಲ್ಲಿ ಜೀರ್ಣವಾಗುತ್ತಾ ಮುಂದಕ್ಕೆ ಹೋಗುತ್ತದೆ ಇದು ದೇಹದಲ್ಲಿ ನಿರ್ದಿಷ್ಟವಾಗಿ ಇರುವಂತಹ ಅಂಗರಚನ ಮತ್ತು'ಜೀವರಚನ ಶಾಸ್ತ್ರದ ವಿಚಾರ.

ಆದರೆ ಈ ಪಿತ್ತಜನಕಾಂಗ ವ್ಯೂಹದಲ್ಲಿ ಕೆಲವೊಮ್ಮೆ ವ್ಯತಿರಿಕ್ತ ಸನ್ನಿವೇಶಗಳಿಂದ, ಉದಾಹರಣೆಗೆ: ನೀರಿನ ಅಂಶದಲ್ಲಿ ಏರುಪೇರಾಗಿ, ಪಿತ್ತದ ಸಾಂದ್ರತೆಯ ಬದಲಾವಣೆ, ರಕ್ತದ ಕೊಲೆಸ್ಟ್ರಾಲ್‌ನಲ್ಲಿ ಏರುಪೇರಾಗುವಿಕೆ, ಸಕ್ಕರೆ ಕಾಯಿಲೆ, ಕಡಿಮೆ ಸಮಯದಲ್ಲಿ ಅತಿಯಾದ ತೂಕ ಇಳಿಸುವಿಕೆ, ಪಿತ್ತಕೋಶದ ಸೋಂಕು ಈ ರೀತಿ ಅನೇಕ ಕಾರಣಗಳಿಂದಾಗಿ ಪಿತ್ತಕೋಶದಲ್ಲಿ ಕಲ್ಲುಗಳು ಆಗುತ್ತವೆ  ನೀರಿನಲ್ಲಿ ಉಪ್ಪು ಕರಗಿ ಕರಗಿ ಸಾಂದ್ರತೆ ಹೆಚ್ಚಾದಾಗ, ಉಪ್ಪು ಕೆಳಗೆ ಉಳಿದುಕೊಳ್ಳುವಂತೆ. ಈ ಕಲ್ಲುಗಳು ಅಲ್ಲೇ ಇತ್ತು ಏನೂ ತೊಂದರೆ ಕೊಡದಿದ್ದರೆ ಉತ್ತಮ.

ಆದರೆ ಆ ಕಲ್ಲುಗಳಿಂದಾಗಿ ಪಿತ್ತಕೋಶದ ಉರಿಊತ (ಕೊಲೆಸಿಸ್ಟೈಟಿಸ್), ಸಣ್ಣ ಕಲ್ಲುಗಳು ಪಿತ್ತನಾಳದಿಂದ



ಜಾರಿ ಮುಖ್ಯ ನಾಳದಲ್ಲಿ ಸೇರಿ ಅಡ್ಡವಾಗಿ ಕಟ್ಟಿಕೊಳ್ಳುವುದು, ಇಂತಹ ತೊಂದರೆಗಳು ಆಗಬಹುದು. ಹಾಗೇನಾದರೂ ಕಲ್ಲುಗಳು ಜಾರಿದರೆ, ಪಿತ್ತ ಸ್ರವಿಕೆ ಸ್ಥಗಿತಗೊಂಡು ಕಾಮಾಲೆ ರೋಗ (ಜಾಂಡಿಸ್), ಮೇದೋಜೀರಕದ ಉರಿಊತ ಮುಂತಾದ ತೊಂದರೆಗಳು ಬರಬಹುದು.

ಹೀಗಾಗಿ ಇವನ್ನೆಲ್ಲ ತಪ್ಪಿಸಲು ಉದರದರ್ಶಕದ ಮೂಲಕ ಸುಲಭವಾಗಿ ಪಿತ್ತಚೀಲವನ್ನು ತೆಗೆಯುವ ಶಸ್ತ್ರಚಿಕಿತ್ಸೆಯನ್ನು ನಡೆಸಲಾಗುತ್ತದೆ. ಆಗ ಸಾಂದ್ರೀಕೃತ ದ್ರವದ ಬದಲು, ನೀರಿನ ಅಂಶ ಹೆಚ್ಚು ಇರುವ ಪಿತ್ತ ಕರುಳಿಗೆ ಬರುವ ಕಾರಣ ಜೀರ್ಣಶಕ್ತಿಯಲ್ಲಿ ಸ್ವಲ್ಪ ಏರುಪೇರಾಗಬಹುದಾದರೂ ಅದು ಕ್ರಮೇಣ ಸರಿಹೊಂದುತ್ತದೆ.

ಈ ರೀತಿ ಪದೇಪದೇ ಪಿತ್ತಕೋಶದ ಸೋಂಕನ್ನು ಕಡೆಗಣಿಸಿದಾಗ ಕೆಲವೊಮ್ಮೆ ಪಿತ್ತಚೀಲವು ಹತ್ತಿರ ಇರುವ ದೊಡ್ಡ ನಾಳಕ್ಕೆ ಅಂಟಿಕೊಂಡು ಬಿಡಬಹುದು. ಇದರಿಂದ ಶಸ್ತ್ರಚಿಕಿತ್ಸಕನು ಎಷ್ಟೇ ಕಾಳಜಿ ವಹಿಸಿದರೂ, ಮುಖ್ಯ ನಾಳವು ಘಾಸಿಗೊಂಡು ಪಿತ್ತ ಸೋರಿಕೆ ಉಂಟಾಗಬಹುದು. ಅದನ್ನು ಶಸ್ತ್ರಚಿಕಿತ್ಸಾ ಸಮಯದಲ್ಲೇ ಗುರುತಿಸಿದರೆ ಅದರ ದುರಸ್ತಿ ಸಾಧ್ಯವಿದೆ. ಹಾಗೇ ಬಿಟ್ಟರೆ ಪಿತ್ತವು ಹೊಟ್ಟೆಯಲ್ಲೆಲ್ಲಾ ಸೋರಿಸಿ, ವಿಪರೀತ ಸೋಂಕಿನಿಂದ ರೋಗಿ ಸಾಯಲುಬಹುದು.

ಪಿತ್ತದ ಮುಖ್ಯ ನಾಳವು ಪಿತ್ತಕೋಶದೊಂದಿಗೆ ಅಂಟಿಕೊಂಡಾಗ ಅದರಲ್ಲಿಯ ಕಲ್ಲಿನ ಒತ್ತುವಿಕೆಯಿಂದಾಗಿ ಒಂದು ಅಸಹಜ ನಾಳವೂ ಕೂಡ ಏರ್ಪಡಬಹುದು. ಅಷ್ಟೇ ಅಲ್ಲದೆ ಕೆಲವೊಮ್ಮೆ ಅಂಗರಚನೆಯಲ್ಲೂ ಬದಲಾವಣೆ ಇರುವ ಸಾಧ್ಯತೆ ಇದೆ. ಇವೆಲ್ಲವೂ ಪಿತ್ತನಾಳದ ಹಾನಿಗೆ ಕಾರಣಗಳಾಗಬಹುದು. ಈ ರೀತಿ ಪಿತ್ತನಾಳದ ಹಾನಿ ಸಾಮಾನ್ಯವಲ್ಲದಿದ್ದರೂ ಕೆಲವೊಮ್ಮೆ ಆಗುವುದುಂಟು. ಆದರೆ ಸೂಕ್ತ ಸಮಯದಲ್ಲಿ ಗುರುತಿಸಿ, ದುರಸ್ತಿ ಕಾರ್ಯ ನಡೆಸಿದರೆ ಯಾವ ತೊಂದರೆಯೂ ಆಗುವುದಿಲ್ಲ.

ಈ ರೀತಿ ಪಿತ್ತನಾಳದ ಘಾಸಿಯಾದಾಗ ಇನ್ನೊಬ್ಬ ನುರಿತ ಶಸ್ತ್ರಚಿಕಿತ್ಸಕನ ಸಹಾಯ ಪಡೆದೋ, ಅಥವಾ ರೋಗಿಯನ್ನು ಉನ್ನತ ಕೇಂದ್ರಗಳಿಗೆ ರವಾನಿಸಿ ಚಿಕಿತ್ಸೆ ನೀಡಲು ಸಾಧ್ಯ. ಅಲ್ಲಿಯವರೆಗೆ ರೋಗಿಯ ಹೊಟ್ಟೆಗೆ ತಾತ್ಕಾಲಿಕವಾಗಿ ಒಂದು ನಳಿಕೆಯನ್ನು ಅಳವಡಿಸಿ (ಕಂಟ್ರೋಲ್ಡ್ ಡ್ರೈನ್) ಶಸ್ತ್ರಚಿಕಿತ್ಸೆಯನ್ನು ಮುಂದೂಡಬಹುದು ಇಂದು ಇಂತಹ ಶಸ್ತ್ರಚಿಕಿತ್ಸೆಗಳನ್ನೂ ಕೂಡ ಉದರದರ್ಶಕದಲ್ಲಿಯೇ ನಡೆಸಬಹುದು.

ಈಗ ಕಥೆಗೆ ಬರೋಣ. ಪಿತ್ತ ಸೋರವುದು ಶಸ್ತ್ರಚಿಕಿತ್ಸೆ ಸಮಯದಲ್ಲಿಯೇ ಗೊತ್ತಾಯಿತು ಸರಿ. ಆದರೆ ಎಲ್ಲಿಂದ ಬರುತ್ತಿದೆ ನಾಳ ಎಲ್ಲಿಗೆ ಹಾನಿಯಾಗಿದೆ ಹುಡುಕಬೇಕು. ತೆಗೆದ ಪಿತ್ತಚೀಲವನ್ನು ಪರಿಶೀಲಿಸಿ ಆಯಿತು. ಅದರಲ್ಲಿನ ನಾಳದ ಅಂಶವೇನೂ ಇರಲಿಲ್ಲ. ಹಾಗಾದರೆ ಪಿತ್ತವು ಎಲ್ಲಿಂದ ಬರುತ್ತಿದೆ? ಮತ್ತೊಮ್ಮೆ

ಯಕೃತ್ತಿನ ಕೆಳಭಾಗವನ್ನೆಲ್ಲ ತೊಳೆದು ಪರಿಶೀಲಿಸಲಾಗಿತ್ತು. ಪಿತ್ತನಾಳವು ಹುಟ್ಟುತ್ತಿರುವ ಜಾಗದಿಂದಲೇ ಹಾನಿಯಾಗಿರುವುದು ಕಂಡುಬಂದಿತು. ಯಕೃತ್ತಿನಲ್ಲಿರುವ ಸಣ್ಣ ಸಣ್ಣ ಪಿತ್ತನಾಳಗಳೂ ಕೂಡ ಕಾಣಿಸುತ್ತಿತ್ತು. ಇಂತಹ ಕ್ಲಿಷ್ಟ ಸಂದರ್ಭಗಳಲ್ಲಿ ಅಂದಿನ ಕಾಲಕ್ಕೆ ಆ ಆಸ್ಪತ್ರೆಯಲ್ಲಿ ಪಿತ್ತನಾಳಗಳ ದುರಸ್ತಿ ಮಾಡುತ್ತಿದ್ದಿದ್ದು ಕೇವಲ ಇಬ್ಬರು ನುರಿತ ಶಸ್ತ್ರಚಿಕಿತ್ಸಕರು ಮಾತ್ರ. ಒಬ್ಬರು ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥರು ಡಾ. ಜಿ. ಸಿದ್ದೇಶ್ ಹಾಗೂ ಇನ್ನೊಬ್ಬರು ನಮ್ಮ ಘಟಕದ ಮುಖ್ಯಸ್ಥರು ಡಾ. ಬಿ. ಜೆ. ಶರತ್‌ಚಂದ್ರ. ದೇವರ ದಯೆಯಿಂದ ಅಂದು ಶಸ್ತ್ರಚಿಕಿತ್ಸೆ ನಡೆಸುತ್ತಿದ್ದವರು ನಮ್ಮ ಘಟಕದ ಮುಖ್ಯಸ್ಥರೇ ಆಗಿದ್ದರು.

ಈ ಕ್ಲಿಷ್ಟವಾದ ಸಮಸ್ಯೆಯನ್ನು ಪರಿಹರಿಸಲು ಸಾಮಾನ್ಯವಾಗಿ ಹೊಟ್ಟೆಯನ್ನು ಸಂಪೂರ್ಣವಾಗಿ ತೆರೆದು ದುರಸ್ತಿ ಕಾರ್ಯ ನಡೆಸಬೇಕು. ಅದಕ್ಕೆ ರಕ್ತದ ಅವಶ್ಯಕತೆಯೂ ಇದೆ. ಹೀಗಾಗಿ ನನ್ನನ್ನು ಸಂಬಂಧಿಕರೊಂದಿಗೆ ಮಾತನಾಡಿ ರಕ್ತ ಹೊಂದಿಸಲು ಕಳಿಸಿದರು. ಶಸ್ತ್ರಚಿಕಿತ್ಸೆ ಮುಂದುವರೆಯಿತು.

ನಾನು ಹೊರಬಂದು ವಾರ್ಡಿಗೆ ಫೋನ್ ಮಾಡಿ ಸುಮಾರು ಅರ್ಧ ಗಂಟೆಯ ನಂತರ ಗೌಡರ ಸಂಬಂಧಿಕರೆಂದು ಹೇಳಿಕೊಂಡು ನಿಧಾನವಾಗಿ ನಡೆಯುತ್ತಾ, ಗೂನು ಬೆನ್ನಿನ ಮುದುಕಿ ಒಬ್ಬಳು ಬಂದಳು. ನಾನು 'ಆಕೆ ಹೆಂಡತಿ ಇರಬಹುದು', ಎಂದು ತಿಳಿದು, ಆಕೆಗೆ ಪರಿಸ್ಥಿತಿ ವಿವರಿಸಿ "ಗಂಡು ಹುಡುಗರು ಯಾರಾದರೂ ಇದ್ದರೆ ರಕ್ತ ತರಿಸಿಕೊಡಿ" ಎಂದು ಕೇಳಿದೆ.

ಆಕೆ "ಯಾರು ಇಲ್ಲ ಸಾ, ನಾ ಒಬ್ಬಳೇ ಇರೋದು. ನಾನು ಮಾದೇವಪ್ಪನ ತಂಗಿ" ಎಂದಳು. ಜವಾಬ್ದಾರಿ ತೆಗೆದುಕೊಳ್ಳುವ ಗಂಡಸರು ಯಾರು ಇಲ್ಲ ಎಂದು ಒಂದು ಕ್ಷಣ ಸಿಟ್ಟು ಬಂದರೂ, ತಡೆದುಕೊಂಡು ಸಮರ್ಪಕ ವ್ಯಕ್ತಿಯ ಖಾತರಿ ಇಲ್ಲದೇ ಶಸ್ತ್ರಚಿಕಿತ್ಸೆಗೆ ತೆಗೆದುಕೊಂಡದ್ದೇ ನನ್ನ ತಪ್ಪು ಎಂದು ಸಾವರಿಸಿಕೊಂಡು, ಹೇಗೋ ರಕ್ತ ತರಿಸಿ ಶಸ್ತ್ರಚಿಕಿತ್ಸೆಯನ್ನು ಮುಂದುವರಿಸಲಾಯಿತು.

ಇಲ್ಲಿ ಪಿತ್ತನಾಳವು ಘಾಸಿಯಾಗದೆ, ಅದು ಹುಟ್ಟುವ ಜಾಗದಲ್ಲಿ ಹಾನಿಯಾಗಿದ್ದ ಕಾರಣ ದುರಸ್ತಿ ಕಾರ್ಯ ಸ್ವಲ್ಪ ಕಷ್ಟವಾಗಿತ್ತು. ಸಾಮಾನ್ಯವಾಗಿ ಮಾಡುವ ದುರಸ್ತಿಯ ಬದಲಿಗೆ ಸಣ್ಣಕರುಳಿನ ಒಂದು ಭಾಗವನ್ನೇ ತೆಗೆದು ಯಕೃತ್ತಿನ ಕೆಳಭಾಗಕ್ಕೆ ಜೋಡಿಸಿ ಹೊಲಿಯಲಾಯಿತು. ರೋಗಿಗೆ ಸಾಧ್ಯವಾದಷ್ಟು ತೊಂದರೆ ಆಗದಂತೆ ಸಮರ್ಪಕವಾದ ಚಿಕಿತ್ಸೆಯನ್ನು ನೀಡುವುದು ಆ ಸಮಯದಲ್ಲಿ ಮಾಡಬೇಕಾದಂತಹ ಕೆಲಸವಾಗಿತ್ತು. ನಮ್ಮ ಪ್ರೊಫೆಸರ್ ಆ ಆಸ್ಪತ್ರೆಯಲ್ಲಿ ಎಂದೂ ನಡೆಯದ ಶಸ್ತ್ರಚಿಕಿತ್ಸೆಯನ್ನು ಅನಾಯಾಸವಾಗಿ ಮಾಡಿ ಮುಗಿಸಿದ್ದರು.

ಇದಕ್ಕೆ ಬಹುಶಃ "ಶಸ್ತ್ರಚಿಕಿತ್ಸಕನಿಗೆ, ಗರುಡನ ಕಣ್ಣು ಮತ್ತು ಸಿಂಹದ ಎದೆ ಇರಬೇಕು" ಎನ್ನುವುದು. ಇನ್ನುಳಿದದ್ದು ನಾವು ರೋಗಿಗೆ ಕೊಡುವ ಆರೈಕೆ ಮಾತ್ರ. ರಾತ್ರೆ ಎಲ್ಲಾ 'ತೀವ್ರ ನಿಗಾ ಘಟಕದಲ್ಲಿ ನಿಗಾ ವಹಿಸಿ ನೋಡಿಕೊಂಡ ನಂತರ ಮರುದಿನ ವಾರ್ಡಿಗೆ ಕರೆತರಲಾಯಿತು.

ಶಸ್ತ್ರಚಿಕಿತ್ಸೆ ನಂತರ ಪಿತ್ತರಸವು ಸೋರ್ತಿದೆಯೇ ಎಂದು ಖಾತ್ರಿ ಪಡಿಸಲು ಹೊಟ್ಟೆಯ ಮೂಲಕ ಒಂದು ನಳಿಕೆಯನ್ನು ಇಡಲಾಗುತ್ತದೆ. ಅದರಲ್ಲೇ ಏನೂ ಬರದಿದ್ದಾಗ, 'ಪಿತ್ತವು ಕರುಳಿನಲ್ಲಿ ಮುಂದೆ ಹೋಗುತ್ತಿದೆ' ಎಂದು ಖಾತ್ರಿಪಡಿಸಿ, ಈ ನಳಿಕೆಯನ್ನು ತೆಗೆದು ರೋಗಿಯನ್ನು ಮನೆಗೆ ಕಳುಹಿಸಬಹುದು.

ಹೀಗೆ ಮಾದೇಗೌಡರು ವಾರ್ಡಿಗೆ ಬಂದಾಗ ಪೈಪಿನಲ್ಲಿ ಇನ್ನೂ ಪಿತ್ತರಸವು ಬರುತ್ತಿತ್ತು. ನಾನು ಅಂದು ಬೆಳಿಗ್ಗೆ "ಏನ್ ಗೌಡ್ರೆ, ಹೇಗಿದ್ದೀರಿ?" ಅಂದೆ. "ಸರ್ ದೊಡ್ಡ ಪರೇಷನ್ ಆಯ್ತಾ?" ಎಂದು ಬೇಸರದಿಂದ ಕೇಳಿದ. "ಹೌದಪ್ಪ, ಆದರೆ ನಿನ್ನ ನೋಡಿಕೊಳ್ಳಕ್ಕೆ ಯಾರು ಗಂಡಸ್ರೇ ಇಲ್ವೇನಯ್ಯ?" ಎಂದೆ. ಅದಕ್ಕವನು ಸಪ್ಪೆ ಮೋರೆ ಮಾಡಿ ಆಚೆ ತಿರುಗಿದನು. ನಂತರ ಮಹೇಶ್ ನನ್ನನ್ನು ಕರೆದು "ಸರ್, ತಾತನ ಮಗನನ್ನು ಯಾರೋ ದುಡ್ಡಿಗೋಸ್ಕರ ಕೊಲೆ ಮಾಡಿದರು. ಮಗಳು ಆಕ್ಸಿಡೆಂಟಿನಲ್ಲಿ ತೀರಿಹೋದಳು. ಮಕ್ಕಳಿಬ್ಬರಿಗೂ ಹಿಂಗಾಯಿತಲ್ಲ ಅಂತ ಹೆಂಡತಿ ನೇಣಾಕ್ಕಂಬಿಟ್ಟಳು. ತಾತ ಒಬ್ಬನೇ ಪಾಪ" ಎಂದ. ನನಗೆ ಒಂದು ಕ್ಷಣ ದಂಗು ಬಡಿದಂತಾಗಿ, ನಂತರ ಸಾವರಿಸಿಕೊಂಡು ಮುಂದಿನ ರೋಗಿಯ ಕಡೆ ನಡೆದೆ.

●

## ಜೀವನ ಶೈಲಿ ಮತ್ತು ಆರೋಗ್ಯ

# ಕಣ್ಣು ಮತ್ತು ಜೀವನ ಶೈಲಿ



**ಡಾ. ರವೀಂದ್ರನಾಥ ಹೆಚ್. ಎಮ್.**
ನೇತ್ರ ತಜ್ಞರು
ದೃಷ್ಟಿ ಕಣ್ಣಿನ ಆಸ್ಪತ್ರೆ, ದಾವಣಗೆರೆ



**ಡಾ. ವೀಣಾ ಎಸ್. ಭಟ್**
ವಿಭಾಗೀಯ ಸಂಪಾದಕರು

ಕಣ್ಣು ಮತ್ತು ದೃಷ್ಟಿಯ ಮಹತ್ವವನ್ನು ತಿಳಿ ಹೇಳುವ ಅಗತ್ಯ ಇಲ್ಲ ಎಂದೇ ಭಾವಿಸುತ್ತೇನೆ. ಎಷ್ಟೆಲ್ಲಾ ತಿಳುವಳಿಕೆ ಇದ್ದರೂ ಕಣ್ಣಿನ ತೊಂದರೆಗಳು ಹೆಚ್ಚಾಗುತ್ತಿರುವುದು ಮಾತ್ರ ಸತ್ಯ ಮತ್ತು ಬೇಸರದ ಸಂಗತಿ. ಇದನ್ನು ಪರಿಶೀಲಿಸಿ ನೋಡಿದಾಗ ನನಗೆ ತಿಳಿಯುವ ಎರಡು ವಿಷಯಗಳೆಂದರೆ, ಕಣ್ಣಿನ ಕಾಯಿಲೆಗಳ ಬಗ್ಗೆ ತಿಳುವಳಿಕೆ ಕೊರತೆ ಮತ್ತು ನಿರ್ಲಕ್ಷ್ಯ, ದೈನಂದಿನ ಜೀವನ ಶೈಲಿಯಲ್ಲಿ ನಾವು ಕಣ್ಣಿನ ಮಹತ್ವವನ್ನು ಸಾಕಷ್ಟು ಗಮನಿಸುತ್ತಿಲ್ಲ. ಇಂದಿನ ಗದ್ದಲದ ಬದುಕು, ತಂತ್ರಜ್ಞಾನ ಅಲಂಬನೆ, ಆಹಾರ ಪದ್ಧತಿಯ ಬದಲಾವಣೆ, ಮಾನಸಿಕ ಒತ್ತಡ, ಇವೆಲ್ಲವೂ ಕಣ್ಣಿನ ಆರೋಗ್ಯದ ಮೇಲೆ ನೇರ ಪರಿಣಾಮ ಬೀರುತ್ತಿವೆ.

**ಆಧುನಿಕ ಜೀವನ ಶೈಲಿ ಮತ್ತು ಕಣ್ಣು :**

ಇಂದು ಮೊಬೈಲ್, ಕಂಪ್ಯೂಟರ್, ಲ್ಯಾಪ್‌ಟಾಪ್, ಟ್ಯಾಬ್ಲೆಟ್ ಇಲ್ಲದೇ ಜೀವನವೇ ಅಸಾಧ್ಯವಾಗಿದೆ. ಬೆಳಿಗ್ಗೆಯಿಂದ ರಾತ್ರಿ ತನಕ ಪರದೆಗಳನ್ನು ನೋಡುವುದು ಸಾಮಾನ್ಯವಾಗಿದೆ ಇದರಿಂದ ಕಣ್ಣಿಗೆ ವಿಶ್ರಾಂತಿ ಸಿಗದೇ 'ಡಿಜಿಟಲ್ ಐ ಸ್ಟ್ರೈನ್' ಸಮಸ್ಯೆ ಹೆಚ್ಚಾಗುತ್ತಿದೆ. ಕಣ್ಣುರಿ, ನೀರು ಬರುವುದು, ಕಣ್ಣು ಸುಸ್ತಾಗುವುದು, ಕಣ್ಣಲ್ಲಿ ಮರಳು ಬಿದ್ದಂತೆ ಭಾಸವಾಗುವುದು, ತಲೆನೋವು, ದೃಷ್ಟಿ ಮಂಜಾಗುವುದು, ಕೆಲಸದಲ್ಲಿ ನಿರಾಸಕ್ತಿ ಮತ್ತು ಕಾರ್ಯಕ್ಷಮತೆ ಕಡಿಮೆಯಾಗುವುದು ಇವುಗಳೆಲ್ಲ ಹೆಚ್ಚುತ್ತಿರುವ 'ಪರದೆಯ ಸಮಯ' (Screen Time) ದ ದುಷ್ಪರಿಣಾಮಗಳು. ಇದಲ್ಲದೆ ಹವಾನಿಯಂತ್ರಿತ ಕೊಠಡಿಗಳು, ಮಾಲಿನ್ಯಯುಕ್ತ ವಾತಾವರಣ, ಧೂಳು ಮತ್ತು ಹೊಗೆ ಕಣ್ಣಿನ ಶುಷ್ಕತೆಯನ್ನು ಹೆಚ್ಚಿಸುತ್ತವೆ.

**ಇವುಗಳನ್ನು ಕಡಿಮೆ ಮಾಡಿಕೊಳ್ಳಲು ಕೆಲವು ಸೂತ್ರಗಳು :**

- **ಪರದೆಯ ಸಮಯವನ್ನು ಕಡಿಮೆ ಮಾಡಿ:** ಸಾಮಾಜಿಕ ಜಾಲತಾಣಗಳು ನಮ್ಮ ಜೀವನದ ಬಹುಭಾಗವನ್ನು ಆಕ್ರಮಿಸಿವೆ. ಕೇವಲ ಕಣ್ಣನ್ನು ಮಾತ್ರವಲ್ಲ, ಮನಸ್ಸನ್ನೇ ಕಲುಷಿತಗೊಳಿಸುವ ಈ ಜಾಲತಾಣಗಳಿಗೆ ಕಡಿವಾಣ ಹಾಕಿ.
- **೨೦-೨೦-೨೦ ನಿಯಮ :** ಪ್ರತಿ ೨೦ ನಿಮಿಷಕ್ಕೊಮ್ಮೆ, ೨೦ ಅಡಿ ದೂರದಲ್ಲಿರುವ ವಸ್ತುವನ್ನು ೨೦ ಸೆಕೆಂಡ್‌ಗಳ ಕಾಲ ನೋಡುವುದು.
- **ಸರಿಯಾದ ಬೆಳಕು :** ಓದುವಾಗ ತಕ್ಕಮಟ್ಟಿನ ಬೆಳಕಿರಲಿ.
- **ಕಣ್ಣಿನ ವಿಶ್ರಾಂತಿ :** ಪರದೆ ಬೆಳಕಿನ ನಡುವೆ ಕಣ್ಣನ್ನು ಕೆಲಕಾಲ ಮುಚ್ಚಿ ವಿಶ್ರಾಂತಿ ನೀಡಿ.
- ರೆಪ್ಪೆ ಮಿಟುಕಿಸುವುದು ಮರೆಯಬೇಡಿ.



- **ನಿಯಮಿತ ಕಣ್ಣಿನ ತಪಾಸಣೆ** : ಸಮಸ್ಯೆ ಇಲ್ಲದಿದ್ದರೂ ಕನಿಷ್ಠ ವರ್ಷಕ್ಕೆ ಒಂದೇ ಬಾರಿ ನೇತ್ರ ತಪಾಸಣೆ ಮಾಡಿಸಿ
- ಕಣ್ಣು ಒಣಗುವುದನ್ನು ತಪ್ಪಿಸಲು ನೇತ್ರ ತಜ್ಞರು ಸಲಹೆ ನೀಡುವ ಲೂಬ್ರಿಕೇಂಟ್ ಡ್ರಾಪ್ಸ್‌ಗಳನ್ನು ಉಪಯೋಗಿಸಿ.

**ಹೆಚ್ಚುತ್ತಿರುವ ದೃಷ್ಟಿ ದೋಷಗಳು** : (Refractive Errors) ಮಕ್ಕಳಲ್ಲಿ ಇತ್ತೀಚೆಗೆ ದೃಷ್ಟಿ ದೋಷಗಳು ಹೆಚ್ಚಾಗುತ್ತಿವೆ. ಅದರಲ್ಲೂ ಸಮೀಪ ದೃಷ್ಟಿ ದೋಷ (Myopia) ಬಹುತೇಕ ಮಕ್ಕಳಲ್ಲಿ ಕಂಡುಬರುತ್ತಿದೆ. ಕೋವಿಡ್ ನಂತರದ ದಿನಗಳಲ್ಲಿ ಆನ್‌ಲೈನ್ ಶಿಕ್ಷಣ ಹೆಚ್ಚಾಗಿ ಮಕ್ಕಳಿಗೆ ಶಿಕ್ಷಣವನ್ನು ಟ್ಯಾಬ್ ಮತ್ತು ಮೊಬೈಲ್ ಫೋನ್‌ಗಳ ಮೂಲಕ ಕೊಡುತ್ತಿರುವುದರಿಂದ ಪರದೆ ಸಮಯ ಹೆಚ್ಚಾಗಿ ಕೆಲ ಮಕ್ಕಳು ಅದನ್ನೇ ಗೀಳಾಗಿ ಮಾಡಿಕೊಂಡಿವೆ. ಹಾಗಾಗಿ ಇದರಿಂದ ಸಮೀಪ ದೃಷ್ಟಿ ದೋಷ ಹೆಚ್ಚಾಗಿದೆ. ಮೊದಲಿನ ಹೊರಾಂಗಣ ಆಟೋಟಗಳು ಕಡಿಮೆಯಾಗಿ ಆಟಗಳಿಗೆ ಮಕ್ಕಳು ಡಿಜಿಟಲ್ ಪರದೆಗಳ ಮೊರೆ ಹೋಗುತ್ತಿರುವುದು ಆತಂಕದ ಸಂಗತಿ. ಈ ವಿಷಯವಾಗಿ ಶಾಲೆಗಳು, ಆಡಳಿತ ಮಂಡಳಿ, ಅಧ್ಯಾಪಕರು ಮತ್ತು ಪೋಷಕರು ಗಂಭೀರ ಚಿಂತನೆ ನಡೆಸಿ ಪರದೆಯ ಸಮಯವನ್ನು ಕಡಿಮೆ ಮಾಡಬೇಕಿದೆ.

**ಮಧುಮೇಹ ಮತ್ತು ಕಣ್ಣು** : ಬದಲಾಗುತ್ತಿರುವ ಜೀವನ ಶೈಲಿಯ ಮೊದಲ ಬಳುವಳಿ ಎಂದರೆ, ಬೊಜ್ಜುತನ ಮತ್ತು ಮಧುಮೇಹ. ಈ ಸಕ್ಕರೆ ಕಾಯಿಲೆ ಕಣ್ಣಿನ ಎಲ್ಲಾ ಭಾಗಗಳಿಗೆ ತೊಂದರೆ ಕೊಡಬಹುದು. ವಿಶೇಷವಾಗಿ ಕಣ್ಣಿನ ರೆಟಿನಾದಲ್ಲಿ ರಕ್ತಸ್ರಾವ ಮತ್ತು ರಕ್ತಹೀನತೆ ಉಂಟಾಗಿ ಶಾಶ್ವತವಾಗಿ ದೃಷ್ಟಿಹೀನತೆಯಾಗುವ ಸಂಭವವಿರುತ್ತದೆ. ಸಕ್ಕರೆ ಕಾಯಿಲೆಯ ನಿಯಂತ್ರಣ, ನಿಯಮಿತ ತಪಾಸಣೆ ಮತ್ತು ನೇತ್ರ ತಜ್ಞರ ಸಲಹೆಯನ್ನು ಚಾಚೂ ತಪ್ಪದೆ ಪಾಲಿಸುವುದರಿಂದ ಸಕ್ಕರೆ ಕಾಯಿಲೆ ಸಂಬಂಧಿತ ದೃಷ್ಟಿಹೀನತೆಯನ್ನು ತಡೆಗಟ್ಟಬಹುದು.

**ಅಧಿಕ ರಕ್ತದೊತ್ತಡ ಮತ್ತು ಕಣ್ಣಿನ ಆರೋಗ್ಯ** : ಒತ್ತಡಮಯ ಜೀವನ ಶೈಲಿ, ಶ್ರಮರಹಿತ ದುಡಿಮೆ, ಮನೆ ಮತ್ತು ಕೆಲಸದ ಜಾಗಗಳಲ್ಲಿನ ಒತ್ತಡ ಎಲ್ಲವೂ ಸೇರಿ ಅಧಿಕ ರಕ್ತದೊತ್ತಡವೂ ಸಕ್ಕರೆ ಕಾಯಿಲೆಯಂತೆಯೇ ಸಾಮಾನ್ಯವಾಗಿದೆ. ರಕ್ತದೊತ್ತಡವನ್ನು ನಿಯಂತ್ರಣದಲ್ಲಿಟ್ಟುಕೊಳ್ಳದಿದ್ದರೆ ಕಣ್ಣಿನ ರಕ್ತನಾಳಗಳ ಮೇಲೆ ಒತ್ತಡ ಉಂಟಾಗಿ ರಕ್ತಸ್ರಾವ ಮತ್ತು ರಕ್ತಹೀನತೆ ಉಂಟಾಗಬಹುದು. ಆದ್ದರಿಂದ ಜೀವನ ಶೈಲಿಯಲ್ಲಿ ಬದಲಾವಣೆ, ಯೋಗ ಮತ್ತು ಧ್ಯಾನ ಮುಂತಾದ ಒಳ್ಳೆಯ ಅಭ್ಯಾಸಗಳಿಂದ ಇವುಗಳನ್ನು ತಡೆಗಟ್ಟಬಹುದು.

**ಆಹಾರ ಪದ್ಧತಿ ಮತ್ತು ಕಣ್ಣಿನ ಆರೋಗ್ಯ** : ಮೊದಲು ಕಂಡು ಬರುತ್ತಿದ್ದ ವಿಟಮಿನ್ 'ಎ' ಕೊರತೆಯಿಂದ ಉಂಟಾಗುವ ಕಣ್ಣಿನ ತೊಂದರೆಗಳು ಈಗ ಅತಿ ವಿರಳ. ಆದರೂ ಕಣ್ಣಿನ ಆರೋಗ್ಯಕ್ಕೆ ವಿಟಮಿನ್ ಎ, ಸಿ, ಡಿ, ಇ, ಜಿಂಕ್, ಒಮೆಗಾ-೩ ಕೊಬ್ಬು ಅಮ್ಲಗಳು ಬಹಳ ಮುಖ್ಯ. ಹಸಿರು ಸೊಪ್ಪುಗಳು, ಕ್ಯಾರೆಟ್, ಪಪ್ಪಾಯ, ಮಾವು, ಮೀನು, ಬಾದಾಮಿ, ವಾಲ್‌ನಟ್, ಮೊಟ್ಟೆ, ಹಾಲು ಇವುಗಳನ್ನು ನಿಯಮಿತವಾಗಿ ಆಹಾರದಲ್ಲಿ ಸೇರಿಸಬೇಕು. ಸಮತೋಲನ ಆಹಾರ ಪದ್ಧತಿ ಕಣ್ಣಿನ ಜೊತೆಗೆ ಸಂಪೂರ್ಣ ಆರೋಗ್ಯವನ್ನು ಕಾಪಾಡುತ್ತದೆ.

ಒಟ್ಟಿನಲ್ಲಿ, ಆರೋಗ್ಯಕರ ಅಭ್ಯಾಸಗಳು ತಕ್ಷಣವೂ ಮತ್ತು ದೀರ್ಘಕಾಲಕ್ಕೂ ಕಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಮಹತ್ತರ ಪಾತ್ರವಹಿಸುತ್ತವೆ. ಆರೋಗ್ಯವಾಗಿರೋಣ ಮತ್ತು ಅಮೂಲ್ಯ ದೃಷ್ಟಿಯನ್ನು ಕಾಪಾಡಿಕೊಳ್ಳೋಣ.

## ಅನಿವಾಸಿ ಲೋಕ



ಡಾ. ಮುರಳಿ ಹತ್ವಾರ್
ವಿಭಾಗೀಯ ಸಂಪಾದಕರು



ಡಾ. ಕೇಶವ ಕುಲಕರ್ಣಿ
ಯು.ಕೆ.

### ಕಿನ್ಸುಗಿ

ಹೇಳದೇ ಉಳಿದ ಮಾತು
ಧಡಕ್ಕನೇ ಹಾಕಿದ ಬಾಗಿಲು
ಕಣ್ಣಲ್ಲೇ ಉಳಿದ ಕಂಬನಿ
ಎದೆಯಲ್ಲೇ ಕುದಿವ ಅವಮಾನ
ತಲೆಯನ್ನು ತಿನ್ನುವ ಅನುಮಾನ



ಒಂದು ದಿನ ನಮ್ಮ ಬದುಕುಗಳು
ಅಕಾಲದಲ್ಲಿ ಚೆಲ್ಲಾಪಿಲ್ಲಿಯಾಗಿ
ಬಿದ್ದ ಪಾರಿಜಾತದ ಹೂಗಳಂತೆ
ನಿಶ್ಶಬ್ದವಾಗಿ ಪಚ್ಚೆಯಾಗಿ ಬಣ್ಣ ಒಣಗಿ
ಬಿದ್ದುಕೊಂಡಿರುತ್ತವೆ
ಎತ್ತಿಕೊಳ್ಳಲು ಹೋದರೆ ನೆಲಕ್ಕೆ ಅಂಟಿಕೊಂಡು
ನರಳುತ್ತವೆ ಹಸಿ ಕೊಳಕು

ಡೈನಿಂಗ್ ಟೇಬಲ್ಲಿನ ಊಟಕ್ಕೆ ನಿಶ್ಶಬ್ದದ ರುಚಿ
ಸಾಂಬಾರಿಗೆ ಹಿಂದಿನ ದಿನದ ಸುಳ್ಳಿನ ವಾಸನೆ
ಸಾಮಾಜಿಕ ತಾಣಗಳು ಸಾವಿರ ಕಣ್ಣುಗಳಿಂದ
ದುರುಗುಟ್ಟಿ ನೋಡುತ್ತವೆ ಅಪ್-ಡೇಟಿಗೆ ಕಾಯುತ್ತ

ಮೂವ್ ಆನ್ ಅನ್ನುತ್ತಾನೆ ಥೆರಪಿಸ್ಟು
ದುಃಖ ಎನ್ನುವುದೇನು ನೇರ ದಾರಿಯೇ?
ಅದೊಂದು ಕಾಲುದಾರಿಯೂ ಇರದ ಬೆಟ್ಟ
ಪ್ರತಿಯೊಂದು ಹೆಜ್ಜೆಯೂ

ಸೋಲುಗಳನ್ನು ನೋವುಗಳನ್ನು ಅವಮಾನಗಳನ್ನು
ನೆನಪಿಸುತ್ತಲೇ ಇರುತ್ತದೆ
"ಏಕೆ, ಹೇಗೆ, ನನಗೇ ಯಾಕೆ,
ನಾನೇನು ತಪ್ಪು ಮಾಡಿದೆ?"
ಎಂದು ಪ್ರತಿಧ್ವನಿಸುತ್ತವೆ

ಗಾಜಿನಂತೆ ಒಂದೇ ಸಲ ಚೂರು ಚೂರಾಗುವುದಿಲ್ಲ
ಮೊದಲು ನೆಗ್ಗುತ್ತೇವೆ
ಆಮೇಲೆ ನಿಧಾನವಾಗಿ ಸೀಳುತ್ತೇವೆ
ಬಿ ರು ಕು ಬಿಡುತ್ತೇವೆ
ತುಂಡಾಗುತ್ತೇವೆ

ಜಪಾನೀಜರು ಬಿರುಕುಗಳನ್ನು
ಚಿನ್ನದಿಂದ ಕಿನ್ಸುಗಿ ಮಾಡುತ್ತಾರಂತೆ
ಬಿರುಕುಗಳು ಎದ್ದು ಕಾಣುವಂತೆ ಸುಂದರ
ಅಚ್ಚಹೊಸ ಬದುಕನ್ನು ಕಟ್ಟಲು
ಭೂತವನ್ನು ಅಳಿಸಬೇಕಾಗಿಲ್ಲ

ಬಹುಶಃ ಎಲ್ಲವನ್ನೂ
ಮೊದಲಿನಂತೆಯೇ ಜೋಡಿಸಬೇಕಾಗಿಲ್ಲ
ಹೊಸ ಆಕಾರದಲ್ಲೂ
ದೀಪವನ್ನು ಹಚ್ಚಬಹುದು
ಬಿರುಕುಗಳಲ್ಲಿಯೇ
ಪ್ರೀತಿ ಬೆಳಗಬಹುದಲ್ಲವೇ ಸಖಿ?

ಎತ್ತಿಕೊಳ್ಳಬಹುದಾದುದನ್ನು ಎತ್ತಿಕೊಳ್ಳೋಣ
ಒಂದು ನೆನಪಿನ ನಗು
ಕಾರಣವಿಲ್ಲದೆ ಹಿಡಿದ ಕೈ
ವಿನಾಕರಣ ನಗು
ಅಕಾರಣ ಪ್ರೀತಿ
ನಿಧಾನವಾಗಿ ಜೋಪಾನವಾಗಿ
ಒಂದೊಂದಾಗಿ ಒಟ್ಟುಗೂಡಿಸೋಣ ●



ಡಾ. ಜಿ. ಎಸ್. ಶಿವಪ್ರಸಾದ್
ಶೆಫೀಲ್ಡ್, ಯುಕೆ

# ಬದಲಾವಣೆ

ಸಮಾಜವನ್ನು ಬದಲಾಯಿಸಬೇಕೆಂದು
ನೀವದೆಷ್ಟು ಕಿರುಚಾಡಿದರೂ
ಮೈ ಪರಚಿಕೊಂಡರೂ
ಹಣೆ ಚಚ್ಚಿಕೊಂಡರೂ
ಸಮಾಜ, ಬದಲಾಗುವ
ಸಮಯ ಬಂದಾಗ
ಬದಲಾಗುತ್ತದೆ

ನಿಮ್ಮ ಸುತ್ತ ನೋಡಿ
ಅದೆಷ್ಟು ಅಸಮಾನತೆಗಳು
ಜಾತೀಯತೆ, ಧರ್ಮಾಂಧತೆ
ಅದೆಷ್ಟು ರೀತಿಯ ಶೋಷಣೆಗಳು

ನಿಮ್ಮ ಬದಲಾವಣೆಗಳೇನು
ಸ್ವಲ್ಪ ಸ್ಪಷ್ಟಪಡಿಸಿ
ಯಾರಿಗೆ ಬದಲಾವಣೆ,
ಯಾವ ದಿಕ್ಕಿಗೆ ಬದಲಾವಣೆ?

ಬದಲಾವಣೆಗೆ ಮುನ್ನ
ಶೋಷಿತರಿಗೆ ಬೇಕಲ್ಲವೇ ಬಿಡುಗಡೆ
ಎಲ್ಲರು ಸ್ಪರ್ಧೆಯಲ್ಲಿ ಓಡುವ ಮುನ್ನ
ಮೈದಾನ ಸಮತಟ್ಟಾಗಿರಬೇಕಲ್ಲವೇ?

ಕೆಲವರಷ್ಟೇ ಪ್ರಗತಿ ಸಾಧಿಸಿ
ಹಲವರನು ಹಿಂದೆ ಉಳಿಸಿ
ಕೆಲವರ ಜೇಬಿಗಷ್ಟೇ ದುಡ್ಡು ಇರಿಸಿ
ಮಾನವೀಯ ಮೌಲ್ಯಗಳನು ಕಡೆಗಣಿಸಿ
ಸಾಧಿಸಿದ ಸಾಧನೆಗಳು ಬದಲಾವಣೆಯೇ?

ಬದಲಾವಣೆಆಗಬೇಕಾಗಿರುವುದು
ನಮ್ಮಮನಸ್ಸುಗಳಲ್ಲಿ, ಹೃದಯಗಳಲ್ಲಿ
ಆದ್ಯತೆಗಳಲ್ಲಿ, ಸರಿ–ತಪ್ಪುಗಳಲ್ಲಿ
ನಮ್ಮಆಳವಾದನಂಬಿಕೆಗಳಲ್ಲಿ
ನೋಡುವದೃಷ್ಟಿಯಲ್ಲಿ
ವೈಯುಕ್ತಿಕನೆಲೆಗಳಲ್ಲಿ

ಬದಲಾವಣೆ ಬರುವುದು ಕವಿತೆ,
ಕಾದಂಬರಿಗಳಿಂದಲ್ಲ
ಜನನಾಯಕರ ಭಾಷಣಗಳಿಂದಲ್ಲ!
ಬದಲಾವಣೆ ಬರುವುದು;
ಜನಸಾಮಾನ್ಯರನೋವಿನಿಂದ,
ಕಣ್ಣೀರಿನಿಂದ, ವ್ಯಥೆಗಳಿಂದ
ಕೆಚ್ಚಿನಿಂದ, ಕ್ರಾಂತಿಯಿಂದ,
ಪ್ರಜಾಪ್ರಭುತ್ವದಲ್ಲಿ ನಮತಗಳಿಂದ

ಜನನಾಯಕರೇ, ಭಟ್ಟಂಗಿಗಳೇ
ಒಮ್ಮೆಹಿಂತಿರುಗಿನೋಡಿ
ಅನೇಕ ಘಟಾನುಘಟಿಗಳು
ಬಂದು ಮೀಸೆ ತಿರುವಿ
ಅಖಾಡದಲ್ಲಿ ಬಿದ್ದು
ಮಣ್ಣುಮುಕ್ಕಿದ್ದಾರೆ!

ನಿಮ್ಮ ಭ್ರಮೆಗಳಿಂದ
ದಯವಿಟ್ಟು ಹೊರಬನ್ನಿ
ನೀವಿಲ್ಲದಿದ್ದರೂ;
ಕೋಳಿ ಕೂಗುತ್ತದೆ
ಬೆಳಗಾಗುತ್ತದೆ
ಕತ್ತಲಾಗುತ್ತದೆ
ನಾಯಿಗಳು ಬೊಗಳುತ್ತವೆ
ಹೊಸ ಹೂಗಳು ಅರಳುತ್ತವೆ

## ಕಾವ್ಯ ಸಂಪದ



ಡಾ. ಮೃದುಲಾ ಎ. ಎಮ್.
ವಿಭಾಗೀಯ ಸಂಪಾದಕರು



ಡಾ. ನಿತ್ಯಾನಂದ ಸುಂಡವಾಳು
ಮಕ್ಕಳ ತಜ್ಞರು
ಬೆಂಗಳೂರು

### ಎಲ್ಲ ಇದ್ದು ಇಲ್ಲದಂತೆ

ಎಲ್ಲ ಏನೆಲ್ಲ ಇದ್ದು
ಇಲ್ಲದಂತನಿಸುವುದೇಕೆ
ಸುತ್ತ ನೆರೆದವರೊಳಗು
ಏಕಾಂತದ ಬಯಕೆ
ಅಕಾರಣ ದುಮ್ಮಾನ
ಅನಾಥಭಾವ
ಸ್ವಂತಿಕೆಯ ತಡಕಾಟ
ಹುಟ್ಟು ಸ್ವಭಾವ

ಗಳಿಕೆಯ ಬೆನ್ನು ಹತ್ತಿ
ಸಂತೆಯಲಿ ಸುತ್ತಾಟ
ಸಂಬಂಧಗಳ
ಮೂಟೆಸುತ್ತಿ
ಏನೇನೊ ಆಟ
ಓಟ ಕಪಟ

ಓರಗೆಯವರೊಂದಿಗೆ
ಸ್ಪರ್ಧೆ ಜಿದ್ದಾಜಿದ್ದಿ
ಫಲಾಫಲಗಳ ಜಿಜ್ಞಾಸೆ
ಇಹಪರದಲ್ಲು
ಶೂನ್ಯ ಸಂಪನ್ನ

ಪರಂಪರೆಯೆ
ಕಳಚಿದಂತೆ
ನಂಬಿಕೆಯೆ
ಅಪರಿಚಿತ
ಬೆವರು ಹರಿಸಿ
ರಕ್ತ ಬಸಿದ
ಯತ್ನ ಅಪಮೌಲ್ಯ

ತತ್ಕ್ಷಣದ ಸಿದ್ಧಿ
ದಕ್ಕದಿರೆ ಖಿನ್ನ
ಭಿನ್ನ ವಿಚ್ಛಿನ್ನ
ಅಕಶೇರುಕ ಜೀವಿ
ಸುಳಿಗಾಳಿಗು
ನಿಡು ಸುಯ್ವ ಸಂತಾನ

ಸಂದಂತೆ ಕಾಲ
ಹೊಂದಾಣಿಕೆ
ಅನಿವಾರ್ಯ
ಏಕತಾನದ
ಬದುಕಿನಂಚಲ್ಲುಳಿದ
ಶೇಷ ವಿಶೇಷಗಳೆಷ್ಟೊ

ಹಂಬಲ ಗೊಂದಲ
ವೈರಾಗ್ಯಗಳ ತಾಕಲಾಟ
ಐಷಾರಾಮದ
ಬಿಸಿಲ್ಗುದುರೆ ಬೆನ್ನಟ್ಟಿ
ಜಂಗಮವೆ ಇಲ್ಲಿ ಸ್ಥಾವರ



**ಡಾ. ಉಮಾ ಚಿಕ್ಕರಡ್ಡಿ**
ಧಾರವಾಡ

## ಉಳಿದು ಹೋದ ಪ್ರಶ್ನೆ

ಪಿತೃ ವಾಕ್ಯ ಪರಿಪಾಲನೆಗಾಗಿ
ಪಟ್ಟ ತೊರೆದು
ಅಡವಿ ಸೇರಲು ರಾಮ,
ನವವಧು ರಾಜಕುಮಾರಿ
ಜಾನಕಿಯೇಕೆ
ಗಂಡನ ಹಿಂಬಾಲಿಸಿದಳು?

ದಾಯಾದಿಗಳ ದ್ವೇಶಕ್ಕೆ ಬಲಿಯಾಗಿ
ಅಜ್ಞಾತರಂತೆ
ಊರೂರು ಅಲೆದರೆ
ಪಂಚಪಾಂಡವರು,
ದ್ರೌಪದಿಯೇಕೆ ಸೈರಂಧ್ರಿಯಾಗಿ
ಗಂಡಂದಿರ ಹಿಂಬಾಲಿಸಿದಳು
ಕೀಚಕ-ಕೀಟಗಳ ಕಾಟದಲ್ಲೂ?

ಸಿದ್ಧಾರ್ಥನೊಂದು ರಾತ್ರಿ
ಎಲ್ಲವನು ತೊರೆದು ಹೊರಟು ಹೋದ
ಸತಿ-ಸುತರನ್ನೂ,
ಗೌತಮನಾಗಿ ಮರಳಿದವನ ಹಿಂದೆ
ಗಂಡನನ್ನು ಗಂಡನೆನಿಸದೇ
ಬುದ್ಧನೆಂದು ಬಿಕ್ಷಾಪಾತ್ರೆ ಹಿಡಿದು
ಹಿಂಬಾಲಿಸಿದಳೇಕೆ ಯಶೋಧರೆ?

ಸತ್ಯಪಾಲನೆಯ ಹಾದಿಯಲ್ಲಿ
ಎಲ್ಲವನ್ನೂ ಕಳೆದುಕೊಂಡು
ಬಜಾರಿನಬೀದಿಗಿಳಿದ ರಾಜಾ ಸತ್ಯಹರಿಶ್ಚಂದ್ರ,
ಚಂದ್ರಮತಿಯೇಕೆ ಅರಮನೆ ತೊರೆದು
ನಿರ್ಗತಿಕ ಗಂಡನ ಹಿಂಬಾಲಿಸಿ
ಮಾರಾಟವಾದಳು?

ಒಂದೇ ಎರಡೇ?
ಅಸಂಖ್ಯ ಪತ್ನಿಯರು
ಬದುಕಿದ
ಸತ್ತ
ಬದುಕಿಯೂ ಸತ್ತ
ಗಂಡಂದಿರ ಹಿಂಬಾಲಿಸಿ
ಚರಿತ್ರೆಯುದ್ದಕ್ಕೂ ಚಿತೆಯೇರಿದರು

ಯಾರೂ ಕೇಳಿಕೊಳ್ಳದ
ಪ್ರಶ್ನೆಯೊಂದು
ಉಳಿದು ಹೋಗಿದೆ?
ಪತಿ ಮಹಾಶಯರೇಕೆ
ಹಿಂಬಾಲಿಸಲಿಲ್ಲ?

ಗಂಡನಿಲ್ಲದೇ ಕಾಡು ಹೊಕ್ಕ
ಚೊಚ್ಚಲ ಬಸುರಿ ಸೀತೆ
ಬೆಂಕಿಯಲ್ಲಿ ಬೆಂದ
ಅವಮಾನಿತ ಸತಿ
ಶಾಪಗ್ರಸ್ತೆ ಶಾಕುಂತಲೆ
ಕಲ್ಲಾದ ಅಹಲ್ಯೆ
ಎಲ್ಲ ಒಂಟಿಯಾಗಿಯೇ!

ಯಾವೊಬ್ಬ ಗಂಡನೂ
ಹೆಂಡತಿಯನ್ನು
ಹಿಂಬಾಲಿಸಲಿಲ್ಲವೇಕೆ?



## ವಿದ್ಯಾರ್ಥಿ ಲೋಕ

# ವೈದ್ಯ ಕಲಿಕೆಯ ಅನುಭವ



**ಡಾ. ವಿನಯ ಶ್ರೀನಿವಾಸ**
ವಿಭಾಗೀಯ ಸಂಪಾದಕರು



**ವಿಶ್ವಾಸ್ ವಿ ಕೆ**
ದ್ವಿತೀಯ ಎಂಬಿಬಿಎಸ್
ಎಸ್ ಎನ್ ವೈದ್ಯಕೀಯ
ಮಹಾವಿದ್ಯಾಲಯ
ಬಾಗಲಕೋಟೆ

ವೈದ್ಯ ಕಲಿಕೆಯ ವಿಭಾಗ ಒಂದು ಉನ್ನತ ಹಾಗೂ ಶ್ರೇಷ್ಠ ಜವಾಬ್ದಾರಿ ಎಂದು ಸಮಾಜದಲ್ಲಿ ಗುರುತಿಸಿಕೊಂಡಿದೆ. ಹಲವಾರು ವಿದ್ಯಾರ್ಥಿಗಳು ಅವರ ಜೀವನದಲ್ಲಿ ಒಂದು ದಿನ ವೈದ್ಯನಾಗಿ ಸಮಾಜ ಸೇವೆ ಮಾಡಬೇಕು, ಸಮಾಜವನ್ನು ರೋಗಮುಕ್ತ ಮಾಡಬೇಕು ಎಂದುಕೊಂಡಿರುತ್ತಾರೆ. ವೈದ್ಯರು ಕೇವಲ ಗುಣಪಡಿಸುವವರಲ್ಲ, ಅವರು ಮಾರ್ಗದರ್ಶಕರು. ವೈದ್ಯ ಸೇವೆಯು ಒಂದು ಅದ್ಭುತ ಹಾಗೂ ಉನ್ನತವಾದ ವೃತ್ತಿ. ಈ ವೃತ್ತಿಯನ್ನು ಕಲಿಯುವುದು ಒಂದು ಬಹಳ ಮುಖ್ಯವಾದ ಸ್ಥಾನ ಪಡೆದುಕೊಂಡಿದೆ. ಪ್ರತಿ ವಿದ್ಯಾರ್ಥಿಗೆ ತಾನು ವೈದ್ಯನಾಗಿ ಸಮಾಜದಲ್ಲಿ ಹರಡುವ ವಿಭಿನ್ನ ರೋಗಗಳನ್ನು ಚಿಕಿತ್ಸೆ ಕಂಡು ಹಿಡಿಯಬೇಕು ಎಂಬ ಮಹದಾಸೆಯಿರುತ್ತದೆ. ವೈದ್ಯ ಜೀವನದಲ್ಲಿ ಹಲವಾರು ಕಷ್ಟಕರವಾದ ವಿಷಯಗಳನ್ನು ಕಲಿಯುತ್ತೇವೆ. ಅವುಗಳ ವಿವರಣೆ ಮತ್ತು ಮಹತ್ವವನ್ನು ಕಲಿಯುವುದು ಮತ್ತು ಅದರ ಮುಖ್ಯವಾದ ಪರಿಣತಿಯನ್ನು ತಿಳಿಯುವುದು ಬಹಳ ಸಹಾಯಕ ಮತ್ತು ವಿದ್ಯಾರ್ಥಿಗಳ ಜ್ಞಾನವನ್ನು ಹೆಚ್ಚಿಸುತ್ತದೆ.

ನನ್ನ ವೈದ್ಯ ವಿದ್ಯಾರ್ಥಿ ಜೀವನ ಪ್ರಾರಂಭವಾದದ್ದು ೦೪-೦೧-೨೦೨೨ ರಲ್ಲಿ, ಬಸವೇಶ್ವರ ವಿದ್ಯಾವರ್ಧಕ ಸಂಘದ ಶ್ರೀ ನಿಜಲಿಂಗಪ್ಪ ವೈದ್ಯಕೀಯ ಕಾಲೇಜಿನಲ್ಲಿ. ಅಲ್ಲಿ ಮೊದಲನೆಯ ದಿನವು ಬಹಳ ರೋಮಾಂಚಕ ಮತ್ತು ಉತ್ಸುಕವಾಗಿತ್ತು ಎಲ್ಲರ ತಂದೆ ತಾಯಿಯರು ತಮ್ಮ ಮಕ್ಕಳು ಎಂಬಿಬಿಎಸ್ ಕಲಿಯುವ ಭಾಗ್ಯ ಒದಗಿ ಬಂದಿರುವುದನ್ನು ನೋಡಿ ಸಂತೋಷ ಪಡುತ್ತಿದ್ದರು. ನನ್ನ ವೃತ್ತಿಯ ಮೊದಲ ವರ್ಷದಲ್ಲಿ ಬಹಳಷ್ಟು ಗೆಳೆಯರು ವಿಭಿನ್ನ ಸ್ಥಳಗಳಿಂದ ಆಗಮಿಸಿದ್ದರು. ನಮಗೆ ಮೊದಲ ದಿನದಿಂದಲೇ ಶಿಕ್ಷಕರು ಕಲಿಸಲು ಪ್ರಾರಂಭಿಸಿದರು. ಮೊದಲ ವರ್ಷದಲ್ಲಿ ಮಹತ್ವವಾದ ಮೂರು ವಿಷಯಗಳನ್ನು ಕಲಿತೆವು ಮತ್ತು ಅವು ಒಂದಕ್ಕೊಂದು ಸಂಬಂಧಿತವಾಗಿದ್ದವು. ನಮ್ಮ ಶರೀರದ ಅಂಗಾಂಗಗಳ ರಚನೆ ಮತ್ತು ಅವುಗಳ ಮುಖ್ಯವಾದ ಕಾರ್ಯಗಳನ್ನು ತಿಳಿಯುವುದು, ಶರೀರದಲ್ಲಿರುವ ವಿಭಿನ್ನವಾದ ರಾಸಾಯನಿಕ ಸಮೂಹದಲ್ಲಿ ಆಗುವ ಬದಲಾವಣೆ ಕೊರತೆ ಹಾಗೂ ಹೆಚ್ಚುವಿಕೆಯನ್ನು ಗುರುತಿಸಿ ಅದರಲ್ಲಿ ಬರುವ ವ್ಯತ್ಯಾಸ ಆದರಿಸಿ ರೋಗಗಳನ್ನು ಗುರುತಿಸಿ ಪರಿಹಾರ ಕಂಡುಕೊಳ್ಳಬಹುದು. ಇದು ಮೊದಲನೆಯ ವರ್ಷದ ಅಧ್ಯಯನದ ಅನಿಸಿಕೆ. ನಂತರ ಎರಡನೇ ವರ್ಷ ಪ್ರಾರಂಭವಾಯಿತು ಈ ವರ್ಷದಲ್ಲಿ ನಾವು ಮತ್ತೆ ಮೂರು ವಿಷಯಗಳನ್ನು ಕಲಿತೆವು. ಅದರಲ್ಲಿ ನಾವು ಬಹಳ ಉತ್ಸುಕರಾಗಿದ್ದೆವು. ಸೂಕ್ಷ್ಮ ಜೀವಶಾಸ್ತ್ರದಲ್ಲಿ ಹೇಗೆ ಸಣ್ಣ ಸಣ್ಣ ನಮ್ಮ ಕಣ್ಣಿಗೆ ಕಾಣಿಸದ ಸೂಕ್ಷ್ಮಜೀವಿಗಳು ನಮ್ಮ ಆರೋಗ್ಯಕ್ಕೆ ಹಾನಿ ಉಂಟು ಮಾಡುತ್ತವೆ ಎಂಬುದನ್ನು ಕಲಿತೆವು. ಔಷದ ಶಾಸ್ತ್ರದಿಂದ ಅವುಗಳನ್ನು ನಾವೇ ಹೇಗೆ ನಿಯಂತ್ರಿಸಬಹುದು ಅಥವಾ ಗುಣಪಡಿಸಬಹುದು ಎಂಬುದನ್ನು ತಿಳಿದೆವು. ವೈದ್ಯ ವೃತ್ತಿ ಕೇವಲ ಜೀವ ಕಾಪಾಡುವುದು ಹಾಗೂ ರೋಗ ಗುಣಪಡಿಸುವುದಲ್ಲ, ನಾವು ಸಮುದಾಯಕ್ಕೆ ಮಾರ್ಗದರ್ಶಕರಾಗಬೇಕು ಎಂಬುದನ್ನು ನಾನು ಅರ್ಥ ಮಾಡಿಕೊಂಡೆ. ಭಗವಂತನು ವೈದ್ಯ ಎಂಬ ಮನುಷ್ಯ ರೂಪದಲ್ಲಿ ಬಂದು ಎಲ್ಲರ ಆರೋಗ್ಯವನ್ನು ಕಾಪಾಡುತ್ತಾನೆಂದು ಎಲ್ಲರೂ ಭಾವಿಸಿದ್ದಾರೆ. ಜೀವನದಲ್ಲಿ

ಶ್ರೀಮಂತಿಕೆಯನ್ನು ನಾವು ಮತ್ತೆ ಮತ್ತೆ ಪಡೆಯಬಹುದು ಆದರೆ ಆರೋಗ್ಯವು ನಿಮ್ಮ ಕೈ ಹಿಡಿಯದಿದ್ದರೆ ನೀವು ನಿಮ್ಮ ಜೀವನದ ಮುಖ್ಯವಾದ ಶ್ರೀಮಂತಿಕೆಯನ್ನು ಕಳೆದುಕೊಂಡಂತೆ. ಬಡವರ ಕಷ್ಟ, ನೋವು, ನಲಿವು ಹಾಗೂ ರೈತರ ಬವಣೆಗಳನ್ನು ತುಂಬಾ ಹತ್ತಿರದಿಂದ ನೋಡಿರುವ ನಾನು ಅವರಿಗಾಗಿ ನನ್ನ ವೃತ್ತಿ ಜೀವನದ ಬಹುತೇಕ ಸಮಯವನ್ನು ವ್ಯಯ ಮಾಡಬೇಕೆಂದುಕೊಂಡಿದ್ದೇನೆ. ವೈದ್ಯೋ ನಾರಾಯಣೋ ಹರಿ ಎನ್ನುವ ಮಾತನ್ನು ವಾಸ್ತವಿಕತೆಗೆ ಹತ್ತಿರವಾಗಿಸುವ ಪ್ರಯತ್ನ ನನ್ನದು. ಇದರಲ್ಲಿ ನನ್ನ ತಂದೆ ತಾಯಿ ನೀಡಿರುವ ಪ್ರೋತ್ಸಾಹಕ್ಕೆ ನಾನೆಂದಿಗೂ ಅಭಾರಿಯಾಗಿದ್ದೇನೆ. ●

---



**ಮಧುಮಿತಾ ಸಿದ್ದೇಶ್ವರ್**
ದ್ವಿತೀಯ ಎಂ ಬಿ ಬಿ ಎಸ್
ಸುಬ್ಬಯ್ಯ ವೈದ್ಯಕೀಯ ಮಹಾ ವಿದ್ಯಾಲಯ ಶಿವಮೊಗ್ಗ

# ನೀಲಿ ಪರ್ವತದ ನೆನಪು!

ನಾನು ಮೊದಲ ವರ್ಷದ ಪಿಯುಸಿಯಲ್ಲಿ ಓದುತ್ತಿದ್ದೆ. ಆಗ, ನನ್ನ ಇಡೀ ದಿನ ಮತ್ತು ರಾತ್ರಿ ಬರೀ ಓದು ಮತ್ತು ಕಾಲೇಜು. ರಾತ್ರಿ ಕನಸಿನಲ್ಲೂ ಬರೀ ಪರೀಕ್ಷೆಗಳೇ ಬರುತ್ತಿದ್ದವು. ಆಸಮಯದಲ್ಲಿ ನನ್ನ ಅಪ್ಪ-ಅಮ್ಮ ಮತ್ತು ಕುಟುಂಬದವರು ಆಸ್ಟ್ರೇಲಿಯಾಕ್ಕೆ ಪ್ರವಾಸ ಹೋಗುವುದು ಎಂದು ನಿರ್ಧರಿಸಿದರು. ನನಗೆ ಅವರೆಲ್ಲರೊಂದಿಗೆ ಪ್ರವಾಸ ಹೋಗಲು ಇಷ್ಟ. ಆದರೆ ರಜ ಕೇಳಲು ಭಯ. ಒಂದು ವಾರದ ರಜೆ ಪಡೆಯುವುದು ದೊಡ್ಡ ಸಾಹಸವೇ ಆಗಿತ್ತು. ದೇವರಿಗೆ ಕಾಯಿ ಒಡೆಸುವ ಅರ್ಜಿ ಎಲ್ಲಾ ಹಾಕಿ, ಅಳುಮುಖಮಾಡಿ ಸಣ್ಣದನಿಯಲ್ಲಿ ನಾನೊಬ್ಬಳೇ ಇರುವುದು ಕಷ್ಟ ಎಂದೆಲ್ಲ ಪ್ರಿನ್ಸಿಪಾಲ್‌ಗೆ ವಿವರಣೆ ಕೊಟ್ಟೆ. ಯಾರ ಪುಣ್ಯವೋ, ಅಂತೂ ಅವರು ಚೂರು ಹೆದರಿಸಿದರೂ ಕಡೆಗೆ ಒಪ್ಪಿ ರಜೆ ಸಿಕ್ಕಾಗ ನನಗೆ ಬಹಳ ಖುಷಿಯಾಗಿತ್ತು.

ಮಕ್ಕಳೆಲ್ಲರೂ ಸೇರಿ ಪ್ರವಾಸದ ತಯಾರಿಯಲ್ಲಿ ತೊಡಗಿದೆವು. ಯಾವ ಬಟ್ಟೆ ತೊಡಬೇಕು, ಯಾವ ಸ್ನ್ಯಾಕ್ಸ್ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಗಂಟೆಗಟ್ಟಲೇ ಡಿಸ್ಕಶನ್ ನಡೆಯಿತು. ಅದರ ಜತೆ ೧೧ಗಂಟೆಗಳ ವಿಮಾನಪ್ರಯಾಣದಲ್ಲಿ ಯಾವ ಸಿನಿಮಾಗಳನ್ನು ನೋಡಬೇಕು ಎಂದೂ ದೊಡ್ಡ ಲಿಸ್ಟ್ ತಯಾರಾಯಿತು. ಅಂತೂ ಆದಿನ ಬೆಳಿಗ್ಗೆ ಬೇಗ ರೆಡಿಯಾಗಿ ವಿಮಾನ ನಿಲ್ದಾಣಕ್ಕೆ ಹೋದರೆ ಫ್ಲೈಟ್ ಡಿಲೇಯ್ಡ್ ಎಂಬ ದೊಡ್ಡ ಬೋರ್ಡ್. ಸ್ವಲ್ಪ ಬೇಜಾರಾದರೂ ಪ್ರತಿಯೊಬ್ಬರಿಗೂ ಸಾವಿರ ರೂಪಾಯಿ ವೋಚರ್ ಕೊಟ್ಟಾಗ ನಮಗೆಸಂತೋಷವೇ ಆಯಿತು. ಆ ಕ್ಷಣಕ್ಕೆ ಫುಲ್‌ಚಿಲ್ಲಿಂಗ್! ಸಾಕಷ್ಟು ತಡವಾಗಿ ವಿಮಾನ ಹತ್ತಿದೆವು. ವಿಮಾನದಲ್ಲಿ ಟಿವಿಯೇ ಇರಲಿಲ್ಲ. ಅಂದರೆ ಸಿನಿಮಾ ನೋಡುವ ಹಾಗಿಲ್ಲ. ೧೧ ಗಂಟೆಗಳ ಕಾಲ ಮಾಡುವುದೇನು? ಅತ್ತಿತ್ತ ಓಡಾಡದೇ, ನೋಡಲು ಏನೂ ಇಲ್ಲದೇ ಸುಮ್ಮನೇ ಯೋಚಿಸುತ್ತಾ ಕುಳಿತುಕೊಳ್ಳಬೇಕಾಯಿತು. ಸೇಮ್ ಕ್ಲಾಸ್ ರೂಮ್ ಅನ್ನಿಸಿತ್ತು ನನಗೆ!! ಅಮ್ಮ-ಅಪ್ಪರ ಒತ್ತಾಯಕ್ಕೆ ತಂದಿದ್ದ ಕಾಲೇಜ್ ಬುಕ್, ರೆಕಾರ್ಡ್ ಓದಿ ಬರೆಯಲೇ ಬೇಕಾಯ್ತು! ಬೇಸರ-ಸಿಟ್ಟಿನಿಂದ ಅರ್ಧಗಂಟೆಯಲ್ಲಿ ಅದನ್ನು ಮುಗಿಸಿ ಉಳಿದ ೧೦ಗಂಟೆ ನಿದ್ರೆಮಾಡುತ್ತಾ, ಊಟ-ತಿಂಡಿ, ಸಣ್ಣ ಜಗಳ. ಸಮಯ ಎಷ್ಟು ನಿಧಾನವಾಗಿ ಸಾಗುತ್ತಿದೆ ಎಂದು ವಾಚ್ ನೋಡುತ್ತಾ ಕಾಲ ಕಳೆದವು.



ಸಿಡ್ನಿಗೆ ತಲುಪಿದ ನಂತರ ಹೊಟೆಲ್ ರೂಮಿಗೆ ಹೋಗಿ

ಮಲಗೋಣ ಎಂದು ಕೊಂಡಿದ್ದೆವು. ಆದರೆ ದೊಡ್ಡವರ ಪ್ಲಾನ್ ರೆಡಿ ಇತ್ತು. ಅಲ್ಲಿಂದ ಮೂರುಗಂಟೆಗಳ ಪ್ರಯಾಣ ಮಾಡಿ ಬ್ಲೂಮೌಂಟೇನ್ಸ್‌ಗೆ ಹೋಗುವುದು. ಸುಸ್ತಾಗಿ ಜಗಳ ಮಾಡುವ ಶಕ್ತಿ ಇರಲಿಲ್ಲ. ಸುಮ್ಮನೇ ಒಪ್ಪಿಕೊಂಡೆವು. ರೈಲಿನಿಂದ ದೂರದಲ್ಲಿ ನೋಡಿದಾಗ ಪರ್ವತಗಳು ನೀಲಿ ಬಣ್ಣ ಕಾಣಿಸುತ್ತಿದ್ದವು. ಅಲ್ಲಿ ಬೆಳೆದಿರುವ ಯೂಕಲಿಪ್ಟಸ್ ಮರಗಳಿಂದ ಹೊರಬರುವ ಎಣ್ಣೆ ಕಣಗಳು ವಾತಾವರಣದಲ್ಲಿ ಹರಡುತ್ತವೆ. ಅದು ಬೆಳಕನ್ನು ಚದುರಿಸುವುದರಿಂದ ಈ ನೀಲಿ ಬಣ್ಣ ಕಾಣುತ್ತದೆ ಎಂದು ತಿಳಿದು ಆಶ್ಚರ್ಯವಾಯಿತು. (ಈ ಮಾಹಿತಿ ಕೊಟ್ಟಿದ್ದು ಗೂಗಲಮ್ಮ). ನನಗೆ ನಮ್ಮ ನೀಲಗಿರಿ ಪರ್ವತಗಳು ನೆನಪಾಯಿತು.

ಬ್ಲೂಮೌಂಟೇನ್ಸ್‌ನಲ್ಲಿ ಅತ್ಯಂತ ಪ್ರಸಿದ್ಧವಾಗಿರುವುದು "ತ್ರಿಸಿಸ್ಟರ್ಸ್" ಬಂಡೆಗಳು. ಆಳವಾದ ವ್ಯಾಲಿಯಲ್ಲಿ ದೊಡ್ಡ ಮೂರು ಕಲ್ಲುಗಳಿವೆ. ನಮ್ಮಲ್ಲಿ ಇಂಥಹ ಅನೇಕ ಕಲ್ಲು ಬೆಟ್ಟಗುಡ್ಡಗಳಿವೆ. ಆದರೆ ಇಷ್ಟು ಸ್ವಚ್ಛವಾಗಿ ಇಲ್ಲ, ಮತ್ತು ಪ್ರವಾಸಕ್ಕೆ ಅನುಕೂಲಗಳಿಲ್ಲ. ಇಲ್ಲಿ ಕಂಡ ಪ್ರತಿ ಕಲ್ಲಿಗೂ ಕತೆ ಹೇಳಿ 'ವಾವ್' ಎನ್ನುವಂತೆ ಮಾಡುತ್ತಾರೆ. ಸ್ಥಳೀಯ ಆದಿವಾಸಿ ಕಥೆಗಳ ಪ್ರಕಾರ, ಒಮ್ಮೆ ಮೆಹ್ನಿ, ವಿಮ್ಲಾ ಮತ್ತು ಗುನ್ನೇಡೂ ಎಂಬ ಮೂರು ಸುಂದರ ಸಹೋದರಿಯರು ಇದ್ದರು. ಅವರು ಪಕ್ಕದ ಕುಲದ ಮೂರು ಸಹೋದರರನ್ನು ಪ್ರೀತಿಸುತ್ತಿದ್ದರು.ಆದರೆ ಅವರ ಈ ಪ್ರೀತಿ ಎರಡು ಕುಲಗಳ ನಡುವೆ ಯುದ್ಧಕ್ಕೆ ಕಾರಣವಾಯಿತು. ಈ ಸಹೋದರಿಯರ ತಂದೆ ಶಕ್ತಿಶಾಲಿ ಮಾಂತ್ರಿಕನಾಗಿದ್ದ. ಯುದ್ಧದ ಸಮಯದಲ್ಲಿ ತನ್ನ ಮಕ್ಕಳನ್ನು ರಕ್ಷಿಸಲು, ಆತ ಅವರನ್ನು ಕಲ್ಲುಗಳಾಗಿ ಮಾಡಿದ. ಯುದ್ಧ ಮುಗಿದ ಮೇಲೆ ಅವರನ್ನು ಮತ್ತೆ ಮಾನವರಾಗಿ ಮಾಡುವ ಉದ್ದೇಶ ಅವನಿಗಿತ್ತು. ಆದರೆ ಆ ಮಾಂತ್ರಿಕ ಯುದ್ಧದಲ್ಲೇ ಸಾವನ್ನಪ್ಪಿದನು. ಹೀಗಾಗಿ ಆ ಮೂರು ಸಹೋದರಿಯರು ಶಾಶ್ವತವಾಗಿ ಕಲ್ಲುಗಳಾಗೇ ಉಳಿದುಬಿಟ್ಟರು ಎಂದು ಹೇಳಲಾಗುತ್ತದೆ. ಈ ಕಥೆಯನ್ನು ತಿಳಿದಾಗ ಆ ಬಂಡೆಗಳು ಕೇವಲ ಕಲ್ಲುಗಳಾಗಿ ಅಲ್ಲ. ಯುದ್ಧ ನೋಡಲು ಇಷ್ಟವಿಲ್ಲದೇ ಅಲ್ಲೇ ನಿಂತು ಬಿಟ್ಟ ಮೂರು ಅಕ್ಕ-ತಂಗಿಯರಂತೆ ತೋರಿದವು. ಮತ್ತಷ್ಟು ಗಮನಕೊಟ್ಟು ನೋಡಿದಾಗ ಒಬ್ಬಳು ಶಾಂತವಾಗಿ, ಮತ್ತೊಬ್ಬಳು ಗಂಭೀರವಾಗಿ, ಇನ್ನೊಬ್ಬಳು ಬೇಸರದಲ್ಲಿ ನಿಂತು ಎಲ್ಲರನ್ನೂ ನೋಡುತ್ತಾ ಮನುಷ್ಯರಾಗಲು ಕಾಯುತ್ತಿದ್ದಾರೆನೋ ಅನ್ನಿಸಿತು. ಎಲ್ಲಿಗೆ ಹೋದರೂ ಫೋಟೋ ಇಲ್ಲದಿದ್ದರೆ ಹೇಗೆ? ನಾವು ಸುಸ್ತಾಗಿದ್ದರೂ ಅಲ್ಲಲ್ಲಿ ನಿಂತು ಫೋಟೋ ತೆಗೆದುಕೊಳ್ಳುವ ಪ್ರಯತ್ನ ನಡೆಸಿದೆವು. ಕವಿದ ಮಂಜು, ಜೋರಾದ ಗಾಳಿಯಿಂದ ಒಳ್ಳೆಯ ಫೋಟೋಗಳು ಬರಲಿಲ್ಲ. ಅದೂ ಅಲ್ಲದೇ ಅಪ್ಪನ "ಹುಷಾರು" ಎಂಬ ಸತತ ಜಪ ನಡೆದೇ ಇತ್ತು.

ಆ ದಿನದ ಪ್ರವಾಸ ಮುಗಿಸಿ ಬಂದಾಗ ಸಿಕ್ಕಾಪಟ್ಟೆ ಸುಸ್ತಾಗಿ ಮಲಗಿದರೆ ಸಾಕು ಎನಿಸಿತ್ತು. ಆದರೆ ಈಗ ನೆನಪಾದಾಗ ಎಷ್ಟು ಚೆಂದದ ಕತೆ, ಒಳ್ಳೆಯ ಪ್ರವಾಸ ಅನಿಸುತ್ತದೆ.

●

---

# ಕಳೆದು ಹೋದ ಪ್ರೀತಿ



**ಶ್ರೇಯಸ್ ಎನ್**
ತೃತೀಯ ಎಂ ಬಿ ಬಿ ಎಸ್
ಸುಬ್ಬಯ್ಯ ವೈದ್ಯಕೀಯ ಮಹಾ
ವಿದ್ಯಾಲಯ ಶಿವಮೊಗ್ಗ

ಮರಳಿನ ಮೇಲೆ ಬರೆದ ಪ್ರೀತಿಯ ನೆರಳು ಕರಗಿದಾ
ನಿನ್ನ ನೆನಪಿನಲಿ ಮನದ ನಾದವು ಮಗ್ನಾದಾ
ಹಿಂದಿನ ಕ್ಷಣದ ಸುವಾಸನೆಯೂ ಈಗ ದೂರಾದಾ

ನಿನ್ನ ಹಾದಿಯಲಿ ನಿಂತ ಗಾಳಿ ಕೂಡ ನಿಶ್ಶಬ್ದವಾಯಿತೇ
ಮನದ ಒಡಲೊಳಗಿನ ಹಂಬಲವೂ ಈಗ ಚೂರುಚೂರಾಯಿತೇ
ಮತ್ತೆ ನಿನ್ನ ಹೆಸರನ್ನು ಜಪಿಸುವ ಧೈರ್ಯವೂ ಮೌನವಾಗಿತೇ

ಅಪೂರ್ಣ ಕಥೆಯ ಪುಟಗಳಲ್ಲಿ ಮಸುಕಾದ ನಗು
ಮರಳಿಬರದ ಕಾಲದಲಿ ಸುಟ್ಟ ಹೃದಯದ ಕುದುಗು
ಅಂತ್ಯವಿತ್ತಾದರೂ ಕಿತ್ತುಹೋದ ಕನಸಿನ ಒಲವು

ತಂಗಾಳಿ ತಂದ ನೆನಪಿನಲಿ ಕಣ್ಣೀರೇ ಹಾಡಿತೇ
ನಿನ್ನ ಹೆಸರು ಉಸಿರಾಗಿ ಪ್ರತಿರಾತ್ರಿ ಜಾರಿತೇ
ಬಿಟ್ಟ ಪ್ರೀತಿ ಸ್ಮರಣೆಯಲ್ಲಿ ನಾಳೆಯೇ ಹೆದರಿತೇ

ಅಸಾಧ್ಯವಾದ ಮರಳಾಟದಂತೆ ನಮ್ಮ ಕನಸು
ನೀ ಹೋದ ದಾರಿಯಲ್ಲಿ ಬಿದ್ದಿತು ನನ್ನ ಮನಸು
ಪ್ರೀತಿಯ ಕಾಯಿ ಬುತ್ತಿಯೂ ಇಂದೀಗ ತಣ್ಣನೆ ಮನಸು

ಬರಹವಾಯಿತೇ ನಿನ್ನ ಸಂಸ್ಮರಣೆಗಳ ಬೀಡು
ಮಾಡಿದ ವಾಗ್ದಾನಗಳೂ ಈಗ ಹುಲ್ಲಿನ ತೀಡು
ಮನದೊಳಗಿಂದು ಕಳೆದುಹೋದ ನಿನ್ನದೇ ನೀಡು

ಕಾಲವೇ ನಿಂತರೂ ಹೃದಯದ ಸದ್ದು ನಿಲ್ಲದು
ನಿನ್ನ ಕೊರತೆ ಹೊತ್ತ ರಾತ್ರಿ ಇಂದಿಗೂ ಮರೆಯದು
ಕಳೆಯದ ನೋವಿನ ಜ್ಯೋತಿ ಹೃದಯದಲಿ ಆರದು

ನಿನ್ನ ನೋಟದ ಸ್ಮರಣೆ ನನ್ನನ್ನು ಬೆಂದವು
ಶೂನ್ಯತೆಯ ಮೌನದಲಿ ನಾನೇ ಬೇಧವು
ಪ್ರೀತಿಯನ್ನು ಕಳೆದುಕೊಂಡು ಹೃದಯವೇ ಛಿದ್ರವು

ನಿನ್ನ ಹುಡುಕಿದ ದಾರಿಗಳೇ ಈಗ ಅನಾಥ
ಬಿರುಕಿನಲಿ ಬಿದ್ದ ಪ್ರೇಮದ ಗಾನವೇ ಮಾತ
ಮರೆವಿನ ಮಂಟಪದಲ್ಲಿ ಹೃದಯವಷ್ಟೇ ಸಾಕ್ಷಾತ್

ಹೋದ ಪ್ರೀತಿಯ ನೆರಳು ಇನ್ನೂ ನಾ ಬಿಟ್ಟಿಲ್ಲ

---

# ಪುಸ್ತಕಗಳ ಜಗತ್ತಿನಿಂದ ರೋಗಿಗಳ ಬದುಕಿಗೆ



**ಭೂಮಿ ಕಲ್ಮನೆ ಆಡಿದಂ**
ದ್ವಿತೀಯ ಎಂಬಿಬಿಎಸ್
ವೈದ್ಯಕೀಯ ವಿಜ್ಞಾನಗಳ
ಸಂಸ್ಥೆ ಶಿವಮೊಗ್ಗ

ನನ್ನ ಮೊದಲ ವೈದ್ಯಕೀಯ ಕ್ಲಿನಿಕಲ್ ಪೋಸ್ಟಿಂಗ್ ಒಂದು ಮರೆಯಲಾರದ ಅನುಭವ. "ನಾನು ಈಗ ವೈದ್ಯಕೀಯ ಜಗತ್ತಿನ ಒಂದು ಭಾಗ" ಎಂಬ ಸಣ್ಣ ಹೆಮ್ಮೆ ನನ್ನ ಬಿಳಿಕೋಟಿನ ಜೇಬಿನಲ್ಲಿ ನುಗ್ಗಿಕೊಂಡು ಕುಳಿತಿತ್ತು. ಆಸ್ಪತ್ರೆಯ ಆವರಣದಲ್ಲಿತ್ತು ಒಂದು ವಿಶಿಷ್ಟ ವಾತಾವರಣ – ಔಷಧಗಳ ವಾಸನೆ, ಜನರ ಆತಂಕ, ವೈದ್ಯರ ನಡೆನುಡಿ, ನರ್ಸ್‌ಗಳ ಶಾಂತ ಚಲನೆ ಮತ್ತು ಎಲ್ಲದರ ನಡುವೆ ಅನುಮಾನಗಳ ಮೌನ ಗಾಳಿ. ಪಠ್ಯಪುಸ್ತಕಗಳಲ್ಲಿ ಓದಿದ್ದ ರೋಗ ಮಾತ್ರವಲ್ಲದೆ ರೋಗಿಗಳ ಬದುಕು ನಮ್ಮ ಕಣ್ಣೆದುರು ತೆರೆದಾಗ ಆರೋಗ್ಯ ಪದದ ಅರ್ಥ ಹೊಸ ರೀತಿಯಲ್ಲಿ ಗೋಚರಿಸಿತು.

ನಾವು ನೋಡಿದ ರೋಗಿಗಳು ವಿವಿಧ ಬಗೆಯವರು. ಕೆಲವರು ವಿಷಾಹಾರ ಸೇವಿಸಿ ಬಂದವರು, ಮತ್ತೊಬ್ಬರು ತಮ್ಮ ತಪ್ಪಿಲ್ಲದೆ ಸೋಂಕಿಗೆ ಒಳಪಟ್ಟವರು, ಇನ್ನೊಬ್ಬರು ಧೂಮಪಾನ– ಮದ್ಯಪಾನದ ಬಂಧನದಲ್ಲಿ ಸಿಕ್ಕಿಬಿದ್ದವರು. ಇವರಲ್ಲಿ ಪ್ರತಿಯೊಬ್ಬರದೂ ಬೇರೆ ಕಥೆ, ಬೇರೆ ಹೋರಾಟ, ಆದರೆ ಒಂದೇ ನಿರೀಕ್ಷೆ

– ಅವರು ಆರೋಗ್ಯವಂತರಾಗಬೇಕು ಎಂಬುದು. ವೈದ್ಯಕೀಯ ಜಗತ್ತು ಕೇವಲ ಕಾಯಿಲೆಗಳ ಪಟ್ಟಿಯನ್ನಲ್ಲ, ಅದು ಮನಸ್ಸಿನ ನಂಬಿಕೆ, ಬದುಕಿನ ನಂಟು, ಆತ್ಮಸ್ಥೈರ್ಯದ ಮಿಡಿತಗಳೆಲ್ಲವನ್ನು ಹೊಂದಿದೆ ಎಂಬ ಅರಿವು ನಿಧಾನವಾಗಿ ನಮಗೆ ಮೂಡಿತು.

ನಾವು ಎರಡನೇ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳು. ತಲೆಯಲ್ಲಿ ಕ್ರೆಬ್ಸ್‌ಸೈಕಲ್, ಮೆಟಬಾಲಿಕ್ ಮಾರ್ಗಗಳು ಮೊದಲಾದುವನ್ನು ತುಂಬಿಕೊಂಡಿರುವವರು. ಆದರೆ ಇಲ್ಲಿ ಬಂದು ವಿಚಿತ್ರ ಪರಿವರ್ತನೆಯನ್ನೇ ನಾವು ಕಂಡೆವು. ನಮ್ಮ ಪಠ್ಯಪುಸ್ತಕಗಳು ನಮ್ಮ ದೇಹ ಹೇಗೆ ಕೆಲಸ ಮಾಡುತ್ತೆ ಎಂಬುದನ್ನು ಹೇಳಿಕೊಟ್ಟರೆ, ಕ್ಲಿನಿಕ್ಸ್ ಕಲಿಸುವುದು ಮನುಷ್ಯರನ್ನು ಹೇಗೆ ನೋಡಬೇಕು ಎಂದು. "ಹಿಸ್ಟರಿ ಟೇಕಿಂಗ್" ಅದೊಂದು ನಿಘಂಟಿನ ಪುಸ್ತಕಕ್ಕಿಂತ ದೊಡ್ಡದಾದ ಸಾಹಸ. ಕೆಲವರು ತುಂಬಾ ಸಹಕಾರಿ. ಕೆಲವರು ಪ್ರಶ್ನೆ ಕೇಳಿದರೆ ಕೋಪ, ಇನ್ನೂ ಕೆಲವರು ಮೌನ... ಆದರೆ ನಮ್ಮ ಡಿಫಾಲ್ಟ್ ಪ್ರಶ್ನೆಗಳು–"ನಿಮ್ಮ ಹೆಸರೇನು?" "ನಿಮ್ಮ ವಯಸ್ಸೆಷ್ಟು ?" "ನಿಮ್ಮ ಊರಾವುದು?" "ನಿಮ್ಮ ಮಲ ಮೂತ್ರ ವಿಸರ್ಜನೆ ಸರಿಯಾಗಿದೆಯಾ?", ಹೀಗೆ. ಒಮ್ಮೆ ತಲೆನೋವಿನಿಂದ ಬಳಲುತ್ತಿದ್ದ ರೋಗಿ ಹತ್ತಿರ ಹೋದಾಗ, ನಾವು ಯಂತ್ರದಂತೆ ಇದೇ ಪ್ರಶ್ನೆಗಳನ್ನು ಕೇಳಿದೆವು. ಆಗ ನೋವಿನಿಂದಲೇ ನಕ್ಕು ಅವರು "ನನಗೆ ತಲೆನೋವು, ನಿಮ್ಮ ಕಳವಳ ನನ್ನ ಮಲಮೂತ್ರ ವಿಸರ್ಜನೆಯ ಬಗ್ಗೆ ಯಾಕೆ?" ಎಂದಾಗ ನಾವು ನಾಚಿಕೆ ನಗುವಿನ ನಡುವೆ ಸಿಲುಕಿ ಕೊಂಡೆವು.



ಒಮ್ಮೆ ನಾವು ರೌಂಡ್ಸ್ ನಲ್ಲಿ ಹಿರಿಯ ವೈದ್ಯರೊಡನೆ ಹೋಗುತ್ತಿರುವಾಗ, ಅವರು ಈ ರೋಗಿಗೆ ಒಂದು ಮರ್ಮರ್ ಇದೆ ಎಂದರು. ಆಗ ನಾವು ಉತ್ಸಾಹದಿಂದ ಮೊದಲ ಬಾರಿ ಹಾಕಿದ ಸ್ಟೆತೋಸ್ಕೋಪಿನಲ್ಲಿ ಅವರಹೃದಯದ ಶಬ್ದ ಕೇಳಿ, ನಮ್ಮದೇ ಹೃದಯಕ್ಕೆ ಹೋಲಿಸಿಕೊಂಡೆವು. ಏನೋ ಅಬ್ನೋರ್ಮಲ್ ನಮಗೆ ಸಿಕ್ಕೇ ಬಿಟ್ಟಿತಲ್ಲ ಎಂದು ಖುಷಿಯಾದೆವು.

ಹೀಗೆ ಪ್ರತಿ ಹಾಸಿಗೆ, ಪ್ರತಿಮುಖ, ಪ್ರತಿ ಕಥೆ ನಮ್ಮಲ್ಲಿ ಹೊಸ ಅರಿವು ಮೂಡಿಸಿತು. ಆರೋಗ್ಯವೆಂದರೆ ಕೇವಲ ರೋಗಿಗಳ ದೇಹದ ಸುಧಾರಣೆಯಲ್ಲ, ಅವರ ಭರವಸೆಯನ್ನು ಗೆಲ್ಲುವುದು ಹಾಗೂ ಅವರನ್ನು ಎಲ್ಲಾ ರೀತಿಯಲ್ಲಿ ಆರೋಗ್ಯವಂತರನ್ನಾಗಿ ಮಾಡುವುದು. ಈ ಅನುಭವಗಳು ನಮಗೆ ವೈದ್ಯಕೀಯ ಕ್ಷೇತ್ರ ಕೇವಲ ಚಿಕಿತ್ಸೆಯಲ್ಲ, ಮನುಷ್ಯರ ಹೃದಯಗಳನ್ನು ಓದುವ ಕಲೆ ಎಂಬ ಸತ್ಯವನ್ನು ಕಲಿಸಿತು. ಪಠ್ಯಪುಸ್ತಕಗಳು ನಮಗೆ ದಾರಿ ತೋರಿಸಿದರೂ, ನಮ್ಮನ್ನು ಒಳ್ಳೆಯ ವೈದ್ಯರನ್ನಾಗಿ ಮಾಡುವುದು ರೋಗಿಗಳ ಕಥೆಗಳೇ. ನಾವು ವೈದ್ಯರಾಗುವುದು ನಮ್ಮ ಬಿಳಿಕೋಟು ಧರಿಸುವುದರಿಂದ ಪ್ರಾರಂಭವಾದರೂ, ನಾವು ನಿಜವಾದ ವೈದ್ಯರಾಗುವುದು ರೋಗಿಯ ಮನಸ್ಸನ್ನು ತಲುಪಿದಾಗ ಮಾತ್ರ ಎಂಬುದು ನಮಗೆ ಕ್ಲಿನಿಕ್ಸ್ ಅನುಭವದಿಂದ ತಿಳಿಯಿತು.

ಪದಬಂಧ

# ಪದಬಂಧ – ೨೨



ಡಾ. ರಮೇಶ್ ಬಾಬು
ನಿವೃತ್ತ ಪ್ರಾಧ್ಯಾಪಕರು, ಹುಬ್ಬಳ್ಳಿ



ಡಾ. ಸುಮಾ ಗುಡಿ
ವಿಭಾಗೀಯ
ಸಂಪಾದಕರು




**ಸುಳಿವುಗಳು:**

**ಎಡದಿಂದ ಬಲಕ್ಕೆ:**

೧. ಎಡೆಬಿಡದ (೪)

೩. ಕಟ್ಟಳೆ (೩)

೫. ಅನುಭವವುಳ್ಳ ವ್ಯಕ್ತಿ (೪)

೭. ಕೂಡಿ ಬಾಳುವ ಒಂದು ಗುಂಪು (೩)

೮. ಛಾಯೆ (೩)

೯. ಒಡೆಯ (೪)

೧೧. ಗುಂಡು ಹಾರಿಸುವ ಉಪಕರಣ (೩)

೧೩. ಕೊಳ್ಳು (೪)

೧೫. ಸಂಕೋಚ (೪)

೧೭. ವೀಳೆ ಎಲೆಯ ಜೊತೆಗೆ ತಿನ್ನುವ ಒಂದು ಪದಾರ್ಥ(೩)

೧೯. ಉನ್ನತಿಯಲ್ಲ ಅದಕ್ಕೆ ವಿರೋಧವಾದುದು (೪)

೨೧. ಸಂಚಾರ ವ್ಯವಸ್ಥೆ (೩)

೨೨. ಕಠಿಣವಲ್ಲ (೩)

೨೩. ಬಿಡುವಿನ ದಿನಗಳು (೪)

೨೫. ತಾಯಿಯ ಮನೆ (೩)

೨೭. ಸೇವಿಸುವ ಮುನ್ನ ಔಷಧಿ ಶೀಸೆಯನ್ನು ಚೆನ್ನಾಗಿ – – – – (೪)

೨೯. ಶತ್ರುತ್ವ (೪)

೩೧. ಚಾಕು ಅಥವಾ ಚೂರಿಯನ್ನು ಹರಿತಮಾಡುವಿಕೆ (೩)

೩೩. ಋಷಿಗಳೂ ಸದಾ – – – – ಗಳಲ್ಲಿ ತೊಡಗಿರುತ್ತಾರೆ (೪)
೩೫. ದುಶ್ಚಟ (೩)
೩೬. ಚಿಹ್ನೆ (೩)
೩೭. ಮನ್ಮಥನನ್ನು ಈಕೆಯ ಪತಿಯೆಂದೂ ಕರೆಯಬಹುದಲ್ಲವೇ? (೪)
೩೮. ಆಹಾರವನ್ನು ಶೇಖರಿಸಿಟ್ಟುಕೊಳ್ಳುವ ಅಂಗ (೩)
೩೯. –––– ಧನಗಳಿಂದ ಸಹಾಯ ಕೋರಲಾಗಿದೆ (೪)

**ಮೇಲಿನಿಂದ ಕೆಳಕ್ಕೆ**

೧. ರೋಗಬಾಧೆಯಿಲ್ಲದ ಸ್ಥಿತಿ (೪)
೨. ಸಾರವನ್ನು ಗ್ರಹಿಸುವುದು (೪)
೩. ಸತ್ಯನುಡಿ (೪)
೪. ಕೆಲವರು ಪತ್ನಿಯನ್ನು ಹೀಗೂ ಕರೆಯುತ್ತಾರೆ (೪)
೫. ಹಸನ್ಮುಖವಲ್ಲ (೪)
೬. ಮನವಿಮಾಡು (೪)
೧೦. ಹಡಗು (೩)
೧೨. ಸಂಪ್ರದಾಯ ವಿರೋಧಿಯನ್ನು ಹೀಗೆ ಸಂಬೋಧಿಸುತ್ತಾರೆ (೩)
೧೪. ಪೂರ್ಣಯ್ಯನವರು ಮೈಸೂರು ಸಂಸ್ಥಾನದ – – – ರಾಗಿದ್ದರು (೩)
೧೫. ಕನ್ನಡಿ (೩)
೧೬. ಒಂದು ಬಗೆಯ ಮಾವಿನ ಹಣ್ಣು (೩)
೧೭. ತೋಡುವುದು (೩)
೧೮. ಇಂತಹ ಗದ್ದೆಯಲ್ಲಿಯೇ ಕಂಬಳ ನಡೆಯುವುದು (೩)
೧೯. ಹಿಂಜರಿಕೆ (೩)
೨೦. ತಿನ್ನುವ ಪದಾರ್ಥ (೩)
೨೪. ಬಲೆ, ಜಾಲರಿ (೩)
೨೬. ಒಂದು ಪ್ರದೇಶದಿಂದ ಇನ್ನೊಂದಕ್ಕೆ ಸ್ಥಳಾಂತರವಾಗು (೩)
೨೮. ಬೇಡ (೩)
೨೯. ವಿಷ್ಣು ಮತ್ತು ಶಿವ ನೆಲೆಸಿರುವ ದಾವಣಗೆರೆ ಸಮೀಪದ ಊರು (೪)
೩೦. ಹೊಸ ರಚನೆ (೪)
೩೧. ಮದನ ಹೀಗೆ ಹುಟ್ಟಿದವನೇ?
೩೨. ಪೀಳಿಗೆ (೪)
೩೩. ಪ್ರಜೆಗಳ ಒಳಿತು (೪)
೩೪. ಯುದ್ಧದಲ್ಲಿ ಸೋತಾಗ ಓಡಿ ಹೋಗುವುದು (೪)

---

**ಪದಬಂಧ ೨೧ರ ಸರಿಯುತ್ತರಗಳು:**

**ಎಡದಿಂದ ಬಲಕ್ಕೆ:** ೧. ವಿವಾಹಿತ ೩. ನಾಪಿತ ೫. ಆವಿಷ್ಕಾರ ೭. ರುಪಾಯಿ ೮. ಪರಾಗ ೯. ತಮೋಮಯ ೧೧. ಡುಮುಕಿ ೧೩. ನವೋದಯ ೧೫. ಅಕಳಂಕ ೧೭. ಅರಸ ೧೯. ಸನಾತನ ೨೧. ಡಬರಿ ೨೨. ವಲ್ಲರಿ ೨೩. ಸಹಮತ ೨೫. ಕೆಸರು ೨೭. ಗೆಳೆತನ ೨೯. ಪ್ರಾಣವಾಯು ೩೧. ಮದನ ೩೩. ಆಲೆಮನೆ ೩೫. ಗಾಂಪರು ೩೬. ವಣಿಕ ೩೭. ಕಥೆಗಾರ ೩೮. ತುರಗ ೩೯. ಕಳಂಕಿತ

**ಮೇಲಿನಿಂದ ಕೆಳಕ್ಕೆ:** ೧. ವಿವಾದಿತ ೨. ತರುವಾಯ ೩. ನಾಯಿಪಾಡು ೪. ತಪರಾಕಿ ೫. ಆಗಮನ ೬. ರಸಮಯ ೧೦. ಮೋದಕ ೧೨. ಮುಕುರ ೧೪. ದಲಿತ ೧೫. ಅಭ್ಯಾಸ ೧೬. ಕಡತ ೧೭. ಅರಿಕೆ ೧೮. ಸವರು ೧೯. ಸರಿಗೆ ೨೦. ನವೀನ ೨೪. ಹರಣ ೨೬. ಸರೋದ ೨೮. ತತ್ಸಮ ೨೯. ಪ್ರಾಸಂಗಿಕ ೩೦. ಯುಗಾಂತರ ೩೧. ಮರುಮಾತು ೩೨. ನವಯುಗ ೩೩. ಆಕಸ್ಮಿಕ ೩೪. ನೆರೆಯಾತ

ವರದಿ

# ಕನ್ನಡ ಚಟುವಟಿಕೆಗಳ ವರದಿ



**ಡಾ. ಉಷಾ ಎಂ. ಜಿ.**
ವಿಭಾಗಿಯ ಸಂಪಾದಕರು



**ಭಾ**ರತೀಯ ವೈದ್ಯಕೀಯ ಸಂಘ (ಭಾ.ವೈ.ಸಂ), ಕನ್ನಡ ವೈದ್ಯಬರಹಗಾರರ ಸಮಿತಿ ಮತ್ತು ಭಾರತೀಯ ವೈದ್ಯಕೀಯ ಸಂಘ ರಾಯಚೂರು ಇವರುಗಳ ಸಂಯುಕ್ತಾಶ್ರಯದಲ್ಲಿ ವೀರಪ್ಪ ನೂಲಿ ಮತ್ತು ಶ್ರೀಮತಿ ಕಮಲಮ್ಮ ನೂಲಿ ದಂಪತಿಗಳ ಸ್ಮರಣಾರ್ಥ ದತ್ತಿ ಉಪನ್ಯಾಸ ಮತ್ತು ಡಾ. ರವಿರಾಜೇಶ್ವರ ಅವರ ಒಲಿದಂತೆ ಹಾಡು ಕವನ ಸಂಕಲನ ಲೋಕಾರ್ಪಣೆ ಕಾರ್ಯಕ್ರಮವನ್ನು ೧೪-೧೨-೨೦೨೫ ರಂದು ರಾಯಚೂರಿನಲ್ಲಿ ಭಾರತೀಯ ವೈದ್ಯಕೀಯ ಸಂಘದ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಖ್ಯಾತ ಹೃದ್ರೋಗ ತಜ್ಞರಾದ ಡಾ. ಸುರೇಶ ಸಗರದ ಅವರು ಎಲ್ಲರನ್ನೂ ಸ್ವಾಗತಿಸಿ ಕನ್ನಡ ವೈದ್ಯಬರಹಗಾರರ ಸಮಿತಿಯಿಂದ ನಡೆಸಲಾಗುತ್ತಿರುವ ದತ್ತಿ ಉಪನ್ಯಾಸಗಳು, ಕನ್ನಡ ಸಮ್ಮೇಳನಗಳು ಮತ್ತು ಇತರೆ ಕಾರ್ಯಕ್ರಮಗಳ ಬಗ್ಗೆ ಪ್ರಾಸ್ತವಿಕ ನುಡಿಗಳನ್ನಾಡಿದರು. ಪರಿಸರ ಮತ್ತು ಆರೋಗ್ಯದ ಬಗ್ಗೆ ಬಳ್ಳಾರಿಯ ಡಾ. ಅರವಿಂದ ಪಟೇಲರು ಉಪನ್ಯಾಸ ನೀಡಿದರು. ನೆಲ, ಜಲ, ವಾಯು, ಶಬ್ದ, ಬೆಳಕು, ಇನ್ನಿತರ ಪರಿಸರಮಾಲಿನ್ಯಕ್ಕೆ ಇರುವ ಕಾರಣಗಳು, ಇದರಿಂದ ಆರೋಗ್ಯದ ಮೇಲೆ ಉಂಟಾಗುವ ಪರಿಣಾಮಗಳು, ತಡೆಗಟ್ಟುವಿಕೆ, ತ್ಯಾಜ್ಯಗಳ ಸರಿಯಾದ ವಿಲೇವಾರಿ ಮತ್ತು ನಿರ್ವಹಣೆ, ಅವುಗಳಲ್ಲಿ ಸಾರ್ವಜನಿಕರ ಪಾತ್ರ ಇತ್ಯಾದಿ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು. ಇದೇ ಕಾರ್ಯಕ್ರಮದಲ್ಲಿ ರಾಜೇಶ್ವರ ಅವರ "ಒಲಿದಂತೆ ಹಾಡು" ಕವನ ಸಂಕಲನವನ್ನು ಮುಧೋಳದ ಶಸ್ತ್ರಚಿಕಿತ್ಸಾ ತಜ್ಞರು ಮತ್ತು ಹಿರಿಯ ಸಾಹಿತಿಗಳಾದ ಡಾ. ಶಿವಾನಂದ ಕುಬಸದ ಇವರಿಂದ ಲೋಕಾರ್ಪಣೆಗೊಳಿಸಲಾಯಿತು. ಡಾ. ಕುಬಸದ ಅವರು ಕೃತಿ ಮತ್ತು ಲೇಖಕರ ಕುರಿತು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಕಾರ್ಯಕ್ರಮದ ಪ್ರಾರಂಭದಲ್ಲಿ ಪ್ರಾರ್ಥನೆ ಮತ್ತು ಧ್ವಜವಂದನೆಯನ್ನು ರಾಯಚೂರು ಭಾರತೀಯ ವೈದ್ಯಕೀಯ ಸಂಘದ ಕಾರ್ಯದರ್ಶಿ, ಡಾ. ಸುಶ್ರುತ್ ನೀಲಪಂಥ ಅವರು ನೆರವೇರಿಸಿದರು. ಭಾರತೀಯ ವೈದ್ಯಕೀಯ ಸಂಘ ರಾಯಚೂರು ಶಾಖೆಯ ಅಧ್ಯಕ್ಷರಾದ ಡಾ. ಶ್ರೀಶೈಲೇಶ ಅಮರಖೇಡ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರವಿರಾಜೇಶ್ವರ ಹಾಗೂ ಕನ್ನಡ ವೈದ್ಯಬರಹಗಾರರ ಸಮಿತಿ ಅಧ್ಯಕ್ಷರಾದ ಡಾ. ಇಂದಿರಾ ದೊಡ್ಡಬಳ್ಳಾಪುರ ಇವರು ಉಪಸ್ಥಿತರಿದ್ದು ತಮ್ಮ ತಮ್ಮ ವಿಚಾರಗಳನ್ನು ಹಂಚಿಕೊಂಡರು. ರಾಯಚೂರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಬಿ. ವಿಜಯರಾಜೇಂದ್ರ ಅವರು ವೈದ್ಯರು ನಡೆಸುತ್ತಿರುವ ಕನ್ನಡ ಸೇವೆ ಶ್ಲಾಘನೀಯ ಎಂದು ಪ್ರಶಂಸಿಸಿದರು. ರಾಜೇಶ್ವರಿ ಕುರ್ಳೆ ಅವರಿಂದ ಕೊಳಲುವಾದನ ವೈದ್ಯ ವಿದ್ಯಾರ್ಥಿಗಳಿಂದ ನಾಡಗೀತೆ ಇತ್ಯಾದಿಗಳನ್ನು ಒಳಗೊಂಡ ಕಾರ್ಯಕ್ರಮ

ಸಾರ್ವಜನಿಕರನ್ನು, ಕವಿಗಳನ್ನು, ಪರಿಸರ ಪ್ರೇಮಿಗಳನ್ನು ಆಕರ್ಷಿಸಿತ್ತು.

**ಪುಸ್ತಕ ಪ್ರೀತಿ**

ವೈದ್ಯರಲ್ಲಿ ಮತ್ತು ಸಾರ್ವಜನಿಕರಲ್ಲಿ ಪುಸ್ತಕ ಓದುವ ಅಭ್ಯಾಸವನ್ನು ಬೆಳೆಸುವುದಕ್ಕಾಗಿ, ಹೆಚ್ಚಿಸುವುದಕ್ಕಾಗಿ ಭಾ. ವೈ. ಸಂ. ಕನ್ನಡ ವೈದ್ಯಬರಹಗಾರರ ಸಮಿತಿಯಿಂದ ತಿಂಗಳಿಗೊಂದು ಪುಸ್ತಕ ಅವಲೋಕನ

ಕುವೆಂಪುರವರ "ಮಲೆಗಳಲ್ಲಿ ಮದುಮಗಳು" ಪುಸ್ತಕದ ಬಗ್ಗೆ ವಿಚಾರ – ವಿನಿಮಯ ಕಾರ್ಯಕ್ರಮ ದಿನಾಂಕ ೧೭–೧೨–೨೪ರಂದು ಝೂಮ್ ವೇದಿಕೆಯಲ್ಲಿ ನಡೆಯಿತು. ಐಎಂಎ ರಾಜ್ಯಾಧ್ಯಕ್ಷರಾದ ಡಾ. ವೀರಭದ್ರಯ್ಯ ಅವರು ಶುಭನುಡಿಗಳೊಂದಿಗೆ ಕಾರ್ಯಕ್ರಮ ಉದ್ಘಾಟಿಸಿದರು.

ಪುಸ್ತಕ ಪರಿಚಯವನ್ನು ಡಾ. ಪ್ರದೀಪ್ ಕುಮಾರ್ ಶೆಟ್ಟಿ ಮಾಡಿಕೊಟ್ಟರು. ಪುಸ್ತಕದಲ್ಲಿ ಬರುವ ಪರಿಸರದ ವರ್ಣನೆ – ಡಾ. ಕಿರಣ್ ಪೇಟಕರ್ ಮಾತನಾಡಿದರು. ನನಗೆ ಇಷ್ಟವಾದ ಪಾತ್ರದ ಕುರಿತು ಡಾ. ರಶ್ಮಿಕುಂದಾಪುರ್, ಸಾಮಾಜಿಕ ಮೌಲ್ಯಗಳ ಬಗ್ಗೆ ಡಾ. ವಿಜಯಾ ವೈ. ಬಿ. ಮಾತನಾಡಿದರು.

ಡಾ. ಇಂದಿರಾ ದೊಡ್ಡಬಳ್ಳಾಪುರ ಅಧ್ಯಕ್ಷೀಯ ನುಡಿಗಳನ್ನಾಡಿದರು. ಡಾ. ಕೆ. ಎಸ್. ಶುಭ್ರತಾ ಕಾರ್ಯಕ್ರಮ ನಿರ್ವಹಿಸಿದರು. ಡಾ. ಉಮಾ ಚಿಕ್ಕರೆಡ್ಡಿಯವರು ಐಎಂಎ ಪ್ರಾರ್ಥನೆ ನಡೆಸಿಕೊಟ್ಟರು. ಡಾ. ಉಷಾ. ಎಂ. ಜಿ. ಎಲ್ಲರನ್ನು ಸ್ವಾಗತಿಸಿದರು. ಸಮಿತಿಯ ಹಿರಿಯ ಸಾಹಿತಿಗಳು, ವೈದ್ಯಮಿತ್ರರು ಭಾಗವಹಿಸಿದ್ದರು.

**ಕನ್ನಡ ರಾಜ್ಯೋತ್ಸವದ ಕವಿಗೋಷ್ಠಿ:**

ಐ.ಎಂ.ಎ ಕನ್ನಡ ವೈದ್ಯಬರಹಗಾರರ ಸಮಿತಿಯ ವತಿಯಿಂದ ವೈದ್ಯಕವಿಗಳ ಕವಿಗೋಷ್ಠಿಯನ್ನು ನವೆಂಬರ್ ೩೦ನೇ ತಾರೀಖು ಝೂಮ್ ವೇದಿಕೆಯಲ್ಲಿ ನಡೆಸಲಾಯಿತು.

ಗೋಷ್ಠಿಯ ಅಧ್ಯಕ್ಷತೆಯನ್ನು ಡಾ. ಗೋವಿಂದ ಹೆಗಡೆಯವರು ವಹಿಸಿದ್ದರು, ಕನ್ನಡ ಕಾವ್ಯಸಾಹಿತ್ಯದಲ್ಲಿ, ಅಪಾರ ಕೃಷಿಮಾಡಿರುವ ಅವರ ಅಧ್ಯಯನದ ಅನುಭವದಿಂದ ಬಂದ ಮೌಲಿಕ ಮಾತುಗಳು ಕವಿಗಳಿಗೆಲ್ಲ ಉತ್ತೇಜನಕಾರಿಯಾದವು. ೨೯ ಕವಿಗಳು ತಮ್ಮ ಕವನಗಳನ್ನು ವಾಚಿಸಿದರು್ದ, ಅನುಭವಿ ಕವಿಗಳ ಜೊತೆ ಹೊಸಬರೂ ಪಾಲ್ಗೊಂಡಿದ್ದು ಉತ್ತಮ ಬೆಳವಣಿಗೆಗೆ ಸಾಕ್ಷಿಯಾಯಿತು.

ಐ.ಎಂ.ಎ ಕನ್ನಡ ವೈದ್ಯ ಬರಹಗಾರರ ಸಮಿತಿಯ ಅಧ್ಯಕ್ಷರಾದ ಡಾ. ಇಂದಿರಾ ದೊಡ್ಡಬಳ್ಳಾಪುರ ಸ್ವಾಗತಿಸಿದರು, ಡಾ. ಅಮೂಲ್ಯ ಯರಗುಪ್ಪಿ, ಐ. ಎಂ. ಎ. ಪ್ರಾರ್ಥನೆ ಹಾಗೂ ವಂದನಾರ್ಪಣೆಯನ್ನು ನೆರವೇರಿಸಿದರು. ಡಾ. ಉಮಾ ಚಿಕ್ಕರಡ್ಡಿ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

**ಜ.ಜ.ಮು. ವೈದ್ಯಕೀಯ ಮಹಾವಿದ್ಯಾಲಯ, ದಾವಣಗೆರೆಯಲ್ಲಿ ಕನ್ನಡದ ಕಲರವ:**

ದಾವಣಗೆರೆಯ ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯದಲ್ಲಿ ೨೮–೧೧–೨೦೨೪ರಂದು ಅನಾಟಮಿ ಸಭಾಂಗಣದಲ್ಲಿ ಕನ್ನಡ ರಾಜ್ಯೋತ್ಸವದ ಸಂಭ್ರಮಾಚರಣೆಯ ದಿನ. ಮುಧೋಳದ ಶಸ್ತ್ರಚಿಕಿತ್ಸಾ ತಜ್ಞರು ಮತ್ತು ಹಿರಿಯ ವೈದ್ಯಸಾಹಿತಿಗಳಾದ ಡಾ. ಶಿವಾನಂದ ಕುಬಸದ ಅವರು ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ವಿದ್ಯಾರ್ಥಿಗಳನ್ನು ಹುರಿದುಂಬಿಸಿ ಕನ್ನಡ ಬಳಕೆಯ, ಸಾಹಿತ್ಯಸೇವೆಯ ಔಚಿತ್ಯವನ್ನು ತಿಳಿಯಪಡಿಸಿದರು. ವಿದ್ಯಾಲಯದಲ್ಲಿ ಕನ್ನಡ ಚರ್ಚಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ರಸಪ್ರಶ್ನೆ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಪ್ರತ್ಯೇಕವಾಗಿ ಏರ್ಪಡಿಸಲಾಗಿದ್ದು ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾದ ಡಾ. ಸಂಪನ್ನ ಮುತಾಲಿಕ್ ತಮ್ಮ ವಿಚಾರಗಳನ್ನು ಹಂಚಿಕೊಂಡು ಕನ್ನಡ ಸೇವೆಗೆ



ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಡಾ. ಶುಕ್ಲಾ ಶೆಟ್ಟಿ ಅವರು ವಹಿಸಿದ್ದು ಎಲ್ಲರನ್ನೂ ಸ್ವಾಗತಿಸಿದರು. ಕನ್ನಡ ಬಳಗದ ಸದಸ್ಯರಾದ ಡಾ. ಅನುರೂಪ, ಡಾ. ಉಷಾ ಎಂ. ಜಿ., ಡಾ. ಸುದರ್ಶನ್ ಸಿ. ವೈ., ಡಾ. ಮೃತ್ಯುಂಜಯ, ಡಾ. ಅನುಪಮಾ ಇವರು ಕಾರ್ಯಕ್ರಮದ ಆಯೋಜನೆಯಲ್ಲಿ ಪಾಲ್ಗೊಂಡಿದ್ದರು. ಇತರೆ ಬೋಧಕ–ಬೋಧಕೇತರ ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿವೃಂದ ಭಾಗವಹಿಸಿದ್ದರು. ನಾಡಗೀತೆಯಿಂದ ಪ್ರಾರಂಭಗೊಂಡು ಕನ್ನಡ ಏಕೀಕರಣದ ಪ್ರಾತ್ಯಕ್ಷಿಕೆ, ಕನ್ನಡ ಸ್ವರಚಿತ ಕಾವ್ಯವಾಚನ, ಸಾಂಸ್ಕೃತಿಕ ಕಾರ್ಯಕ್ರಮಗಳ ರೋಮಾಂಚನ ಪ್ರದರ್ಶನವನ್ನೊಳಗೊಂಡಂತೆ ಕನ್ನಡದ ಕಂಪನ್ನು ಹರಡಿದ ಅಂದದ ಕಾರ್ಯಕ್ರಮ ಚೆನ್ನಾಗಿ ಸಂಪನ್ನಗೊಂಡಿತು.

**ಭಾರತೀಯ ವೈದ್ಯಕೀಯ ಸಂಘ ಮಹಿಳಾ ವಿಭಾಗ, ದಾವಣಗೆರೆ** ಶಾಖೆಯಿಂದ ಕನ್ನಡ ರಾಜ್ಯೋತ್ಸವ ಅಂಗವಾಗಿ ೨೬–೧೧–೨೦೨೪ ರಂದು ಭಾ. ವೈ.ಸಂ. ಸದಸ್ಯರ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಮೊದಲಿಗೆ ಮಕ್ಕಳಿಗೆ ಕನ್ನಡ ರಾಜ್ಯೋತ್ಸವ ಆಚರಣೆಯ ಉದ್ದೇಶ, ಕರ್ನಾಟಕ ಏಕೀಕರಣ ಇತಿಹಾಸದ ಬಗ್ಗೆ ತಿಳಿಸಿ, ಕನ್ನಡ ಭಾಷೆಯ ಬಳಕೆಗೆ ಪ್ರೇರೇಪಿಸಲಾಯಿತು. ೨೭–೧೧–೨೦೨೪ ರಂದು ಮಹಿಳಾ ವೈದ್ಯರಿಗೆ ಚರ್ಚಾ ಸ್ಪರ್ಧೆ ಮತ್ತು ಜಾನಪದಗೀತೆ ಗಾಯನ ಸ್ಪರ್ಧೆ ನಡೆಯಿತು. ವಿಜೇತರರಿಗೆ ಬಹುಮಾನ ವಿತರಿಸಲಾಯಿತು.



೧೪–೧೧–೨೦೨೪ ರಂದು ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ ಐಎಂಎ ಮಹಿಳಾ ವಿಭಾಗ ದಾವಣಗೆರೆ ವತಿಯಿಂದ ಮಿತ್ತಲಕಟ್ಟೆ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಿದ್ದು, ಅಂಧ ಮಕ್ಕಳ ಶಾಲೆಗೆ ಸಿಹಿತಿಂಡಿಗಳನ್ನು ವಿತರಿಸಲಾಯಿತು. ಈ ಸಂಧರ್ಭದಲ್ಲಿ ಡಾ. ರಜನಿ, ಡಾ. ಶ್ವೇತಾ, ಡಾ. ಸೀಮಾ ವಿಜೇತರರಿಗೆ ಬಹುಮಾನ ವಿತರಿಸಿದರು.

**ಎಸ್.ಎಸ್. ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಆ್ಯಂಡ್ ರಿಸರ್ಚ್ ಸೆಂಟರ್, ದಾವಣಗೆರೆಯಲ್ಲಿ ಕನ್ನಡ ಬಳಗ ವಿದ್ಯಾರ್ಥಿ ಸಂಘ ೨೦೨೪**

**೧. ಕನ್ನಡದ ಕೋಟ್ಯಾಧಿಪತಿ ಅರಿವಿನ ಹಂತದ ಹೋರಾಟ**

ಜುಲೈ ೧೨ರಂದು ಕನ್ನಡದ ಕೋಟ್ಯಾಧಿಪತಿ ಎಂಬ ಜನಪ್ರಿಯ ಟಿ.ವಿ. ಕಾರ್ಯಕ್ರಮದಿಂದ ಪ್ರೇರೇಪಿತಗೊಂಡು, ರಸಪ್ರಶ್ನೆಗಳ ಮೂಲಕ ಸಾಮಾನ್ಯ ಜ್ಞಾನ ಹಾಗೂ ಕನ್ನಡದ ಜ್ಞಾನವನ್ನು ಮನೋರಂಜನಾತ್ಮಕವಾಗಿ ಹಾಗೂ ಶೈಕ್ಷಣಿಕವಾಗಿ ತಿಳಿಸಿ ವೈದ್ಯಕೀಯ ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷೆಯ ಪ್ರಭಾವವನ್ನು ಹೆಚ್ಚಿಸುವುದು, ಬೌದ್ಧಿಕ ಚಟುವಟಿಕೆಗಳ ಮೂಲಕ ಕನ್ನಡ ಭಾಷೆಯ ಮಹತ್ವವನ್ನು ಸಾರುವ ಉದ್ದೇಶದೊಂದಿಗೆ ಆಯೋಜಿಸಲಾಗಿತ್ತು.

**೨. ಕನ್ನಡ ರಾಜ್ಯೋತ್ಸವ ೨೦೨೪**

೨೦೨೪ರ ನವೆಂಬರ್ ೨೧ರಂದು ಕನ್ನಡ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು ಕನ್ನಡದ ಕಂಪನ್ನು ಇನ್ನು ಹೆಚ್ಚಿಸಲು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಮುಖ್ಯ ಅತಿಥಿಗಳಾಗಿ ಕನ್ನಡ ಸಾಹಿತ್ಯದ ರುಚಿಯನ್ನು ಸವಿದಿರುವ ಹಾಗೂ "ಭಾರದ್ವಾಜ" ಮತ್ತು "ತಥಾಗಥ" "ಎಂಬ ಪುಸ್ತಕಾಮೃತವನ್ನು ಕನ್ನಡ ಸಾಹಿತ್ಯಕ್ಕೆ ದಾರೆಯೆರಿದಿರುವ ಶ್ರೀ ಸಂಪನ್ನ ಮುತಾಲಿಕ್‌ರವರನ್ನು ಆಹ್ವಾನಿಸಲಾಗಿದ್ದು, ಕಾರ್ಯಕ್ರಮದ ಆರಂಭವನ್ನು ಪ್ರಾರ್ಥನಾ ಗೀತೆಯೊಂದಿಗೆ ನಂತರ ಸ್ವಾಗತ ಭಾಷಣ ನಡೆಯಿತು. ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎಲ್ಲ ಗಣ್ಯರು ಹಾಗೂ ವಿದ್ಯಾರ್ಥಿಗಳು ನಾಡಗೀತೆಯನ್ನು ಹಾಡುವ ಮೂಲಕ ಗೌರವ ಸಲ್ಲಿಸಿದರು. ಮುಖ್ಯ ಅತಿಥಿಗಳು ಅವರ ವಾಕ್‌ಚಾತುರ್ಯತೆಯಿಂದ ಕನ್ನಡ ಭಾಷೆ, ಅದರ ಸಂಸ್ಕೃತಿ ಹಾಗೂ ಅದರ ಮಹತ್ವ ಮತ್ತು ಹೇಗೆ ಆಧುನಿಕ ಜನಾಂಗದವರು ಆಂಗ್ಲದ ದಾಸರಾಗಿ



ಹೆತ್ತ ತಾಯಿಯನ್ನೇ ಮರೆಯುವ ಹಾಗೆ ಮಾತೃ ಭಾಷೆಯನ್ನು ಮರೆಯುತ್ತಿವರು ಎಂದು ಉಲ್ಲೇಖಿಸಿದರು., ಕನ್ನಡದ ಸವಿ ಮಾತನಾಡಿದಾಗ ಮಾತ್ರ ಬಾಯಿ ಸುಚಿ ಎಂದು ಜನಪದಗೀತೆಯ ಮೂಲಕ ಅರಿವನ್ನು ಮೂಡಿಸಿದರು. ಇದನ್ನು ಕೇಳಿದ ವಿದ್ಯಾರ್ಥಿಗಳು ಕನ್ನಡ ಭಾಷೆಯ ಮಹತ್ವ ಮತ್ತು ದಿನ ನಿತ್ಯ ಬಳಿಸಲು ಪ್ರೇರೇಪಿತರಾದರು. ಈ ವರ್ಷವಿಶೇಷವಾಗಿ ಅನ್ಯಭಾಷಿಗ ವಿದ್ಯಾರ್ಥಿಗಳಲ್ಲೂ ಕನ್ನಡ ಭಾಷೆಯ ಮೇಲೆ ಒಲವು ಮೂಡಿಸಲು, ಅವರನ್ನೂ ಸಹ ಕನ್ನಡ ಬಳಗದ ಆಯೋಜನಾ ಸಮಿತಿಗೆ ನೇಮಕ ಮಾಡಿಕೊಳ್ಳಲಾಗಿತ್ತು. ಅವರು ಬಳಗದ ಎಲ್ಲಾ ಕಾರ್ಯಕ್ರಮಗಳಲ್ಲಿ ಅತ್ಯುತ್ಸಾಹದಿಂದ ಪಾಲ್ಗೊಂಡಿದ್ದು ಸಮಿತಿಯ ಉದ್ದೇಶವನ್ನು ಸಾರ್ಥಕಗೊಳಿಸಿದಂತಿತ್ತು.

**ಭಾರತೀಯ ವೈದ್ಯಕೀಯ ಸಂಘ ಶಿವಮೊಗ್ಗ**ದ ವತಿಯಿಂದ ಕರ್ನಾಟಕ ರಾಜ್ಯೋತ್ಸವದಅಂಗವಾಗಿ ದಿನಾಂಕ ೨೩-೧೧-೨೦೨೪ರ ಭಾನುವಾರದಂದು ವಿಶೇಷವಾದ ಕವಿಗೋಷ್ಠಿ ಏರ್ಪಡಿಸಲಾಗಿತ್ತು. ಕವಿಗೋಷ್ಠಿಯ ಅಧ್ಯಕ್ಷರಾಗಿ ಪ್ರಸಿದ್ಧ ಕವಯಿತ್ರಿ ಮತ್ತು ಸಾಹಿತಿ ಶ್ರೀಮತಿ ಸವಿತಾ ನಾಗಭೂಷಣ ಅವರು ಆಗಮಿಸಿದ್ದರು.

ಶ್ರೀಮತಿ ಸವಿತಾ ನಾಗಭೂಷಣ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಕಾವ್ಯರಚನೆಯ ಬಗ್ಗೆ, ಕನ್ನಡ ಭಾಷೆಯ ಉಳಿವಿನ ಬಗ್ಗೆ ಮಾತನಾಡಿದರು. ವೈದ್ಯರಾದವರು ಕವನರಚನೆಯಲ್ಲಿ ತೊಡಗಿಸಿಕೊಂಡಿರುವಿರೆಂದರೆ ಅದೊಂದು ವಿಶೇಷವೇ ಸರಿ ಎಂದು ಅಭಿಪ್ರಾಯ ಪಟ್ಟರು. ಮುಂದೊಂದು ದಿನ ನಮ್ಮ ಮಕ್ಕಳು ಕನ್ನಡ ಪುಸ್ತಕಗಳನ್ನು ರದ್ದಿಗೆ ಕೊಡದಂತೆ ಆಗದಿರಲಿ. ಕನ್ನಡ ಭಾಷೆಯನ್ನು ಉಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯಎಂದು ಹೇಳಿದರು. ಸೂರ್ಯನ ಬೆಳಕಿನಲ್ಲಿ ಕಾಣುವುದು ಗದ್ಯವಾದರೆ, ಮಿಂಚಿನ ಬೆಳಕಿನಲ್ಲಿ ಕಾಣುವುದು ಪದ್ಯ. ಕವಿತೆಗಳಿಗೆ ಪ್ರಾಣ ಪ್ರತಿಷ್ಠಾಪನೆ ಮಾಡುವವನು ಓದುಗ. ಓದುಗನ ಹೃದಯಕ್ಕೆ ಕವಿತೆ ಸ್ಪಂದಿಸಿತೆಂದರೆ ಅದಕ್ಕೆ ಜೀವಬಂದಂತೆ.




ಡಾ. ವಿನಯ ಶ್ರೀನಿವಾಸ ಅವರು ಕಾರ್ಯಕ್ರಮ ಅಚ್ಚುಕಟ್ಟಾಗಿ ನಿರ್ವಹಿಸಿದರು. ಐಎಂಎ ಶಿವಮೊಗ್ಗದ ಅಧ್ಯಕ್ಷರಾದ ಡಾ. ಕೆ.ಆರ್. ರವೀಶ್, ಕಾರ್ಯದರ್ಶಿ ಡಾ. ಕೆ.ಎಸ್. ಶುಭ್ರತಾ, ಮಹಿಳಾ ಘಟಕದ ಅಧ್ಯಕ್ಷ ಡಾ. ಕೌಸ್ತುಭಾ ಅರುಣ್ ಮತ್ತು ಇತರ ವೈದ್ಯರು ಉಪಸ್ಥಿತರಿದ್ದರು.

**ಐ ಎಂ ಎ ಶಿವಮೊಗ್ಗದಿಂದ ಕನ್ನಡಾಂಬೆಯ ಗೀತಾರಾಧನೆ**

ಭಾರತೀಯ ವೈದ್ಯಕೀಯ ಸಂಘ ಶಿವಮೊಗ್ಗ ಘಟಕದ "ಮೆಲೋಡಿಮೆಡಿಕ್ಸ್-ಐಎಂಎ ಶಿವಮೊಗ್ಗ ಮ್ಯೂಸಿಕ್ ಕ್ಲಬ್" ವತಿಯಿಂದ ನಗರದ ಸುವರ್ಣ ಸಂಸ್ಕೃತಿ ಭವನದಲ್ಲಿ ನವೆಂಬರ್ ೩೦ರಂದು ವೈದ್ಯ ಸುನಿನಾದ-೧ 'ಕನ್ನಡಾಂಬೆಯ ಗೀತಾರಾಧನೆ' ವಿಶೇಷ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ೩೫ ಸುಮಧುರ ಭಾವಪೂರ್ಣ ಕನ್ನಡ ಗೀತೆಗಳ ಅಭೂತಪೂರ್ವ ಪ್ರಸ್ತುತಿ ಇದಾಗಿತ್ತು. ಹಿನ್ನೆಲೆ ಸಂಗೀತ ಸಂಯೋಜಕ ನವನೀತ್ ಹಾಗೂ ತಂಡದವರು ಸಂಗೀತದಲ್ಲಿ ಸಹಕಾರ ನೀಡಿದರು. ಕೀಬೋರ್ಡ್‌ನಲ್ಲಿ ನವನೀತಾ ಹಾಗೂ

ಇಂಪು ತಂಡದ ಮಕ್ಕಳು, ತಬಲದಲ್ಲಿ ರಾಘವೇಂದ್ರ ಪ್ರಭು, ರಿದಂಪ್ಯಾಡ್‌ನಲ್ಲಿ ರಾಘವೇಂದ್ರ ರಂಗದೊಳ್ ಮತ್ತು ಬೇಸ್‌ಗಿಟಾರ್‌ನಲ್ಲಿ ಸುನಿಲ್ ಸಹಕಾರ ನೀಡಿದರು.

**ಐಎಂಎ ನಲ್ಲಿ ಕರ್ನಾಟಕ ರಾಜ್ಯೋತ್ಸವದ ಸಂಭ್ರಮ:**

ಕನ್ನಡ ನಮಗೆಲ್ಲಾ ಬದುಕನ್ನು ಕಟ್ಟಿಕೊಟ್ಟಿದೆ – ಡಾ. ವೈ, ಸಿ, ಯೋಗಾನಂದ ರೆಡ್ಡಿ

ದಿನಾಂಕ ೨–೧೧–೨೫ರಂದು ಭಾರತೀಯ ವೈದ್ಯಕೀಯ ಸಂಘ ಶಿವಮೊಗ್ಗ ಶಾಖೆಯಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಡಾ. ಯೋಗಾನಂದ ರೆಡ್ಡಿ ಅವರು ಕನ್ನಡ ಭಾಷೆ ತನ್ನಂತಹ ವೈದ್ಯರನ್ನು ಒಳಗೊಂಡು ಎಲ್ಲ ಜನರಿಗೂ ಬದುಕನ್ನು ಕಟ್ಟಿ ಕೊಟ್ಟಿದೆ. ವೈದ್ಯರಿಗಂತು ವೃತ್ತಿಪರ ಶಿಕ್ಷಣವನ್ನು ಆಂಗ್ಲ ಭಾಷೆಯಲ್ಲಿ ಪಡೆದಿದ್ದರೂ ರೋಗಿಗಳೊಂದಿಗೆ ಜನಸಾಮಾನ್ಯರೊಂದಿಗೆ ಸಂವಹನಕ್ಕೆ ಕನ್ನಡವೇ ದಾರಿ ದೀಪವಾಗಿದೆ ಎಂದು ಅಭಿಪ್ರಾಯಪಟ್ಟರು. ಡಾ. ಹರೀಶ ದೇಲಂತಬೆಟ್ಟು ಅವರು ಭಾರತೀಯ ವೈದ್ಯಕೀಯ ಸಂಘ ಶಿವಮೊಗ್ಗ ನಡೆಸಿರುವಂತಹ ಚಟುವಟಿಕೆಗಳನ್ನು ಶ್ಲಾಘಿಸಿ ಮುಂಬರುವ ತಂಡಕ್ಕೆ ಶುಭಹಾರೈಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಕೆ. ಆರ್. ರವೀಶ್ ಅವರು ವಹಿಸಿದ್ದರು.

ಡಾ. ಕೆ. ಎನ್. ಗುರುದತ್ತ ಅವರು ವಿಶೇಷವಾದ ಕನ್ನಡ ರಸಪ್ರಶ್ನೆ ಕಾರ್ಯಕ್ರಮ ನಡೆಸಿಕೊಟ್ಟರು. ಐಎಂಎ ಮ್ಯೂಸಿಕ್‌ಕ್ಲಬ್ ವತಿಯಿಂದ ಕನ್ನಡ ಗೀತೆಗಳ ಗಾಯನ ನಡೆಸಿಕೊಟ್ಟರು.

ಬಳ್ಳಾರಿ ವೈದ್ಯಕೀಯ ವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರ, ಬಳ್ಳಾರಿಯಲ್ಲಿ ನವೆಂಬರ್ ಒಂದರಂದು ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.

ಬೆಳಿಗ್ಗೆ ನಾಡದೇವಿ ಭುವನೇಶ್ವರಿಯ ಭವ್ಯ ಮೆರವಣಿಗೆ. ವಿದ್ಯಾರ್ಥಿಗಳ ಕನ್ನಡ ಅಭಿಮಾನಕ್ಕೆ ಡೊಳ್ಳುಕುಣಿತದ ಸಾಂಗತ್ಯ. ಆಸ್ಪತ್ರೆಯಿಂದ ಹೊರಟ ಮೆರವಣಿಗೆ ಆಡಳಿತ ಕಚೇರಿಯವರೆಗೂ ವಿಜೃಂಭಣೆಯಿಂದ ನಡೆದು ಬಂತು. ನಂತರ ವಿದ್ಯಾರ್ಥಿಗಳು ನಾಡದೇವಿಗೆ ಬೈಕ್ ರ್‍ಯಾಲಿಯ ಮುಖಾಂತರ ಗೌರವ ಸಲ್ಲಿಸಿದರು.

ಡಾ. ಶಿವಾನಂದ ಕುಬಸದರವರು ಕನ್ನಡದ ಹಿರಿಮೆಯನ್ನು ಅತ್ಯಂತ ಅರ್ಥಪೂರ್ಣವಾಗಿ ವಿವರಿಸಿದರು. ತಾವು ಕಲಿತ ವಿದ್ಯಾಸಂಸ್ಥೆಗೆ ಆಗಮಿಸಿದ್ದನ್ನು ಸಂಭ್ರಮಿಸುತ್ತಲೇ, ರಾಜ್ಯೋತ್ಸವದ ಆಚರಣೆಯ ಮಹತ್ವವನ್ನು ತಿಳಿಸಿದರು.

ಸಂಸ್ಥೆಯ ನಿರ್ದೇಶಕರಾದ ಡಾ ಟಿ. ಗಂಗಾಧರ ಗೌಡರು, ಪ್ರಾಚಾರ್ಯರಾದ ಡಾ. ಎನ್. ಮಂಜುನಾಥರವರು ನಾಡು ನುಡಿಯ ಹಿರಿಮೆಯನ್ನು ಕೊಂಡಾಡಿದರು. ಕನ್ನಡ ಸಂಘದ ಪದಾಧಿಕಾರಿಗಳಾದ ಡಾ. ಪರಸಪ್ಪ ಬಂದ್ರಕಳ್ಳಿ, ಡಾ. ದಿವ್ಯಾ ಕೆ. ಎನ್, ಡಾ. ಸುಮಾ ಗುಡಿ ಕಾರ್ಯಕ್ರಮದ ಆಯೋಜನೆಯಲ್ಲಿ ಸಹಕರಿಸಿದರು. ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿದರು.

**ಭಾರತೀಯ ವೈದ್ಯಕೀಯ ಸಂಘ ತಾಲೂಕ ಘಟಕ ಗಂಗಾವತಿ** ಹಾಗೂ ಮೈತ್ರಿ ಮಹಿಳಾ ವೈದ್ಯರ ಸಂಘ ಗಂಗಾವತಿ ಘಟಕದಿಂದ ಪರಿಸರಮಾಲಿನ್ಯ ನಿಯಂತ್ರಣ ದಿನ ಡಿಸೆಂಬರ ೨ ಮತ್ತು ಮಣ್ಣು ಸಂರಕ್ಷಣಾ ದಿನ ಡಿಸೆಂಬರ ೫ರ ಅಂಗವಾಗಿ ೧೮–೧೨–೨೦೨೫ ರಂದು ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಬಾಲಕಿಯರ ಸರಕಾರಿ ಪ್ರೌಢಶಾಲೆ ಬಸ ಪಟ್ಟಣದಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಹಿರಿಯ ವೈದ್ಯರಾದ ಡಾ. ಸುಲೋಚನಾ ಚಿನಿವಾಲರ ಹಾಗೂ ಮೈತ್ರಿ ಘಟಕದ ಅಧ್ಯಕ್ಷರಾದ ಡಾ. ಅನಿತಾ ಹಾಗೂ ಡಾ. ನಾಗರಾಜ್ ಮತ್ತು ಇನ್ನಿತರ ಪದಾಧಿಕಾರಿಗಳು ಭಾಗವಹಿಸಿದ್ದರು. ಡಾ. ಸುಲೋಚನಾ ಚಿನಿವಾಲರ ಅತಿಬುದ್ಧಿವಂತನಾದ ಮಾನವ ಸತತ ಪರಿಸರದ ಮೇಲೆ ಒತ್ತಡ ಹೇರುತ್ತಲೇ ಇದ್ದಾನೆ. 'ಪರಿಸರ ಉಳಿದರೆ ನಮ್ಮ ಉಳಿವು'. ಇಂದಿನ ದಿನಮಾನಗಳಲ್ಲಿ ಮಾನವರು ಎಚ್ಚೆತ್ತುಕೊಂಡು ಪರಿಸರ ರಕ್ಷಣೆಗೆ ಮುಂದಾಗಬೇಕಿದೆ. ಅದಕ್ಕಿರುವ ಮಾರ್ಗಗಳು ಏನು ಎಂದು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು. ರೆಡ್ಯೂಸ್–ರೀಸೈಕಲ್–ರಿಮೇಕ್ ಎಂಬ ನುಡಿನಡೆ ನಮ್ಮೆಲ್ಲರ ದಿನನಿತ್ಯದ ದಿನಚರಿಯಾದಾಗ ಆರೋಗ್ಯಯುತ ಬದುಕು ನಡೆಸಲು ಸಾಧ್ಯ ಎಂದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ

ಬಹುಮಾನವನ್ನು ವಿತರಿಸುವುದರ ಜೊತೆಗೆ ಸಸಿಗಳನ್ನು ಕಾಣಿಕೆಯಾಗಿ ನೀಡಿದರು.




**ಅರಿವು ಜೀವ ಉಳಿಸುತ್ತದೆ – ಆತ್ಮವಿಶ್ವಾಸ ಜೀವನ ಗೆಲ್ಲಿಸುತ್ತದೆ**

ಬಳ್ಳಾರಿಯ ಮಣ್ಣಿನಲ್ಲಿ, ಮಕ್ಕಳ ಕನಸುಗಳ ಮಧ್ಯೆ, ಸಿರುಗುಪ್ಪದ ಸೃಜನಾ ಫೌಂಡೇಶನ್ ಒಂದು ದಿನದ ಅರಿವಿನ ಕಾರ್ಯಕ್ರಮ ದಿನಾಂಕ ೨೦–೧೨–೨೫ ರಂದು ನಡೆಸಿಕೊಟ್ಟಿತು. ಜ್ಞಾನ ಕೇವಲ ಪಠ್ಯಪುಸ್ತಕಗಳಿಗೆ ಸೀಮಿತವಲ್ಲ, ಜೀವ ಉಳಿಸುವ ಕೈಗಳಲ್ಲೂ, ಧೈರ್ಯತುಂಬುವ ಮಾತುಗಳಲ್ಲೂ ಅದು ಅಡಗಿದೆ ಎಂಬುದನ್ನು ಈ ಎರಡು ಕಾರ್ಯಕ್ರಮಗಳು ಮನಗಾಣಿಸಿದವು.

ಸರ್ಕಾರಿ ಶ್ರೀಮತಿ ಸರಳಾದೇವಿ ಕಾಲೇಜಿನ ಪದವಿ ವಿದ್ಯಾರ್ಥಿಗಳಿಗಾಗಿ ನಡೆದ ಬೆಳಗಿನ ಕಾರ್ಯಕ್ರಮದಲ್ಲಿ, ಪ್ರಥಮ ಚಿಕಿತ್ಸೆ ಎಂಬುದು ವೈದ್ಯರಷ್ಟೇ ತಿಳಿದಿರಬೇಕಾದ ವಿಷಯವಲ್ಲ, ಸಾಮಾನ್ಯ ನಾಗರಿಕನ ಕೈಯಲ್ಲೂ ಜೀವ ಉಳಿಸುವ ಶಕ್ತಿ ಅಡಗಿದೆ ಎಂಬ ಸಂದೇಶವನ್ನು ಹೃದಯಕ್ಕೆ ತಟ್ಟುವಂತೆ ನೀಡಲಾಯಿತು. ರಕ್ತಸ್ರಾವ, ಎಲುಬು ಮುರಿತ, ತಲೆಗಾಯ, ಸುಟ್ಟಗಾಯಗಳು, ಹಾವು ಮತ್ತು ನಾಯಿಯ ಕಡಿತದಂತಹ ತುರ್ತುಸಂದರ್ಭಗಳಲ್ಲಿ, ಏನು ಮಾಡಬೇಕು? ಏನು ಮಾಡಬಾರದು? ಎಂಬ ತಿಳುವಳಿಕೆ, ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿತು.

ಮಧ್ಯಾಹ್ನ ಮೋಕಾ ಗ್ರಾಮದ ಸರಕಾರಿ ಕರ್ನಾಟಕ ಪಬ್ಲಿಕ್ ಶಾಲೆಯ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗಾಗಿ ನಡೆದ ಎರಡನೇ ಕಾರ್ಯಕ್ರಮವು ಕೇವಲ ಪರೀಕ್ಷೆಗಳ ಕುರಿತು ಅಲ್ಲದೆ, ಬದುಕಿನ ಪಾಠಗಳ ಕುರಿತು ಇತ್ತು. ಓದಿನ ಒತ್ತಡ, ಸ್ಮರಣ ಶಕ್ತಿಯಚಿಂತೆ, ವಿಫಲತೆಯ ಭಯ ಇವೆಲ್ಲವನ್ನೂ ಧೈರ್ಯದಿಂದ ಎದುರಿಸುವ ಶಕ್ತಿಯನ್ನು ನೀಡುವ ಮಾತುಗಳು, ಮಕ್ಕಳ ಕಣ್ಣುಗಳಲ್ಲಿ ಹೊಸ ಕನಸುಗಳನ್ನು ಹೊತ್ತಿಸಿದವು. ವಿಫಲತೆ ಅಂತ್ಯವಲ್ಲ, ಅದು ಹೊಸ ಆರಂಭ ಎಂಬ ಸಂದೇಶ ಮಕ್ಕಳ ಮನಸ್ಸಿನಲ್ಲಿ ಮುದ್ರಿತವಾಯಿತು.

ವಿಜ್ಞಾನ ಶಿಕ್ಷಕರಾದ ಶ್ರೀ ಎಸ್.ಎಂ. ಹಿರೇಮಠ ಮತ್ತು ಶ್ರೀ ವೆಂಕಟೇಶ್ ಯಾದವ್ ಅವರು ಕಂಜೀರಾ ತಾಳಕ್ಕೆ ಹಾಡಿದ ಆರೋಗ್ಯ ಜಾಗೃತಿ ಗೀತೆಗಳು, ಅರಿವಿಗೆ ಸಂಗೀತದ ಸ್ಪರ್ಶ ನೀಡಿದವು. ಅದಕ್ಕೆ ಜೊತೆಯಾಗಿ ಶ್ರೀ ನರಸಿಂಹ ಮೂರ್ತಿ ಅವರ ಹಾಸ್ಯಮಯ ಮಾತುಗಳು, ಆರೋಗ್ಯ ಮತ್ತು ಮೊಬೈಲ್ ವ್ಯಸನದ ಕುರಿತು ನಗುವಿನ ನಡುವೆಯೇ ಚಿಂತನೆಗೆ ದಾರಿ ಮಾಡಿಕೊಟ್ಟವು.

ಜೀವ ಉಳಿಸುವ ಅರಿವು, ಬದುಕನ್ನು ಎದುರಿಸುವ ಧೈರ್ಯ, ಮತ್ತು ಭವಿಷ್ಯವನ್ನು ನಂಬುವ ಮನಸ್ಸು ಇವು ಸೃಜನ ಫೌಂಡೇಶನ್ ಮಕ್ಕಳಿಗೆ ಇಂದು ನೀಡಿದ ಕೊಡುಗೆ.

**೧೦. ಭಾ. ವೈ. ಸಂ. ದೊಡ್ಡಬಳ್ಳಾಪುರ ಶಾಖೆಯಿಂದ ನಡೆದ ಆರೋಗ್ಯದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳು:**

ಕನ್ನಡ ವೈದ್ಯಬರಹಗಾರರ ಸಮಿತಿಯ ಅಧ್ಯಕ್ಷರಾದ ಡಾ. ಇಂದಿರಾ ದೊಡ್ಡಬಳ್ಳಾಪುರ ಅವರು

- ೧೧–೧೨–೨೦೨೫ರಂದು ಮಹಿಳೆಯರನ್ನುದ್ದೇಶಿಸಿ ಮಧುಮೇಹವು ಜೀವನದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂದು ವಿವರಿಸಿದರು.
- ಧರ್ಮಸ್ಥಳ ಸಂಘದ ಸ್ವ–ಸಹಾಯ ಗುಂಪಿನ ಸಹಯೋಗದೊಂದಿಗೆ ನಡೆದ ಕಾರ್ಯಕ್ರಮದಲ್ಲಿ ಮಹಿಳೆಯರ ಆರೋಗ್ಯ ಮತ್ತು ಎಚ್‌ಪಿವಿ



ಇಮ್ಯುನೈಸೇಶನ್ ಮತ್ತು ಪ್ಯಾಪ್ ಸ್ಮಿಯರ್‌ನ ಅಗತ್ಯತೆಯ ಕುರಿತು ತಿಳಿ ಹೇಳಿದರು.

- ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಕ್ಕಳಿಗೆ ಒತ್ತಡ ನಿರ್ವಹಣೆ ಬಗ್ಗೆ ಮಾರ್ಗದರ್ಶನ ಮಾಡಿದರು.
- ಅರಳು ಮಲ್ಲಿಗೆ ಸರ್ಕಾರಿ ಪ್ರೌಢಶಾಲೆಯಲ್ಲಿ ಮುಟ್ಟಿನ ಶುಚಿತ್ವ ಮತ್ತು ಹಗುರ ಹತ್ತಿಯ ಪಾಡ್ ಬಳಕೆಯ ಬಗ್ಗೆ ವಿಚಾರ ವಿನಿಮಯ ನಡೆಸಿ, ಪರಿಸರ ಸ್ನೇಹಿ ಪ್ಯಾಡ್‌ಗಳನ್ನು ವಿತರಿಸಿದರು.

**ಡಾ. ಎಚ್. ಎಸ್. ಮೋಹನ್, ಇವರ ವಿಜಯ ಸೇವಾ ಟ್ರಸ್ಟ್** – ಯಕ್ಷಶ್ರೀ ಸಾಗರ ನಾಟ್ಯತರಂಗ ಟ್ರಸ್ಟ್ ವತಿಯಿಂದ ರಾಷ್ಟ್ರೀಯ ಸಂಸ್ಕೃತಿ ಸಪ್ತಾಹದಲ್ಲಿ ೦೧-೧೨-೨೦೨೫ರಂದು ನೃತ್ಯ ಭಾಸ್ಕರ, ಸಾಗರದಲ್ಲಿ ಶಶಿಪ್ರಭಾಪರಿಣಯ ಯಕ್ಷಗಾನ ಪ್ರದರ್ಶನ ನೀಡಲಾಯಿತು. ೧೨-೧೨-೨೦೨೫ರಂದು ವಿಜಯ ಸೇವಾ ಟ್ರಸ್ಟ್ – ಯಕ್ಷಶ್ರೀ ಸಾಗರ ಮತ್ತು ತತ್ವರಾ ಬೆಂಗಳೂರು ಸಂಯುಕ್ತಾಶ್ರಯದಲ್ಲಿ ಭಸ್ಮಾಸುರಮೋಹಿನಿ ಯಕ್ಷಗಾನ ಮತ್ತು ಭರತನಾಟ್ಯ ಸಮನ್ವಯಿತ ನೃತ್ಯರೂಪಕದ ಪ್ರದರ್ಶನ ನೀಡಲಾಯಿತು. ಭಾಗವಹಿಸಿದ ಕಲಾವಿದರಿಗೆ ಕಣ್ಣು-೧೦೬ ಪ್ರಶ್ನೆಗಳು, ೧೫ನೇ ಆವೃತ್ತಿ ಪುಸ್ತಕ ಮತ್ತು ಕಣ್ಣಿನಲ್ಲಿ ಕಂಡ ಮೃತ್ಯುಬಿಂಬ ಮತ್ತು ಇತರೆ ವೈದ್ಯಕೀಯ ಲೇಖನಗಳು ಪುಸ್ತಕದ ಪ್ರತಿಗಳನ್ನು ನೀಡಿ ಗೌರವಿಸಲಾಯಿತು.



೧-೧೨-೨೦೨೫ರಂದು ಭದ್ರಾವತಿಯಲ್ಲಿ ವಚನ ಮಂಟಪದ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಡಾ. ಅವಿನಾಶ್ ಕವಿಯವರು ವಚನಗಳಲ್ಲಿ ಆರೋಗ್ಯದ ಪರಿಕಲ್ಪನೆ ಬಗ್ಗೆ ದತ್ತಿ ಉಪನ್ಯಾಸ ನೀಡಿದರು.

ಭಾರತೀಯ ವೈದ್ಯಕೀಯ ಸಂಘ ಮಂಡ್ಯ ಶಾಖೆಯ ಐಎಂಎ ಭವನದಲ್ಲಿ ೩೦-೧೧-೨೦೨೫ ರಂದು ಟಿ. ಎನ್. ಮರಿಗೌಡರ ಅಧ್ಯಕ್ಷತೆಯಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ ನಡೆಯಿತು. ಭಾವೈಕಸಂ ಕರ್ನಾಟಕ ರಾಜ್ಯ ಶಾಖೆಯ ಅಧ್ಯಕ್ಷರಾದ ಡಾ. ಟಿ ಎ ವೀರಭದ್ರಯ್ಯ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಭಾವೈಸಂನ ಸಂಘಟನೆಯನ್ನು ಬಲಪಡಿಸುವಂತೆಯೂ, ವೈದ್ಯಸಂಪದವನ್ನು ಪ್ರೋತ್ಸಾಹಿಸುವಂತೆಯೂ ಕರೆ ನೀಡಿದರು ಕನ್ನಡ ವೈದ್ಯ ಬರಹಗಾರರ ಸಮಿತಿಯ ವೈದ್ಯಸಂಪದ ಉಪಸಂಪಾದಕರಾದ ವೀಣಾ ಎನ್ ಸುಳ್ಯ ಅವರು ಸನ್ಮಾನ ಸ್ವೀಕರಿಸಿ, ಕನ್ನಡದಲ್ಲಿ ವೈದ್ಯ ಸಾಹಿತ್ಯದ ರಚನೆಯ ಅವಶ್ಯಕತೆಯ ಬಗ್ಗೆ ತಿಳಿಸಿದ್ದೇ ಅಲ್ಲದೇ ವೈದ್ಯರು ಸಂಪದದ ಚಂದದಾರರಾಗಿ ಪ್ರೋತ್ಸಾಹಿಸಬೇಕಾಗಿ ಕೇಳಿಕೊಂಡರು.





ರಾಜೇಂದ್ರ ಸಲಗರೆ,
ಚಿಕ್ಕೋಡಿ
ಮಕ್ಕಳ ತಜ್ಞರು, ಚಿಕ್ಕೋಡಿ

# ಅರಣ್ಯದ ಮಡಿಲಲ್ಲಿ ಅಕ್ಷರ ಜಾತ್ರೆ: 'ಸುಮನ ಸಂಗಮ'ದ ಸಮ್ಮೋಹನ

**ಅರಣ್ಯದ ಮಡಿಲಲ್ಲಿ ಅಕ್ಷರ ಜಾತ್ರೆ: 'ಸುಮನ ಸಂಗಮ'ದ ಸಮ್ಮೋಹನ**

"ಒಂದು ಬೀಜ ಮರವಾಗುತ್ತದೆ, ಮರ ಮತ್ತೆ ಬೀಜಕ್ಕೆ ಜಾಗ ಕೊಡುತ್ತದೆ. ಬದುಕು ಅಂದ್ರೆ ಇದೇ ಕಣ್ರೀ? ಕೊಡೋದು ತಗೋಳೋದು." ಧಾರವಾಡದ ಡಾ. ಸಂಜೀವ ಕುಲಕರ್ಣಿಯವರ 'ಸುಮನ ಸಂಗಮ'ದ ಗಡಿಗೆ ಕಾಲಿಟ್ಟಾಗಲೇ ನಮ್ಮೆಲ್ಲರ ಮನಸ್ಸಿಗೆ ಯಾವುದೋ ಕಾಲಕ್ಕೆ ಮರೆತು ಹೋದ ಹಳ್ಳಿಯ ಮರಗಟ್ಟಿನ ಮನೆ, ಅಜ್ಜಿ ಹೇಳುತ್ತಿದ್ದ ಕಥೆಗಳ ನೆನಪಿನ ಬುತ್ತಿ ಬಿಚ್ಚಿಕೊಂಡಿತು. ಈ ಎರಡು ದಿನಗಳ ಕವಿ ಸಮ್ಮೇಳನ ಕೇವಲ ಗೋಷ್ಠಿಯಲ್ಲ, ಅದೊಂದು ಜೀವನ ಪಾಠ.

ಸುಮಾರು ೧೭ ಎಕರೆ ವಿಸ್ತಾರದಲ್ಲಿ ಧಾರವಾಡದ ಮಲೆನಾಡಿನ ಬಯಲಲ್ಲಿ ಬೆಳೆದು ನಿಂತಿರುವ ಈ 'ಸುಮನ ಸಂಗಮ' ನಿಜಕ್ಕೂ ವಿಸ್ಮಯ. ಇಲ್ಲಿ ನೆಟ್ಟು ಬೆಳೆಸಿದ ಗಿಡಗಳು (ಸುಮಾರು ೩೦% ಪಾಲು) ಸ್ಥಳೀಯ ಕಾಡಿನ ಮರಗಳ ಜೊತೆಗೆ ಬೆರೆತು ನಿಜವಾದ ದಟ್ಟಾರಣ್ಯದ ಭಾವವನ್ನು ನೀಡುತ್ತವೆ. ದಟ್ಟವಾದ ಗಿಡಗಳು, ಹಚ್ಚಹಸಿರಿನಿಂದ ನೆಲವನ್ನೆಲ್ಲ ಆವರಿಸಿದ ಬಳ್ಳಿಗಳು. ಇಲ್ಲಿ ನಡೆದಾಗ "ಭೂದೇವಿ ಮೈಗೆ ಸುಗಂಧ ಬಳೆದು ನಿಂತಂತೆ" ಅನುಭವ.

**ಕವಿಗಳ ಆಗಮನ, ನಾಯಕತ್ವದ ಬೆಳಕು**

ಒಳಗೆ ಕಾಲಿಡುತ್ತಿದ್ದಂತೆ ಹೂಗುಚ್ಛ ಕೊಟ್ಟು ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ನಮ್ಮ ಕೆಎಂಸಿ (KMC Karnataka Medical College)ಯ ಹಳೆಯ ಮುಖಗಳನ್ನು ಕಂಡಾಗ ಮನಸ್ಸಿನಲ್ಲಿ ಹೇಳಲಾರದಂತಹ ನಿರಾಳ ಮತ್ತು ಆಪ್ತ ಭಾವ ಮೂಡಿತು. ನನಗೆ ಕೆಎಂಸಿ ಎಂದರೆ ಕೇವಲ ಸಂಸ್ಥೆಯಲ್ಲ, ಅದು ನನ್ನ ತವರು. ಕೂಡಿ ಕಲಿತ ಸಹಪಾಠಿಗಳನ್ನು ಮತ್ತೆ ನೋಡಿದಾಗ ಹಲವು ವರ್ಷಗಳ ಹಿಂದೆ ಕಳೆದುಹೋಗಿದ್ದ ಆತ್ಮೀಯ ಗೆಳತಿಯೊಬ್ಬಳು ಸಿಕ್ಕಷ್ಟು ಖುಷಿಯಾಗುತ್ತದೆ.

ಈ ಕಾರ್ಯಕ್ರಮದಲ್ಲಿ ನನಗೆ ಅತ್ಯಂತ ಆಶ್ಚರ್ಯ ಮತ್ತು ಹೆಮ್ಮೆ ತಂದ ವಿಷಯವೆಂದರೆ ನಮ್ಮ ಸಹಪಾಠಿ ಡಾ. ಸುರೇಶ್ ಸಗರದ ಅವರನ್ನು ಭೇಟಿಯಾದದ್ದು. ಅವರು ಈ ಕಾರ್ಯಕ್ರಮದ ಮುಖ್ಯ ರೂವಾರಿಯಾಗಿದ್ದರು. ಅವರ ಮಾತುಗಳು ಬಹಳ ಕಡಿಮೆ, ಆದರೆ ಪ್ರತಿಯೊಂದು ಮಾತು ಬಂಗಾರದ ತೂಕ ಮಾಡಿದಂತೆ ಬೆಲೆ ಜಾಸ್ತಿ. ಅವರ ಶಿಸ್ತು ಮತ್ತು ಬದ್ಧತೆ ಎಷ್ಟಿತ್ತೆಂದರೆ, ಅವರು ಮೊದಲನೇ ರಾತ್ರಿಯೇ ಸ್ಥಳಕ್ಕೆ ಬಂದು ಎಲ್ಲಾ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ಸಿದ್ಧಪಡಿಸಿದ್ದರು.

ಆಮೇಲೆ ಸಾವಯವ ತರಕಾರಿಯಿಂದ ಮಾಡಿದ ಸಾದಾ, ರುಚಿಯಾದ ಊಟ. ಯಾವುದೇ ಬಣ್ಣಗಳಿಲ್ಲದ, ಎಣ್ಣೆ ಕಡಿಮೆಯ, ಪ್ರಕೃತಿಯ ಮಡಿಲಲ್ಲಿ ಎಲ್ಲರ ಜೊತೆ ಬೆರೆತು ತಿಂದ ಆ ಊಟಕ್ಕೆ ಯಾವ ರಾಜಭೋಜನವೂ ಸಾಟಿಯಲ್ಲ. ಚಲನಶೀಲತೆ, ಚಿಂತನೆ ಮತ್ತು ಸಂವೇದನೆ ಡಾ. ಸಂಜೀವ ಕುಲಕರ್ಣಿಯವರು ಪಾದರಸದಂತೆ (Mercury) ಅತ್ಯಂತ ಕ್ರಿಯಾಶೀಲರು. ಆರೋಗ್ಯ, ಪರಿಸರ, ಸಾಹಿತ್ಯ, ಸಂಸ್ಕೃತಿ ಪ್ರತಿ ಚಟುವಟಿಕೆಯಲ್ಲಿ ಭಾಗವಹಿಸಿ ತಮ್ಮ ಜ್ಞಾನವನ್ನು ಹಂಚಿಕೊಂಡರು. ವಿಶೇಷವಾಗಿ ಕಿರಿಯ ಮಗು ನಿಶಾಳೊಂದಿಗೆ ತೋರಿಸಿದ ಪ್ರೀತಿ ಅಕ್ಕರೆ ಅಜ್ಜನ ಪಾತ್ರವನ್ನೂ ನಿರ್ವಹಿಸಿತು.



ಡಾ. ವೀಣಾ ಅವರು ಕೂಡ ಕಾರ್ಯಕ್ರಮದುದ್ದಕ್ಕೂ ಅತ್ಯಂತ ಕ್ರಿಯಾಶೀಲರು. ಅವರ ಉತ್ಸಾಹ ನಿಜಕ್ಕೂ ಸಾಂಕ್ರಾಮಿಕ.

**ಊಟದ ನಂತರದ ಮೊದಲ ಗೋಷ್ಠಿ:**

'ಒತ್ತಡ ನಿರ್ವಹಣೆ ಬಗ್ಗೆ ಸಮಾಲೋಚನೆ'. ಡಾ. ಸಗರದ ಅವರು ವೈದ್ಯರು ಎದುರಿಸುವ ಆರ್ಥಿಕ, ವೃತ್ತಿಪರ ಮತ್ತು ವೈಯಕ್ತಿಕ ಒತ್ತಡಗಳ ಕುರಿತು ಬೆಳಕು ಚೆಲ್ಲಿದರು. ಒತ್ತಡಗಳನ್ನು ಧೈರ್ಯದಿಂದ ಎದುರಿಸಲು ಪರಸ್ಪರ ಬೆಂಬಲ ಎಷ್ಟು ಮುಖ್ಯ ಎಂಬುದರ ಮೇಲೆ ಒತ್ತು ನೀಡಲಾಯಿತು.

**ಕವಿಗಳ ಶಿಬಿರಾಗ್ನಿ ಮತ್ತು ಮನರಂಜನೆ:**

ಸಂಜೆಯ ಕೊನೆಯಲ್ಲಿ "ಅಲ್ಲಮನ ಬಯಲಲ್ಲಿ" ಕ್ಯಾಂಪ್‌ಫೈರ್. ಪುಟಾಣಿಗಳ ಪ್ರಾರ್ಥನೆಯೊಂದಿಗೆ ಆರಂಭ, ನಂತರ ಹಾಡುಗಳ ಸರದಿ. ನನ್ನ ಕೊಳಲು ವಾದನ (ಡಾ. ಸಲಗರೆ), ಜಯಾ ಸಲಗರೆ ಅವರ 'ಬಾನಲ್ಲು ನೀನೆ, ಭುವಿಯಲ್ಲು ನೀನೆ'. ಡಾ. ವೀಣಾ ಅವರ ಏಕಪಾತ್ರ ಅಭಿನಯ ಎಲ್ಲರ ಗಮನ ಸೆಳೆದಿತು. ಡಾ. ಅಶ್ವಿನಿ ಅವರ ಮಿಮಿಕ್ರಿ, ಡಾ. ಸತ್ಯವತಿ ಅವರ ಮಧುರ ಗಾಯನ ಎಲ್ಲವೂ ಮನರಂಜಕ.

ಅಲ್ಲೆ ಹಾರಾಡುತ್ತಿದ್ದ ಅಪರೂಪದ ಮಲಬಾರ್ ಗ್ರಾಫ್ಟ್ ಹಾರ್ನ್‌ಬಿಲ್ ಪಕ್ಷಿಗಳ ಪ್ರಣಯ ಲೋಕದ ಕುರಿತು ಡಾ. ಸಂಜೀವ್ ವಿವರಿಸಿದರು: "ಸಂಸಾರ ಅಂದ್ರೆ ಪರಸ್ಪರ ಪ್ರೀತಿ, ವಿಶ್ವಾಸ. ಹಾರ್ನ್‌ಬಿಲ್‌ಗಳಿಂದ ಕಲಿಬೇಕು."

**ಅರಣ್ಯ ಸ್ನಾನ ಮತ್ತು ಪರಿಸರ ಕಾಳಜಿ**

"ಅರಣ್ಯ ಸ್ನಾನ ಅಂದ್ರೆ ಕಾಡಿಗೆ ಹೋಗೋದು ಮಾತ್ರ ಅಲ್ಲ. ಮರಗಳ ಜೊತೆ ಉಸಿರಾಡೋದು, ಹಕ್ಕಿಗಳ ಶಬ್ದದ ಜೊತೆ ಮನಸ್ಸು ಸರಿಸಮವಿಡೋದು." ಜಪಾನಿನಲ್ಲಿ ಇದು ವೈದ್ಯಕೀಯ ಚಿಕಿತ್ಸೆಯ ಭಾಗವೆಂದರು. ಮರಗಳ ನಡುವೆ ನಡೆದಾಗ ಒಣ ಎಲೆಗಳ ಚಪ್ಪಟೆ, ಗಾಳಿಯ ಸ್ಪರ್ಶ, ಮಣ್ಣಿನ ವಾಸನೆ ಎಲ್ಲವೂ ಮನಸ್ಸನ್ನು ಶಾಂತಗೊಳಿಸಿತು. ಅರಣ್ಯ ಸ್ನಾನ ಮಾಡಿದವರಿಗೆ: ಕಾರ್ಟಿಸೋಲ್ ಕಡಿಮೆಯಾಗುತ್ತದೆ ನಾಡಿ ಮಿತವಾಗುತ್ತದೆ ರಕ್ತದೊತ್ತಡ ಇಳಿಯುತ್ತದೆ ಖಿನ್ನತೆಯ ಲಕ್ಷಣಗಳು ಶಾಂತಗೊಳ್ಳುತ್ತವೆ ಅಂತಿಮ ಚಿಂತನೆ ನಾವು ಪ್ರತಿದಿನ ರೋಗಿಗಳ ನೋವನ್ನು ನೋಡುತ್ತೇವೆ. ಆದರೆ ನಮ್ಮದೇ ದೇಹ ಮನಸ್ಸಿಗೆ ಎಷ್ಟು ಗಮನ ಕೊಡುತ್ತೇವೆ ಅರಣ್ಯದಲ್ಲಿ ೨೦ ನಿಮಿಷ ನಡೆದಾಗಲೇ ಉಸಿರಾಟ ಮೃದು, ಹೃದಯ ಬಡಿತ ನಿಧಾನ.

ಹಿಂದೆ ಅಷ್ಟಾಗಿ ಗಮನಿಸದ ಕೆಲವು ಸಂಗತಿಗಳು ಇಲ್ಲಿ ಅತಿ ದೊಡ್ಡ ಪಾಠವಾಗುತ್ತವೆ ಎಲೆಗಳು ಹೇಗೆ ಸದ್ದು ಮಾಡುತ್ತವೆ?, ಗಾಳಿ ಹೇಗೆ ದಿಕ್ಕು ಬದಲಿಸುತ್ತವೆ? ಹಕ್ಕಿಗಳು ಹೇಗೆ ತಮ್ಮ ಪ್ರದೇಶವನ್ನು ಸೂಚಿಸುತ್ತವೆ. ಈ ಹಕ್ಕಿಗಳಿಗೆ ಹಾಡುವುದನ್ನು ಯಾರು ಹೇಳಿಕೊಡುತ್ತಾರೆ ಹೀಗೆ ಉತ್ತರವಿರದ ಪ್ರಶ್ನೆಗಳು ಮೂಡುತೊಡಗಿತ್ತು.

ಮಣ್ಣು ಗಾಳಿ ಹಕ್ಕಿಗಳು : ನಮಗೆ ಹಿಂದಿರುಗಿಸಿದ ಮರೆತು ಹೋದ ಜಗತ್ತು.

**ಅರಣ್ಯ ಸ್ನಾನದ ಕೇಂದ್ರ ಬಿಂದು : ಸಮಗ್ರ ಅನುಭವ**

ಎಲ್ಲ ಐದು ಇಂದ್ರಿಯಗಳಿಗೂ ಪ್ರಪಂಚವನ್ನು ಹೀರುವ ಅನುಭವ ಇದರಲ್ಲಿ ಏನೋ ಔಷಧವಿದೆ, ನಮ್ಮ ಮನಸ್ಸು ಪರಿಶುದ್ಧವಾಗುತ್ತದೆ. ಸಂಜೀವ ಸರ್ ಹೇಳಿದ ಮಾತು, ಈ ಹಕ್ಕಿಗಳು ಇವುಗಳ ಬದುಕು

ಪ್ರೀತಿ ನಿಷ್ಠೆಗೆ ಜವಾಬ್ದಾರಿ ಇದೆ. ಮನುಷ್ಯನು ಮಾತ್ರ ಮರಗಳಿಗೆ, ಪಕ್ಷಿಗಳಿಗೆ, ಮಣ್ಣಿಗೆ ಅಷ್ಟು ದೂರವಾಗಿದ್ದಾನೆ ಹಾಗೆಯೇ ಮನುಷ್ಯ ಆರೋಗ್ಯಕ್ಕೂ ದೂರವಾಗಿದ್ದಾನೆ.

ನಾವು ಪ್ರತೀ ದಿನ ರೋಗಿಯ ದೇಹದ ನೋವು ನೋಡುತ್ತೇವೆ, ಚಿಕಿತ್ಸೆ ಕೊಡುತ್ತೇವೆ. ಆದರೆ ನಮ್ಮದೇ ದೇಹ, ನಮ್ಮದೇ ಮನಸ್ಸಿಗೆ ಎಷ್ಟು ಗಮನ ಕೊಡುತ್ತೇವೆ.

**ಕವಿಗೋಷ್ಠಿ : ಅಷ್ಟಾವಕ್ರ ಕೊಠಡಿಯಲ್ಲಿ**

ರಾಜ್ಯೋತ್ಸವದ / ಪರಿಸರದ ಮೇಲೆ ನಮ್ಮ ಸದಸ್ಯರೇ ಬರೆದ ಕವನಗಳನ್ನು ಓದಲಾಯಿತು.

ಡಾ. ಉಮಾ ಚಿಕ್ಕರೆಡ್ಡಿಯವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕವಿಗೋಷ್ಠಿ ಅಧ್ಯಕ್ಷರಾದ ಡಾ. ಶ್ರೀಶೈಲ ಮಾದಣ್ಣನವರ್ ಕಾವ್ಯ ಬರಹ ಹೇಗಿರಬೇಕು ಎನ್ನುವ ವಿಷಯದಲ್ಲಿ ಅತೀ ಕ್ಲಿಷ್ಟವಾದ ವಿಷಯಗಳನ್ನು ಪರಿಣಾಮಕಾರಿಯಾಗಿ ಮಾಡಿಕೊಟ್ಟರು.

**ಪರಿಸರ ಕಾಳಜಿ ಮತ್ತು ನಿರ್ವಹಣೆ: ಡಾ. ಅರವಿಂದ್ ಪಟೇಲ್**

ಪ್ಲಾಷ್ಟಿಕ್ ಕ್ರಿಮಿನಾಷಕಗಳು ಸೌಂದರ್ಯ ವರ್ಧಕಗಳ ಕರಾಳ ಕಥೆ. ನಮ್ಮ ಹಿರಿಯರು ಅನ್ನುವವರು ಕೈಯಿಂದ ಕೊಟ್ಟಿದ್ದೆ ಮಾತು, ಬಾಯಿಂದ ಹೇಳಿದ್ದೆ ನೀತಿ ಅಂತ. ಇವತ್ತು ನಾವು ತಿನ್ನೋ ಪ್ರತಿಯೊಂದರಲ್ಲೂ ವಿಷ ತುಂಬಿದೆ, ಮೊದಲು ನಮ್ಮ ಬದುಕು ಸರಿ ಮಾಡಬೇಕು. ಈ ಗಂಭೀರ ಮಾತು ಕೇಳಿ ಎಲ್ಲರೂ ಬೆರಗಾದೆವು.

**ಕಡೆಯ ಕಾರ್ಯಕ್ರಮ:**

'ಕೊಳದ ತೆಪ್ಪದಲ್ಲಿ ತೇಲಾಟ'. ಮಳೆ ನೀರು ಶೇಖರಣೆಗೆ ನಿರ್ಮಿಸಿದ ಮೂರು ನೈಸರ್ಗಿಕ ಕೆರೆಗಳು ಹಸಿರು ಬಯಲು ದೊಡ್ಡ ಮರಗಳ ನೆರಳು ನಮ್ಮೆಲ್ಲರ ನೆನಪುಗಳನ್ನು ಮರುಕಳಿಸುವಂತೆ ಮಾಡಿತು. ಸಮ್ಮೇಳನದ ಮುಕ್ತಾಯದಲ್ಲಿ ಎಲ್ಲರಿಗೂ ಅನ್ನಿಸಿದ್ದು "ಇದು ಮರೆಯಲಾರದ ಅನುಭವ. ನಾನು ಬಂದಿದ್ದು ಒಳ್ಳೆಯದಾಯಿತು."

ಡಾ. ಸಂಜೀವ ಕುಲಕರ್ಣಿಯವರ ಕ್ರಿಯಾಶೀಲತೆ, ಡಾ. ಸಗರದ ಅವರ ಅಚ್ಚುಕಟ್ಟಿನ ನಿರ್ವಹಣೆ, ಡಾ. ವೀಣಾ ಅವರ ಉತ್ಸಾಹ ಮತ್ತು ಕವಿಹೃದಯರ ಒಡನಾಟ, ಈ ಎಲ್ಲ ಕ್ಷಣಗಳು ಬಹುಕಾಲ ನೆನಪಿನಲ್ಲಿ ಉಳಿಯುವವು. ಡಾ. ಮಾದಣ್ಣನವರ ಉತ್ಸಾಹದ ವಿವರಣೆ, ಡಾ. ಗೋವಿಂದ ಹೆಗ್ಗಡೆಯವರ ನಗುಮೊಗದ ಕಾವ್ಯ ವಿಶ್ಲೇಷಣೆ ಗಂಭೀರವಾದರೂ ಚುರುಕು ನಗೆಯಿಂದ ಖುಷಿಕೊಡುವ ಡಾ. ಶಿವಾನಂದ ಕುಬುಸದ, ಡಾ. ಅರವಿಂದ ಪಟೇಲರ ಹುಮ್ಮಸ್ಸು, ಪುಟಾಣಿಗಳ ಮಾತಿನ ಹಿಮ್ಮೇಳ ಎಲ್ಲವೂ ಒಂದಕ್ಕೊಂದು ಸುಂದರವಾಗಿ ಮೂಡಿತ್ತು. ಮೊದಲ ದಿನದಿಂದರೂ ಕೊನೆಯವರೆಗೆ ಎಲ್ಲಾ ಚಟುವಟಿಕೆಯಲ್ಲಿ ಭಾಗವಹಿಸಿ ತಮಗೆ ತಿಳಿದ ಎಲ್ಲಾ ಜ್ಞಾನ ಎರೆದ ಡಾ. ಸಂಜೀವ ಕುಲಕರ್ಣಿಯವರಿಗೆ ನಮೋನಮಃ



## ಸಂದರ್ಶನ

# ಡಾ. ರವಿರಾಜೇಶ್ವರ



**ಡಾ. ಪ್ರಿಯಾ ಭಾಲ್ಕಿ**
ಸಹಾಯಕ ಪ್ರಾಧ್ಯಾಪಕರು
ರಿಮ್ಸ್



**ಡಾ. ಸತ್ಯವತಿ**
ವಿಭಾಗೀಯ
ಸಂಪಾದಕರು

೧೯೭೩ರಲ್ಲಿ ಬಳ್ಳಾರಿ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಪದವಿಯನ್ನು ಪಡೆದು, ಕುಟುಂಬ ವೈದ್ಯರಾಗಿ ರಾಯಚೂರಿನ ಅನೇಕ ಸ್ಥಳಗಳಲ್ಲಿ ವೈದ್ಯಕೀಯ ಸೇವೆ ನೀಡಿದವರು. ಹಲವು ಶಿಕ್ಷಣ ಸಂಸ್ಥೆಗಳ ಸದಸ್ಯರಾಗಿ, ಕರ್ನಾಟಕ ವೆಲ್ಫೇರ್ ಟ್ರಸ್ಟಿನ ಸ್ಥಾಪಕ ಸದಸ್ಯರಾಗಿ, ಕಾರ್ಯದರ್ಶಿಯಾಗಿ, ಇಂಗ್ಲಿಷ್ ಮೀಡಿಯಂ, ಕನ್ನಡ ಮೀಡಿಯಂ ಹಾಗೂ ಸಿಬಿಎಸ್ಸಿ ಶಾಲೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಕನ್ನಡ, ಇಂಗ್ಲಿಷ್, ತೆಲುಗು, ಹಿಂದಿ ಸಾಹಿತ್ಯಗಳ ಬಗ್ಗೆ ಅಪಾರ ಒಲವು ಮತ್ತು ಪಾಂಡಿತ್ಯವನ್ನು ಸ್ವಾಧ್ಯಾಯದಿಂದ ಗಳಿಸಿಕೊಂಡವರು. ಭಾರತದ ಸಂಸ್ಕೃತಿ ಇತಿಹಾಸದ ಬಗ್ಗೆ ಆಳವಾದ ಅಧ್ಯಯನ ಮಾಡಿರುವ ಇವರ ಕವನಗಳಲ್ಲಿ, ದೇಶದ ಬಗ್ಗೆ ಪ್ರೀತಿ, ಗೌರವ, ಘನತೆ ವ್ಯಕ್ತವಾಗುತ್ತವೆ. ಮಾನವ ಜೀವನ, ಸಂಬಂಧಗಳ ಬಗ್ಗೆ ಅವರು ಹೊಂದಿರುವ ಅಪಾರವಾದ ಪ್ರೀತಿ ಪುರಸ್ಸರ ಕಾಳಜಿ ಹೃದಯ ಸ್ಪರ್ಶಿಯಾಗಿವೆ.

ಪ್ರಕಟಿತ ಕವನ ಸಂಕಲನಗಳು ಮಗಳಂಥ ಕವನಗಳು (ನೂರು ಮತ್ತೊಂದು) ಹಾಗೂ ಒಲಿದಂತೆ ಹಾಡು (ತೊಂಬತ್ತು ಮತ್ತೊಂಬತ್ತು) ಕವಿ ಹೃದಯಗಳನ್ನು ಗೆದ್ದು "ಕವಿ ರಾಜೇಶ್ವರ" ಎಂದು ಕರೆಸಿಕೊಂಡವರು.

**ಡಾ. ಪ್ರಿಯಾ ಭಾಲ್ಕಿ : ನಿಮ್ಮ ಬಾಲ್ಯ ಮತ್ತು ಶಿಕ್ಷಣದ ಬಗ್ಗೆ ತಿಳಿಸಬಹುದೇ?**

**ಡಾ. ರವಿರಾಜೇಶ್ವರ :** ನಮ್ಮ ತಂದೆ ಸರ್ಕಾರಿ ಶಾಲೆಯ ಶಿಕ್ಷಕರಾಗಿದ್ದರು. ಅವರು ವರ್ಗಾವಣೆಯಾದ ಹಳ್ಳಿಗಳಿಗೆಲ್ಲ ನಮ್ಮನ್ನು ಕರೆದುಕೊಂಡು ಹೋಗುತ್ತಿದ್ದರು. ಎಲ್ಲ ಹಳ್ಳಿಗಳಲ್ಲಿ ಮತ ಸಾಮರಸ್ಯ, ಅಪ್ಯಾಯತೆ, ಇರುತಿತ್ತು. ಎಲ್ಲರೂ ಎಲ್ಲರನ್ನು, ಮಾಮ, ತಾತ, ಅಕ್ಕ, ಅಣ್ಣ, ತಮ್ಮ ಇತ್ಯಾದಿ ಬಾಂಧವ್ಯ ಸೂಚಕ ಗಳಿಂದಲೇ ಇನ್ನೊಬ್ಬರನ್ನು ಮಾತಾಡಿಸುತ್ತಿದ್ದರು, ಒಬ್ಬರಿನ್ನೊಬ್ಬರ ನೆರವಿಗಾಗುತಿದ್ದರು.



ಆಗಿನ್ನೂ ರಾಜಕೀಯ ಹಳ್ಳಿಗಳನ್ನು ಪ್ರವೇಶಿಸಿರಲಿಲ್ಲ! ಇಂಥ ವಾತಾವರಣದಲ್ಲಿ ನಾನು ಬೆಳೆದುಬಂದೆ. ಓದುವ ಅಭ್ಯಾಸ ಚಿಕ್ಕಂದಿನಿಂದಲೂ ಇತ್ತು. ಶಾಲಾ ಲೈಬ್ರರಿಯ ಮಕ್ಕಳ ಪುಸ್ತಕಗಳನೆಲ್ಲ ಓದಿದ್ದೆ, ಲಕ್ಷ್ಮೀಶನ ತಾತ್ಪರ್ಯಸಹಿತ ಜೈಮಿನಿ ಭಾರತವನ್ನು ನಾಲ್ಕನೇ ತರಗತಿಯಲ್ಲಿರುವಾಗಲೇ ಓದಿದ್ದೆ. ನನ್ನ ತಂದೆಯವರು ಸಾಯಂಕಾಲ ತಮ್ಮ ಸಹ ಶಿಕ್ಷಕರೊಂದಿಗೆ, ಊರ ಹಿರಿಯರೊಂದಿಗೆ ವಾಕಿಂಗ್ ಹೋಗುತ್ತಿದ್ದರು. ನಾನೂ ಅವರ ಜೊತೆಗೆ ಹೋಗುತ್ತಿದ್ದೆ. ಅವರು ಸಾಹಿತ್ಯ , ಧರ್ಮ, ರಾಜಕೀಯ ವಿಷಯವನೆಲ್ಲ ಚರ್ಚಿಸುತಿದ್ದರು, ಯಾವುದು, ಒಳಿತು, ಹೇಗೆ ಎಲ್ಲಧರ್ಮಗಳು ಮಾನವನ ಉದ್ಧಾರಕ್ಕಾಗಿ ಬಂದಿವೆ ಎಂದು ಮಾತನಾಡುವದನ್ನು ಕೇಳಿ, ನನ್ನ ವಿಚಾರಗಳು

ರೂಪುಗೊಂಡವು ಎನಿಸುತ್ತದೆ.



ನಾವು ಕೆಲವು ಕಾಲ ಇದ್ದ ಹಳ್ಳಿಯಲ್ಲಿ ಉಚಿತ ವೀರಶೈವ ವಿದ್ಯಾರ್ಥಿನಿಲಯ ಇತ್ತು. ಎಲ್ಲ ಜಾತಿಯ ವಿದ್ಯಾರ್ಥಿಗಳು ಅಲ್ಲಿದ್ದರು. ಅಲ್ಲಿಯ ಮೇಲ್ವಿಚಾರಕ ಶಿಕ್ಷಕರು ನನ್ನ ತಂದೆಯ ಸಹೋದ್ಯೋಗಿ, ನಾನು ಹೆಚ್ಚಿನ ಸಮಯ ಅಲ್ಲಿಯೇ ಕಳೆಯುತಿದ್ದೆ. ಸುತ್ತುಮುತ್ತಲಿನ ಹಳ್ಳಿಯ ಹುಡುಗರು, ತಂದೆಯಿಂದ ಉಚಿತ ಪಾಠ ಹೇಳಿಸಿಕೊಳ್ಳಲು ನಮ್ಮ ಮನೆಯಲ್ಲಿ ಇರುತಿದ್ದರು. ಅವರು ಊರಿಗೆ ಬಂದ ನಾಟಕಗಳಿಗೆಲ್ಲ ನನ್ನನ್ನು ಎತ್ತಿಕೊಂಡು ಹೋಗುತಿದ್ದರು ಹೆಚ್ಚಾದ ನಾಟಕಗಳು ರಾಮಾಯಣ, ಮಹಾಭಾರತ ಆಧರಿಸಿದವು. ನನ್ನ ತಂದೆ ಸ್ವಾಭಿಮಾನಿ, ಧೈರ್ಯ ಶಾಲಿಗಳು, ಹಾವು ಕಂಡರೆ ನನ್ನ ತಂದೆಯವರನ್ನು ಹೊಡೆಯುವುದಕ್ಕೆ ಕರೆದುಕೊಂಡು ಹೋಗುತ್ತಿದ್ದರು, ಅನ್ಯಾಯವನ್ನು ಎದುರಿಸುತಿದ್ದರು, ಸಮಯಪಾಲನೆ, ಶಿಸ್ತುಗಳಿಂದಾಗಿ ಒಳ್ಳೆಯ ಶಿಕ್ಷಕರೆಂದು ಹೆಸರು ಗಳಿಸಿದ್ದರು. ಬಡವರ ಬಗ್ಗೆ ಸಹಾನುಭೂತಿ. ಬರುವ ಸ್ವಲ್ಪ ಸಂಬಳದಲ್ಲಿ ಅವರ ಶಾಲಾಫೀಸು ತಾವೇ ಕಟ್ಟುತ್ತಿದ್ದರು. 'ನಾನು ನಾನಾಗಲು' ಕಾರಣ ನನ್ನ ತಂದೆ–ತಾಯಿ. ತಾಯಿ ನಮಗಷ್ಟೇ ಅಲ್ಲದೆ ಮನೆಯಲ್ಲಿರುವ ಇತರ ಮಕ್ಕಳಿಗೂ ತಾಯಿಯೇ! ಎಲ್ಲರನ್ನೂ ಪ್ರೀತಿಯಿಂದ ಕಾಣುತಿದ್ದಾಕೆ. ನಿಮ್ಮ ಕನ್ನಡ ಚೆನ್ನಾಗಿದೆ ಎಂದರೆ ಕನ್ನಡ ಕಲಿಸಿದವರು ಚೆನ್ನಾಗಿದ್ದರು ಎಂದರ್ಥ! ಇದು ಉಳಿದ ವಿಷಯಗಳಲ್ಲಿಯೂ ಅಷ್ಟೇ ನಿಜ. ನನ್ನ ಪುಣ್ಯಕ್ಕೆ ನನ್ನ ವಿದ್ಯಾರ್ಥಿ ಜೀವನದಲ್ಲಿ ಸಿಕ್ಕ ಶಿಕ್ಷಕರೆಲ್ಲ ಸಾಹಿತ್ಯಾಸಕ್ತರೇ! ನನಗೆ ಸಾಹಿತ್ಯದಲ್ಲಿ ಅಲ್ಪಸ್ವಲ್ಪ ಆಸಕ್ತಿ ಇದ್ದರೆ ಅವರೇ ಕಾರಣ! ಇವೆಲ್ಲದರ ಪ್ರತಿಫಲ ನನ್ನ ಇಂದಿನ ಅರಿವು ಚಿಂತನೆಗೆ ಕಾರಣ.

**ಡಾ. ಪ್ರಿಯಾ ಭಾಲ್ಕಿ : ವೈದ್ಯಕೀಯವನ್ನು ನೀವು ಆರಿಸಿಕೊಂಡಿದ್ದಕ್ಕೆ ಕಾರಣ ಏನು?**

**ಡಾ. ರವಿರಾಜೇಶ್ವರ :** ಚಿಕ್ಕವನಿದ್ದಾಗ ನಾನು ನೋಡಿದ ಸಮಾಜದಲ್ಲಿ ವೈದ್ಯರಿಗೆ ಹೆಚ್ಚಾದ ಗೌರವವಿತ್ತು. ಯಾವ

> ವ್ಯಕ್ತಿಯ ಜೀವನ ಮೌಲ್ಯಗಳನ್ನು, ನಂಬಿಕೆಗಳನ್ನು, ಇಷ್ಟ ಅಇಷ್ಟಗಳನ್ನು ರೂಪಿಸುವಲ್ಲಿ, ಬಾಲ್ಯದ ಅನುಭವಗಳು, ಪ್ರಭಾವಿಸಿದ ಸಂಗತಿಗಳು, ಮಹತ್ತರ ಪಾತ್ರವನ್ನು ವಹಿಸುತ್ತವೆ... 'ಕೇಳಬೇಕಿದೆ ಒಮ್ಮೆ, ದೇವರೆನಿಸಿದವ ಸಿಕ್ಕರೆ ಹೇಳು, ತಂದೆಯೆ ಬಾಲ್ಯವನು ಯಾಕಿಷ್ಟು ಚಿಕ್ಕದಾಗಿಸಿದೆ ?'

ಕಾರ್ಯಕ್ರಮಕ್ಕೆ ಹೋದರೂ ಪ್ರಮುಖ ಸ್ಥಳಗಳು ಅವರಿಗೆ ಮೀಸಲು. ನಿಧಾನಕ್ಕೆ ಅವರು ತಮ್ಮ ಆಸ್ಪತ್ರೆಯೊಳಗೆ ಹೋಗುವಾಗ ರೋಗಿಗಳು, ಬಂಧುಗಳು ಎದ್ದು ನಮಸ್ಕರಿಸುತಿದ್ದರೆ, ಹಸನ್ಮುಖದಿಂದ ವೈದ್ಯರು ನಮಸ್ಕರಿಸುತಿದ್ದ ರೀತಿ, "ಏನಾದರೂ ಮಾಡಿ ಉಳಿಸಿ ಡಾಕ್ಟರೇ" ಎಂದು ಕಾಲಿಗೆ ನಮಸ್ಕರಿಸುತಿದ್ದ ರೋಗಿಗಳ ಬಂಧುಗಳು, ನೋವಿನಲ್ಲಿ ಬಂದ ರೋಗಿಗಳನ್ನು ಗುಣವಾಗುತಿದ್ದುದನ್ನು, ವೈದ್ಯರು ನೀಟಾಗಿ ಡ್ರೆಸ್ ಮಾಡಿಕೊಂಡು, ಕೊರಳಿಗೆ ಸ್ಟೆತೋಸ್ಕೋಪನ್ನು ಹಾಕಿಕೊಂಡು ಬರುವುದನ್ನು ನೋಡಿದ ನಾನು ಪ್ರಭಾವಿತನಾದೆ, ಆಗಾಗ ಬರುತಿದ್ದ ಅಸ್ತಮಾದಿಂದ ನನ್ನ ತಾಯಿಗೆ ಆಗುತಿದ್ದ ಸಂಕಟದಿಂದಾಗಿ ವೈದ್ಯರಲ್ಲಿ ಹೋಗಬೇಕಾಗುತಿತ್ತು. ಒಮ್ಮೆ ತಂದೆಯವರಿಗೆ ಆದ ಅಪೆಂಡಿಸೈಟಿಸ್ ನಿಂದ ಚೇತರಿಸಿಕೊಂಡದನ್ನು ನೋಡಿ ಎಂಥ ಉದಾತ್ತವೃತ್ತಿ ವೈದ್ಯವೃತ್ತಿ! ನಾನೂ ವೈದ್ಯ ನಾಗಬೇಕೆಂದು ಕೊಂಡೆ. ಈಗ ಕೇಳಿದರೆ ನನ್ನ ಅಭಿಪ್ರಾಯ ಬದಲಾಗುತಿತ್ತೇನೋ!




ಬಳ್ಳಾರಿಯ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಸೀಟು ಸಿಕ್ಕಾಗ ನನ್ನ ತಂದೆ ತಾವೊಬ್ಬರೇ ಅಡ್ಮಿಷನ್ ಮಾಡಿಸಲು ಹೋಗಿದ್ದರು. ಸಂಜೆಯಾಯಿತಂತೆ,




ಮರಳಿ ಬರುವುದಕ್ಕೆ ಬಸ್ಸುಗಳಿರಲಿಲ್ಲವಂತೆ. ಆಗ ಅಲ್ಲಿ ಓದುತಿದ್ದ, ಈಗ ಪ್ರಸಿದ್ಧ ವೈದ್ಯರಾದ ಡಾ. ಭಾಸ್ಕರಾನಂದಕುಮಾರ ಅವರು, ತಂದೆಯವರನ್ನು ಮಾತನಾಡಿಸಿ, ತಮ್ಮ ಮೆಸ್‌ನಲ್ಲಿ ಊಟ ಮಾಡಿಸಿ, ತಮ್ಮ ರೂಮಿನಲ್ಲಿ ಮಲಗಿಸಿಕೊಂಡು ಮುಂಜಾನೆ ಊರಿಗೆ ಕಳಿಸಿದರಂತೆ! ಊರಿಗೆ ಬಂದ ನಂತರ ನನ್ನ ತಂದೆ ಈ ಸಂಗತಿಯನ್ನು ತಿಳಿಸಿ, ನನ್ನಂಥ ಅಪರಿಚಿತನಿಗೆ ಆತಿಥ್ಯ ಮಾಡಿದ ಅವರಿಗೆ ನೀನು ಹೋದ ನಂತರ ಮೊದಲು ಭೇಟಿಯಾಗಿ ಅವರಿಗೆ ಕೃತಜ್ಞತೆಗಳನ್ನು ತಿಳಿಸು ಎಂದರು. ಇಂಥ ಎಷ್ಟೋ ಹೃದಯವಂತ ವೈದ್ಯರನ್ನು, ನನ್ನ ಶಿಕ್ಷಕರಲ್ಲಿ ಕಂಡೆ. ಆಗಿನ ಕಾಲ ಹಾಗಿತ್ತು ಎನಿಸುತ್ತದೆ. ಇವುಗಳೆಲ್ಲ ನನ್ನಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಆಸಕ್ತಿಯನ್ನು ಉಂಟುಮಾಡಿದವು.

**ಡಾ. ಪ್ರಿಯಾ ಭಾಲ್ಕಿ : ಈಗಿನ ವೈದ್ಯಕೀಯ ಶಿಕ್ಷಣದ ಕುರಿತು ನಿಮ್ಮ ಅಭಿಪ್ರಾಯ ಏನು?**

**ಡಾ. ರವಿರಾಜೇಶ್ವರ :** ವೈದ್ಯಕೀಯ ಕ್ಷೇತ್ರ ಬಹಳ ಬದಲಾಗಿದೆ ಎನಿಸುತ್ತದೆ. ದಿನದಿಂದ ದಿನಕ್ಕೆ ಹೆಚ್ಚು ಕಮರ್ಷಿಯಲ್ ಆಗುತ್ತಿದೆ. ಮಧ್ಯಮವರ್ಗದವರೂ ಆಸ್ಪತ್ರೆಗೆ ಹೋಗಬೇಕಾದರೆ, ಒಳರೋಗಿಗಳಾಬೇಕಾದರೆ ಎರಡೆರಡು ಸಲ ಯೋಚನೆ ಮಾಡಬೇಕಾಗಿದೆ. ಕೃಷಿಯನ್ನು ಬಿಟ್ಟರೆ, ಅತಿ ಹೆಚ್ಚು ಸಾಲಪಡೆಯುವ ಕಾರಣ, ವೈದ್ಯಕೀಯ ವೆಚ್ಚ. ವೇಗ ಗತಿಯಿಂದ ಬದಲಾಗುತ್ತಿರುವ ಕಾಲ, ಏನೂ ಹೇಳುವಹಾಗಿಲ್ಲ, ಹೆಚ್ಚುತ್ತಿರುವ ಶಿಕ್ಷಣ ವೆಚ್ಚ, ಕೋಟಿಗಟ್ಟಲೆ ಹಣ ಖರ್ಚು ಮಾಡಿ ವೈದ್ಯ ಶಿಕ್ಷಣ ಪಡೆದುಕೊಂಡವರು ಇನ್ನೇನು ತಾನೇ ಮಾಡಲು ಸಾಧ್ಯ? ಯಾವಾಗಿನಿಂದ ವೈದ್ಯಕೀಯ ಶಿಕ್ಷಣ ಖಾಸಗೀಕರಣವಾಗಲು ಪ್ರಾರಂಭವಾಯಿತೋ, ಆಗಿನಿಂದ ಈ ವ್ಯತ್ಯಾಸಗಳು ಆರಂಭವಾದವು. ಮೊದಲೊಮ್ಮೆ ಖಾಸಗೀ ವೈದ್ಯಕೀಯ ಕಾಲೇಜುಗಳಿಗೆ ಅನುಮತಿ ಕೊಡಲು ಪ್ರಾರಂಭಿಸಿದಾಗ, ಸ್ಟ್ರೈಕ್‌ಗಳನ್ನು ಮಾಡಿದರೂ ಇದನ್ನು ತಡೆಯಲಾಗಲಿಲ್ಲ. ಮೊದಲಿದ್ದ ವೈದ್ಯ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಮಧ್ಯ ಸೌಹಾರ್ದ ಕಡಿಮೆಯಾಗುತ್ತಿದೆ ಎನಿಸುತ್ತಿದೆ. ಆಗಿನ ಶಿಕ್ಷಕರಿಗೆ ವಿದ್ಯಾರ್ಥಿಗಳಬಗ್ಗೆ, ಅವರು ಒಳ್ಳೆಯ ವೈದ್ಯರಾಗುವಂತೆ ಮಾಡುವುದರಲ್ಲಿ ಹೆಚ್ಚು ಶ್ರಮವಹಿಸುತಿದ್ದರು. ನಾನೊಮ್ಮೆ ಅಂತರ್ ವೈದ್ಯಕೀಯ ಚರ್ಚಾಸ್ಪರ್ಧೆಗೆ ಬೆಂಗಳೂರಿಗೆ ಹೋಗಬೇಕಿತ್ತು. ಆಗ ನನ್ನ ಪ್ರೊಫೆಸರ್, ಪರೀಕ್ಷೆ ಇನ್ನೊಂದು ವಾರದಲ್ಲಿ ಹೋಗುವುದು ಬೇಡ ಎಂದು ತಡೆದರು! ಅಂಥ ಶಿಕ್ಷಕರು ಈಗಲೂ ಇರುವುದಾದರೆ ಅಂಥವರಿಗೆ ಸಾಷ್ಟಾಂಗ ನಮಸ್ಕಾರಗಳು! ಅಂಥ ಶಿಕ್ಷಕರ ಸಂಖ್ಯೆ ಸಾವಿರವಾಗಲಿ...! ಈಗ ಗ್ರಾಹಕ ಕಾನೂನನ್ನು ವೈದ್ಯ ಕ್ಷೇತ್ರಕ್ಕೂ ಅನ್ವಯಿಸಿದಾಗಿನಿಂದ ಬಹಳ ಬದಲಾಗಿಬಿಟ್ಟಿತು. ರೋಗಿ ವೈದ್ಯ ಸಂಬಂಧಗಳು ಹದಗೆಟ್ಟು ಬಿಟ್ಟವು. ಮತ್ತೆ ಹಿಂದಿನ ದಿನಗಳು ಬರುವ ಹಾಗಿದ್ದರೆ ಎನಿಸುತ್ತದೆ ಆದರೆ ಹಾಗಾಗುವುದಿಲ್ಲ, ಹಾಗಾಗಲಾರದು ಎನಿಸುತ್ತದೆ.

ವೈದ್ಯರಿಗೆ, ಇತರ ಯಾವುದೇ ವೃತ್ತಿಯವರಿಗಿಂತ, ಅನುಕಂಪದ ಗುಣ ಇರಬೇಕು, ಈಗ ಕಡಿಮೆಯಾಗುತ್ತಿದೆ ಎನ್ನುವ ಭಾವನೆ ಹೆಚ್ಚಾಗುತ್ತಿದೆ. ಇದನ್ನು ಹೇಗೆ ಕಲಿಸುವುದು? ಹೆಚ್ಚು ಮಾರ್ಕ್ಸ್‌ಗಳೋ ಅಥವಾ ಹೆಚ್ಚು ಹಣವೋ ವೈದ್ಯಕೀಯ ಕಾಲೇಜುಗಳಿಗೆ ಸೇರುವುದಕ್ಕೆ ಮಾನದಂಡವಾಗದೆ, ಸೇರಬಯಸುವವರಲ್ಲಿ ಮಾನವೀಯತೆ, ಅನುಕಂಪ ಇದೆಯೋ ಎನ್ನುವ ಪರೀಕ್ಷೆ ಮಾಡಬೇಕೇನೋ? ಗಾಂಧೀಜಿಯವರ ಪ್ರಕಾರ ಸಪ್ತ ಮಹಾಪಾಪಗಳಲ್ಲಿ 'ಮಾನವೀಯತೆ ಇರದ ವಿಜ್ಞಾನವೂ' ಒಂದು. ನಾಲಂದಾ ವಿಶ್ವ ವಿದ್ಯಾಲಯದಲ್ಲಿ ತೇರ್ಗಡೆ ಎಂದು ಘೋಷಿಸುವ ಮೊದಲು ಇಂಥ ಪರೀಕ್ಷೆ ಮಾಡುತಿದ್ದರಂತೆ!

**ಡಾ. ಪ್ರಿಯಾ ಭಾಲ್ಕಿ : ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡವರು ನೀವು ಶಿಕ್ಷಣ ಕ್ಷೇತ್ರದ ಸಮಸ್ಯೆಗಳ ಬಗ್ಗೆ ನಿಮ್ಮ ಅನಿಸಿಕೆ ಏನು?**

**ಡಾ. ರವಿರಾಜೇಶ್ವರ :** ನಾವು ಸಮಾಜದಿಂದ ಪಡೆದುಕೊಂಡದ್ದಕ್ಕೆ ಪ್ರತಿಯಾಗಿ ಏನಾದರೂ ಸಮಾಜಕ್ಕೆ ನೀಡಬೇಕೆಂಬ ಉದ್ದೇಶದಿಂದ ಶ್ರೀಪಾರಸಮಲ್ ಸುಖಾನಿ ಅವರ ಅಧ್ಯಕ್ಷತೆಯಲ್ಲಿ, ವೈದ್ಯರಾದ ನಾನು, ಡಾ. ಶಂಕರಗೌಡ ಅಮರಖೇಡ ಡಾ. ರವಿರಾಜನ್, ಡಾ. ಅರವಿಂದ ಗಂಗಾವತಿ ಸೇರಿ ಕರ್ನಾಟಕ ವೆಲ್‌ಫೇರ್ ಟ್ರಸ್ಟ್




ನ್ನು ಪ್ರಾರಂಭಿಸಿ, ಪ್ರಥಮ ಬಾರಿಗೆ ಸಿಬಿಎಸ್‌ಇ ಇಂಗ್ಲಿಷ್ ಶಾಲೆಯನ್ನು ರಾಯಚೂರಿನಲ್ಲಿ ಪ್ರಾರಂಭಿಸಿದೆವು. ಜೊತೆಯಲ್ಲಿ ಸರಿಸಮನಾದ ಸೌಕರ್ಯಗಳುಳ್ಳ ಕನ್ನಡ ಮಾಧ್ಯಮ ಶಾಲೆಯನ್ನೂ ಪ್ರಾರಂಭಿಸಿದೆವು. ಸುಮಾರು ಆರುಎಕರೆ ವಿಸ್ತೀರ್ಣವುಳ್ಳ, ನಗರದ ಮಧ್ಯಭಾಗದಲ್ಲಿ ನಡೆಸಿಕೊಂಡು ಬರಲಾಗುತ್ತಿರುವ ಶಾಲೆ, ನಗರದ ಪ್ರತಿಷ್ಠಿತ ಶಾಲೆಗಳಲ್ಲೊಂದು. ನನಗನಿಸಿದ ಹಾಗೆ ಶಿಕ್ಷಣದಲ್ಲಿ ಮಾಡಿದಷ್ಟು ಪ್ರಯೋಗ ಬದಲಾವಣೆಗಳನ್ನು ಇನ್ನಾವ ಕ್ಷೇತ್ರಗಳಲ್ಲಿ ಮಾಡಿಲ್ಲ! ನಮ್ಮ ಹಿಂದಿನ ಶಿಕ್ಷಣವಿಧಾನ ಚೆನ್ನಾಗಿತ್ತು ಎನಿಸುತ್ತದೆ, ಎರಡು ಭಾಷೆಗಳನ್ನು, ವಿಜ್ಞಾನ, ಇತಿಹಾಸ, ಭೂಗೋಳ, ಗಣಿತಗಳನ್ನು ಕಲಿಸುತ್ತಿದ್ದರು. ಆಗ ಆ ಪದ್ಧತಿಯಲ್ಲಿ ಕಲಿತ ವಿದ್ಯಾರ್ಥಿಗಳು ಹೆಸರಾಂತ ವಿಜ್ಞಾನಿಗಳಾಗಿದ್ದಾರೆ, ಜಗತ್ತಿನ ಹೆಚ್ಚುಕಡಿಮೆ ಎಲ್ಲಾ ಹೆಸರಾಂತ ಕಂಪನಿಗಳ ಸಿಇವೋಗಳು ನಮ್ಮವರೇ! ಯಾವುದೇ ಪದ್ಧತಿ ಸರಿಯಾಗಿ ನಡೆದಿದ್ದರೆ, ಅದನ್ನು ಅಮೂಲಾಗ್ರವಾಗಿ ಬದಲಾಗಿಸುವುದಕ್ಕಿಂತ, ಆ ಪದ್ಧತಿಯಲ್ಲಿ ಸುಧಾರಣೆ ತರಬಹುದಿತ್ತು. ಬದಲಾವಣೆಗಳನ್ನು ತರುವ ಮುಂಚೆ, ಶಾಲಾ ಶಿಕ್ಷಕರ ಅಭಿಪ್ರಾಯಗಳನ್ನು ಕೇಳಬಹುದಿತ್ತು. 'ನಲಿ ಕಲಿ' ಯೋಜನೆಯನ್ನು ಅಳವಡಿಸಿ, ಯಾರನ್ನೂ ಫೇಲು ಮಾಡಬಾರದೆಂದು ಹತ್ತನೆಯ ಕ್ಲಾಸಿನವರೆಗೆ ಸಾಮಾನ್ಯ ಕೂಡು, ಕಳೆವ ಲೆಕ್ಕ ಬರದ, ವಾಕ್ಯಗಳನ್ನು ಓದಲು ಬಾರದ ಮಕ್ಕಳು, ಖಾಸಗಿ ಶಾಲೆಗೆ ಮಕ್ಕಳನ್ನು ಸೇರಿಸಿದರೆ ಆ ಮಕ್ಕಳಿಗೆ ಫೀಸು ಕೊಡುವ ಸರ್ಕಾರ, ಬಿಸಿಯೂಟವನ್ನು ಡೊನೇಷನ್ ಕೊಟ್ಟು ಮಕ್ಕಳನ್ನು ಸೇರಿಸುವ ಖಾಸಗಿ ಶಾಲೆಗಳಿಗೂ ವಿಸ್ತರಿಸುವಿಕೆ, ಸರ್ಕಾರೀ ಶಿಕ್ಷಕರಿಗೆ, ಶಿಕ್ಷಣೇತರ ಕೆಲಸಗಳ ಒತ್ತಡ, ಹೇಗಾದರೂ ಪಾಸ್ ಮಾಡಬೇಕೆಂಬ ಒತ್ತಡ, (ಇಲ್ಲವಾದರೆ ಶಿಕ್ಷಕರೇ ಹೊಣೆ!), ಒಂದೇ ಎರಡೇ ಶಿಕ್ಷಣದ ಸಮಸ್ಯೆಗಳು! ನನ್ನ ಮಟ್ಟಿಗೆ ಹೇಳುವುದಾದರೆ ಶಿಕ್ಷಣ ಮತ್ತು ವೈದ್ಯಕೀಯ ಕ್ಷೇತ್ರ ವಾಣೀಜ್ಯೀಕರಣವಾಗಬಾರದು, ಸರ್ಕಾರ ನಡೆಸುವ ಕ್ಷೇತ್ರಗಳು, ಖಾಸಗೀ ಕ್ಷೇತ್ರಗಳಿಗೆ ಸವಾಲೊಡ್ಡುವಂತಾಗಬೇಕು, ಹೀಗಾದರೆ ಸಮತೋಲನ ಸಾಧ್ಯವಾದೀತು, ದೇಶದ ಪ್ರಗತಿ ಶ್ರೀಸಾಮಾನ್ಯನಿಗೂ ಲಭಿಸುವಂತಾಗೀತು.

**ಡಾ. ಪ್ರಿಯಾ ಭಾಲ್ಕಿ: ನಿಮ್ಮ ಕವನಗಳಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಆಗಾಗ ಕಾಣಿಸಿಕೊಳ್ಳುತ್ತಾರೆ ಕಾರಣವೇನು?**

**ಡಾ. ರವಿರಾಜೇಶ್ವರ:** ಮೂವರೂ ಸಮಾಜದ ದಿಕ್ಕನ್ನು ಯೋಚನೆ ಮಾಡುವ ರೀತಿಯನ್ನು ಮತ್ತು ಶಾಂತಿ, ಸೌಹಾರ್ದತೆ ಹಾಗೂ ಸಮಾನತೆಯ ಸಮಾಜವನ್ನು ತರಲು ಯತ್ನಿಸಿದವರು. ಸಮಾಜವನ್ನು ಆಮೂಲಾಗ್ರವಾಗಿ ಪರಿವರ್ತನೆ ಮಾಡಲು ಪ್ರಯತ್ನ ಪಟ್ಟವನು ಬುದ್ಧ ಎಂಥ ಸಾಹಸ ಅವನದು! ಬದುಕಿರುವಷ್ಟು ಕಾಲ, ರಾಜನ ಮಗನಾದರೂ, ತನ್ನ ಕೊನೆಯ ಕ್ಷಣದವರೆಗೂ ಬೋಧಿಸುತ್ತಾ ಬದುಕಿದ. ಕರುಣೆಯಿಂದ ಎಲ್ಲರನ್ನು ಗೆಲ್ಲುತ್ತಾ, ಅವರ ಜೊತೆಗಿದ್ದು, ಸಮ ಸಮಾಜವನ್ನು ಸೃಷ್ಟಿಸಿದ. ಮೈತ್ರಿ :ಮನುಷ್ಯರಿಗಷ್ಟೇ ಅಲ್ಲ, ಎಲ್ಲಾ ಪ್ರಾಣಿಗಳಿಗೂ ಬದುಕುವ ಹಕ್ಕು ಇದೆ ಎನ್ನುವುದನ್ನು ತೋರಿಸಿದ. ಮುದಿತ: ಎಲ್ಲರ ಜೊತೆಗೆ ಸಂತೋಷವಾಗಿರುವುದನ್ನು, ಸಂತೋಷವಾಗಿರುವವರ ಜೊತೆಗೆ ಸಂತೋಷವಾಗಿರುವುದನ್ನು ತಿಳಿಸಿದ, ಉಪೇಖ್ಖ : ನಿರ್ಲಿಪ್ತ ಭಾವದಿಂದ ಬಂದುದನ್ನು ಸ್ವೀಕರಿಸಬೇಕು ಎನ್ನುವ ಎಚ್ಚರಿಕೆಯನ್ನು ತಿಳಿಸಿದ ವೈದ್ಯಕೀಯ ಕ್ಷೇತ್ರಕ್ಕೆ ಅವನ ಕೊಡುಗೆ ಅಪಾರ. ವೈದ್ಯಕೀಯ ಕ್ಷೇತ್ರಗಳಿಗೆ ಅವನ ಕೊಡುಗೆ ಅಪಾರ. ದೇಹದ ಖಾಯಿಲೆಗಳಿಗೂ ಮನಸ್ಸಿಗೂ ಇರುವ ಸಂಬಂಧವನ್ನು ವೈಜ್ಞಾನಿಕವಾಗಿ ವಿವೇಚಿಸಿದವನು ಬುದ್ಧ. ರೋಗಿಗಳಿಗೆ ಶುಶ್ರುಷಾಲಯವನ್ನು ಪ್ರಥಮವಾಗಿ ಪ್ರಾರಂಭ ಮಾಡಿದವನು ಬುದ್ಧ. 'ಲೈಟ್ ಆಫ್ ಏಷ್ಯಾ' ಮಾತ್ರವಲ್ಲ ಇಡೀ ಜಗತ್ತಿಗೆ ಬೆಳಕಾದ. ಈಗಲೂ ಆತನ ಚಿಂತನೆಗಳು ಪ್ರಸ್ತುತ. ಅದಕ್ಕೆ ಬುದ್ಧ ನನಗೆ ಇಷ್ಟ.

> ಸಮಾಧಿ ಮಾಡಿದೆವಲ್ಲ, ಅವನು ಹುಟ್ಟಿದ ನಾಡಿನಲ್ಲಿ, ನಮ್ಮ ಹೃದಯಗಳಲ್ಲಿ...! ಹುಟ್ಟಿದಲ್ಲೇ ಇಲ್ಲವಾಗಿಸಿದ ನಾವೆಲ್ಲ ಮತ್ತೆ ಹುಡುಕುತಿದ್ದೇವೆ, ಹೊರಗೆ, ಅವನಿಲ್ಲದಲ್ಲಿ, ನೆನಪಾದಾಗಲೊಮ್ಮೆ..

ಬಸವಣ್ಣ ಕಾಯಕದಿಂದ ಸಮ ಸಮಾಜ ನಿರ್ಮಾಣ ಮಾಡಲು ಹೊರಟ. ಎಲ್ಲರೂ ಕೆಲಸ ಮಾಡಬೇಕು. ಯಾರು ಕೆಲಸ ಮಾಡದೆ ಊಟ ಮಾಡುವಂತಿಲ್ಲ ಎನ್ನುವ ಸಿದ್ಧಾಂತವನ್ನು ಮಾಡಿದ. ಕಲ್ಪನೆ ಮಾಡಲು ಸಾಧ್ಯವಿಲ್ಲದ ಸಿಡಿ ಗುಂಡುಗಳಂಥ ವಚನಗಳನ್ನು ನೀಡಿದ.

ವೇದ ನಡನಡುಗಿತ್ತು, ಶಾಸ್ತ್ರ ಕೆಲಸಾರಿತ್ತು, ಯಾಕೆಂದರೆ ಕೂಡಲಸಂಗಯ್ಯ ಮಾದರ ಚೆನ್ನಯ್ಯನ ಮನೆಯಲ್ಲಿ ಉಂಡ ಕಾರಣ. ಈ ಮಾತನ್ನು ಹೇಳಲು ಎಷ್ಟು ಎದೆಗಾರಿಕೆ ಬೇಕು. ಪ್ರಭುದೇವ ಬರುವ ಪ್ರೀತಿಯನ್ನು ಬಣ್ಣಿಸುವ ಇನ್ನೊಂದು ವಚನ

**ಕಂಗಳೇ ಕರುಳಾಗಿ ಉರವಣಿಸಿ ಬಪ್ಪವನ ರವ ನೋಡಾ,**
**ಇರವ ನೋಡಾ, ಸರವ ನೋಡಾ, ಇಹಪರವ ನೋಡಾ,**
**ಇಹಪರವೊಂದಾದ ಘನವ ನೋಡಾ,**
**ಎಲೆ ಘನಕ್ಕೆ ಘನವ ನೋಡಾ,**
**ಕರುವಿಟ್ಟ ರೂಪಿನಂತೆ,**
**ಕಂಗಳೆರಡು ಕಳಚದೆ, ಭುಗಿಲನೆ ನಡೆತಹನ,**
**ಇಂತಪ್ಪ ಗರುವ ಪ್ರಭುವ ಕಂಡೆವಯ್ಯಾ, ಕೂಡಲಸಂಗಮದೇವಾ. . .**
ಕಂಗಳು ಕರುಳಾಗಿ ಬರುವಂತೆ ಎಂದರೆ ಎಷ್ಟೊಂದು ಪ್ರೀತಿ ಇರಬೇಕು!?

ಎಂಥ ಚಂದದ ಭಾಷೆಯನ್ನಾಗಿಸಿದರು ಕನ್ನಡವನ್ನು ಬಸವಣ್ಣನವರು...! ಮೃದುವಚನಗಳೇ ಸಕಲ ಜಪಂಗಳು, ಮೃದುವಚನೆಗಳೇ ಸಕಲ ಜಪಂಗಳು, ಸದ್ವಚನಗಳೇ ಸದಾಶಿವನೊಲುಮೆ ಎಂದರು ಬಸವಣ್ಣ...! 'ನಮ್ಮ ಬಾಳು ಹಸನಾಗಿಸಲು ಭಾಷೆ ಬಂಗಾರವಾಗಿಸಲು ಮತ್ತೊಮ್ಮೆ ಬರಬಾರದೆ ಅಣ್ಣ, ಬಸವಣ್ಣ !'

ಅಂಬೇಡ್ಕರ್ ಕಾನೂನಿನ ಮೂಲಕ ಸಮಸಮಾಜವನ್ನು ಸೃಷ್ಟಿಸಲು ನೋಡಿದವರು. ಬುದ್ಧ ಬಸವನಿಂದ, ಬಸವನಿಂದ ಅಂಬೇಡ್ಕರ್‌ಗೆ, ಒಬ್ಬರಿಂದ ಒಬ್ಬರಿಗೆ ಖೋ ಕೊಟ್ಟಂತೆ ಅನ್ನಿಸುತ್ತದೆ. ಶೋಷಿತ ಸಮಾಜದಿಂದ ಮೇಲೆದ್ದು ಬಂದವರು ಅಂಬೇಡ್ಕರ್. ನೀತಿ ಪಾಠಗಳಿಂದ ಸಮಾಜ ಬದಲಾಗುವುದಿಲ್ಲ. ನಮಗೆ ಅಧಿಕಾರ ಬೇಕು, ಅದು ಇದ್ದರೆ ಮಾತ್ರ ಸಮಾಜ ಬದಲಾಗುತ್ತದೆ. ಅದಕ್ಕೆ ಅವರು ಹೋರಾಟ ಮಾಡಿದ ಸತ್ಯಾಗ್ರಹಗಳು ಎರಡು. ೧. ನಾಸಿಕದ ಕಾಳಾರಂ ದೇವಸ್ಥಾನದ ಒಳಗಿನ ಪ್ರವೇಶ, ಮಲಾಡ್ ಕೆರೆಯನ್ನು ಸ್ಪರ್ಶಿಸಿದ್ದು, ಅಧಿಕಾರವಿಲ್ಲದಿದ್ದರೆ ಏನನ್ನೂ ಮಾಡಲು ಸಾಧ್ಯವಿಲ್ಲ ಎಂದು ತೋರಿಸಲು ಇದನ್ನು ಮಾಡಿದರು ಎಂದೆನಿಸುತ್ತದೆ. ನೀವು ಪಾಲಿಸಿ ಮೇಕರ್ ಆದರೆ ಮಾತ್ರ ನಮ್ಮನ್ನು ನಾವು ಸುಧಾರಿಸಿಕೊಳ್ಳಲು ಸಾಧ್ಯ ಎಂದು ಅವರು ಹೇಳುತ್ತಾ ಬಂದವರು. ಉರಿಯುವ ಸೂರ್ಯ ನೀನಾಗಬೇಕು ಎನ್ನುವುದು ಅಂಬೇಡ್ಕರ್ ಅವರ ಮಾತು. ಬುದ್ಧನನ್ನು ಆಳವಾಗಿ ಅಭ್ಯಸಿಸಿ, ತಮ್ಮ ಕೊನೆಯ ಪುಸ್ತಕ ಬುದ್ಧ ಮತ್ತು ಧಮ್ಮದಲ್ಲಿ ವಿವರವಾಗಿ ಪ್ರತಿಪಾದಿಸಿದ್ದಾರೆ. ಅವರು ಪ್ರತಿಪಾದಿಸಿದ ಮಾರ್ಗಕ್ಕೆ ನವಯಾನ ಎಂದು ಕರೆದರು. ಅವರ ಅರ್ಥದಲ್ಲಿ **'ನಿರ್ವಾಣ' ಎನ್ನುವುದು ಬೇರೆಯ ಲೋಕದಲ್ಲಿ ಸಿಕ್ಕುವಂತದ್ದಲ್ಲ. ಬದುಕಿನಲ್ಲಿ ಇರುವಂತದ್ದು. ಸ್ವತಂತ್ರವಾಗಿ ಘನತೆಯಿಂದ ಬದುಕುವುದು. ಜಗತ್ತಿನಿಂದ ದೂರ ಹೋಗುವುದು ಅಲ್ಲ. ಶಾಂತಿಗಾಗಿ ಇಲ್ಲಿದ್ದೇ ಹೋರಾಡಬೇಕು. ಸನ್ಯಾಸಿಗಳನ್ನು ನ್ಯಾಯಕ್ಕಾಗಿ, ಸಮಾಜ**

ಬಾಬಾಸಾಹೇಬ ಅಂಬೇಡ್ಕರ್ ಅವರು ಶೋಷಿತರು ರಾಜಕಾರಣ ಮತ್ತು ಅಧಿಕಾರಗಳಲ್ಲಿ ಶಕ್ತಿವಂತರಾಗದ ಹೊರತು, ನೀತಿಗಳನ್ನು, ಕಾನೂನುಗಳನ್ನು ರೂಪಿಸುವಲ್ಲಿ ನಿರ್ಣಾಯಕ ಸ್ಥಾನಗಳನ್ನು ಪಡೆಯದ ಹೊರತು ಅವರಿಗೆವಿಮುಕ್ತಿ ಸಿಕ್ಕುವುದಿಲ್ಲ ಎಂದು ನಂಬಿದವರು,ಅವರು ರಚಿಸಿದ ಸಂವಿಧಾನದಲ್ಲಿ ಹೇಳಿದ,' ನ್ಯಾಯ, ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತ್ವಗಳೆಲ್ಲ ಸಾವಿರಾರುವರ್ಷಗಳ ಹಿಂದೆ ಹೇಳಿದ ಬುದ್ಧನ ಸಂದೇಶಗಳೇ ಎಂದರು. 'ಕೆಂಡದುಂಡೆಗಳ ಮೇಲೆ ನಡೆದವರು, ಮಲಗಿದವರು, ಜೀವನ ಸವೆಸಿದವರು,... ಅಷ್ಟೆಲ್ಲ ಅನುಭವಿಸಿದರೂ, ತಮ್ಮನ್ನು, ತಮ್ಮವರನ್ನು, ಹಿಂಸಿಸಿದವರ ಬಗ್ಗೆ ಎಳ್ಳಷ್ಟೂ ದ್ವೇಷವನ್ನಾಗಲಿ ಇಟ್ಟುಕೊಳ್ಳದೆ, ಅವರಿಗಾಗಿಯೂ ಒಳಿತನ್ನು ಯೋಚಿಸಿದವರು, ಯೋಜಿಸಿದವರು, ಅನುಷ್ಠಾನಗೊಳಿಸಿದವರು! ಯಾವ ಸಂತನಿಗಿಂತ ಕಡಿಮೆಯಾದವರು ಹೇಳಿ!'

**ಕಾರ್ಯಕರ್ತರಾಗಿ ಆಗುವಂತೆ ಕರೆಕೊಟ್ಟರು. Pursuit of education is meditation ಎಂದು ಹೇಳಿದರು. ಕರ್ಮ ಮರು ಹುಟ್ಟುಗಳು ನಮಗೆ ಜವಾಬ್ದಾರಿ ಇಲ್ಲದಂತೆ ಮಾಡುತ್ತದೆ. ಈಗಿನ ಸ್ಥಿತಿಗೆ ನಾವೇ ಹೊಣೆಗಾರರು. ನಮ್ಮ ಒಳಗಿನ ಶಾಂತಿ ಮತ್ತು ಜಗತ್ತಿನ ಶಾಂತಿಗೆ ನಾವೇ ಭಾಧ್ಯರು ಸಮಾಜದ ಸಲುವಾಗಿಯೂ ನಾವು ಹೊಣೆಯನ್ನು ತೆಗೆದುಕೊಳ್ಳಬೇಕು.** ನೀರು ಭೂಮಿ ಪರಿಸರ ಇವುಗಳನ್ನು ಚೆನ್ನಾಗಿ ಇಟ್ಟುಕೊಳ್ಳುವ ಜವಾಬ್ದಾರಿಯನ್ನು ನಾವು ಹೊರಬೇಕು ಮತ್ತು ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು ಎಂದು ಕರೆಕೊಟ್ಟವರು ಡಾ. ಅಂಬೇಡ್ಕರ್.

**ಡಾ. ಪ್ರಿಯಾ ಭಾಲ್ಕಿ : ವೈದ್ಯ ಸಾಹಿತ್ಯದ ಅವಶ್ಯಕತೆ ಮತ್ತು ನಿರ್ವಹಣೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು?**

**ಡಾ. ರವಿರಾಜೇಶ್ವರ:** ಇದರಲ್ಲಿ ಎರಡು ವಿಧ ಒಂದು ವೈದ್ಯರಿಗಾಗಿ ಬರೆಯಲ್ಪಡುವ ಸಾಹಿತ್ಯ. ಎರಡನೆಯದು ಸಾಮಾನ್ಯರಿಗಾಗಿ, ಜನರಿಗೆ ಆರೋಗ್ಯದ ಬಗ್ಗೆ ತಿಳಿಸಲು, ಕಾಯಿಲೆಯ ಬಗ್ಗೆ ಅರಿವು ಮೂಡಿಸುವ, ಆರೋಗ್ಯದ ಬಗ್ಗೆ ಚಿಂತನೆ ಮೂಡಿಸುವಂತಹ ಸಾಹಿತ್ಯ. ಎಲ್ಲಿಯವರೆಗೆ ಜನರು ತಮ್ಮ ಆರೋಗ್ಯದ ಬಗ್ಗೆ, ಕಾಯಿಲೆಗಳ ಬಗ್ಗೆ, ಅರಿತುಕೊಳ್ಳುವುದಿಲ್ಲವೋ, ಅಲ್ಲಿಯವರೆಗೆ ಈ ರೋಗ ರುಜಿನಗಳಿಂದ ಬಿಡಿಸಿಕೊಳ್ಳುವುದು ಸಾಧ್ಯವಿಲ್ಲ. ಹಾಗಾಗಿ ಇಂದು ಸಾಮಾನ್ಯರಿಗೆ ವೈದ್ಯ ಸಾಹಿತ್ಯದ ಅವಶ್ಯಕತೆ ಬಹಳವಿದೆ. ಉದಾಹರಣೆಗೆ ಸ್ವಚ್ಛ ನೀರು ಕುಡಿಯುವುದನ್ನು ಜನರು ಕಲಿತ ಮೇಲೆ ನಾವು ಹಿಂದಿನಷ್ಟು ಅತಿಸಾರ ಭೇದಿ ಕಾಯಿಲೆಯನ್ನು ನೋಡುವುದು ಕಡಿಮೆಯಾಗಿದೆ.

ಜನರಲ್ಲಿ ಆರೋಗ್ಯದ ಬಗ್ಗೆ ಮಾಹಿತಿ ಮೂಡಿಸುವುದು ಅಲ್ಲದೆ ಅವರ ಆರೋಗ್ಯಕ್ಕೆ ಅವರೇ ಸ್ವಯಂ ಜವಾಬ್ದಾರಿ ಎನ್ನುವುದನ್ನು ತಿಳಿಸಿಕೊಡಬೇಕು. ವೈದ್ಯರನ್ನು ಕಾರಣ ಮಾಡುವಂತಿಲ್ಲ ಎನ್ನುವುದನ್ನು ತಿಳಿಸಬೇಕು. ವೈದ್ಯರಿಗೆ ಸಹಿತ ಹೊಸ ಆವಿಷ್ಕಾರಗಳ ಪರಿಚಯವಾಗುತ್ತಾ ಇರಬೇಕು. ಉದಾಹರಣೆಗೆ ರೋಬೋಟಿಕ್ ಆಪರೇಷನ್‌ಗಳ ಬಗ್ಗೆ ನಾವು ಹಿಂದೆ ಆಲೋಚನೆ ಮಾಡಲು ಸಾಧ್ಯವಿರಲಿಲ್ಲ.

**ಡಾ. ಪ್ರಿಯಾ ಭಾಲ್ಕಿ: ಯುವ ಬರಹಗಾರರಿಗೆ ನಿಮ್ಮ ಸೂಚನೆಗಳೇನು?**

**ಡಾ. ರವಿರಾಜೇಶ್ವರ:** ಅವರು ಓದಬೇಕು, ಓದದೆ ಬರೆಯುವುದು, ಈಜಲಾರದೇ ನೀರಿಗೆ ಇಳಿದಂತೆ. ಸಾಹಿತ್ಯಕ್ಕೆ ಒಂದು ಉದ್ದೇಶ ಇರಬೇಕು. ತನ್ನನ್ನು ತಾನು ಬದಲಾಯಿಸಿಕೊಳ್ಳುವುದು, ಆಗ ಇನ್ನೊಬ್ಬರನ್ನು ಬದಲಾಯಿಸಲು ಸಾಧ್ಯ. ದೇವನೂರು ಮಹಾದೇವಯ್ಯ ಹೇಳಿದಂತೆ ಎದೆಯಲ್ಲಿ ಬಿದ್ದ ಅಕ್ಷರ ಭೂಮಿಯಲ್ಲಿ ಬಿದ್ದ ಬೀಜ ಎಂದಾದರೂ ಫಲ ಕೊಟ್ಟೆ ಕೊಡುತ್ತದೆ. ನಮ್ಮಲ್ಲಿ ದೊಡ್ಡ ಪರಂಪರೆಯೇ ಇದೆ. ಕುವೆಂಪು, ಬೇಂದ್ರೆ, ರಾಜರತ್ನಂ, ಜಿ. ಎಸ್. ಶಿವರುದ್ರಪ್ಪ ಎಲ್ಲರೂ ಒಂದೊಂದು ಹಾದಿಯನ್ನು ಹಾಕಿಕೊಟ್ಟವರು, ನಮ್ಮ ನೋಡುವ ನೋಟ ಬದಲಾಯಿಸಿದವರು, ಕವನ ಶುರುವಾಗುವುದು ಹೇಗೆ? ಕೊನೆಯಾಗುವುದು ಹೇಗೆ? ಅದು ಕೂಡ ಕವನದ ಒಡಲಿನಷ್ಟೇ ಮುಖ್ಯ. ಉದಾಹರಣೆಗೆ ಬೇಂದ್ರೆಯವರ ಮೂಡಲ ಮನೆಯ ಮುತ್ತಿನ ನೀರಿನ ಹಾಡು ಹೇಗೆ ಮುಗಿಯುತ್ತದೆ ನೋಡಿ, ಆಹಾ ಅನಿಸುವಂತೆ! ಓದುವುದಷ್ಟೇ ಅಲ್ಲ ಸ್ವವಿಮರ್ಶೆ ಮಾಡಿಕೊಳ್ಳಬೇಕು, ಬರೆಯುವುದು ಸಾರ್ಥಕವಾಗಬೇಕು.

> ಭಾಷೆಯನ್ನು ಉಪಯೋಗಿಸುವಾಗ ಎಚ್ಚರಿಕೆ ಇರಬೇಕು. ಭಾಷೆಗೆ ಅಪಚಾರವೆಸಗದಂತೆ, ಹಾಳುಗೆಡಹದಂತೆ, ಅದರ ಘನತೆ ಹೆಚ್ಚಿಸುವಂತೆ ನೋಡಿಕೊಳ್ಳಬೇಕು. ಭಾಷೆಯನ್ನು ಕೆಡಿಸಿದಷ್ಟು ಅತ್ಯಾಚಾರ ಮಾಡಿದಷ್ಟು ನಾವು ಬೇರೆ ಯಾವುದಕ್ಕೂ ಅಪಚಾರ ಮಾಡಿಲ್ಲ. ನಾವು ಬಳಸುವ ಮಾತುಗಳನ್ನು ಬಯ್ಯುವುದಕ್ಕೂ ಅಥವಾ ಇನ್ನೊಬ್ಬರನ್ನು ಕೆರಳಿಸುವುದಕ್ಕೋ, ಇನ್ನೊಬ್ಬರ ತಲೆಯಲ್ಲಿ ಕೆಟ್ಟ ವಿಚಾರವನ್ನು ತುಂಬುವುದಕ್ಕೂ ಬಳಸಬಾರದು.

**ಡಾ. ಪ್ರಿಯಾ ಭಾಲ್ಕಿ : ನೀವು ಕೂಡುಕುಟುಂಬದಲ್ಲಿ ಬದುಕುತ್ತಿದ್ದೀರಿ, ಅಭಿನಂದನೆಗಳು ಸರ್., ಈಗ ನಾಶವಾಗುತ್ತಿರುವ ಕೂಡುಕುಟುಂಬಗಳಿಂದ ಆಗುವ ಅಪಾಯದ ಬಗ್ಗೆ ನಿಮ್ಮ ಅಭಿಪ್ರಾಯ?**

**ಡಾ. ರವಿರಾಜೇಶ್ವರ:** ಕೂಡುಕುಟುಂಬಗಳು ನಿಧಾನವಾಗಿ ಇಲ್ಲವಾಗುತ್ತಿವೆ ಗಂಡ, ಹೆಂಡತಿ ಜೊತೆಗಿದ್ದಾರೆ ಎನ್ನುವುದೇ ಕೂಡುಕುಟುಂಬ ಎನ್ನುವ ಕಾಲಬಂದಿದೆ! ಕೂಡು ಕುಟುಂಬಗಳಲ್ಲಿ ಸುರಕ್ಷತೆಯ ಭಾವ, ಒಬ್ಬರು ಇನ್ನೊಬ್ಬರಿಗೆ ಕಷ್ಟಕಾಲದಲ್ಲಿ ಜೊತೆ ಇರುತ್ತಾರೆ ಎಂಬ ನಂಬಿಕೆ, ಕಾಯಿಲೆ, ಕಸಾಲೆಗಳು ಬಂದಾಗ, ಆಸ್ಪತ್ರೆಗಳಲ್ಲಿ

ದಾಖಲಾದಾಗ ಸಿಕ್ಕುವ ಆಸರೆ ಅನುಭವಿಸಿದವರಿಗೆ ಗೊತ್ತು. ಈಗಲಾದರೋ ಆಸ್ಪತ್ರೆಯಲ್ಲಿ ಔಷಧಿಗಳನ್ನು ತರುವುದಕ್ಕೆ, ರೋಗಿಯನ್ನು ನೋಡಿಕೊಳ್ಳಲು ಒಮ್ಮೊಮ್ಮೆ ಯಾರೂ ಇರುವುದಿಲ್ಲ, ಹಣ ಕೊಡುತ್ತೇವೆಂದರೂ ಸಿಕ್ಕುವುದಿಲ್ಲ. ಎಲ್ಲಕಿಂತಲೂ ಹೆಚ್ಚಾಗಿ ಬೆಳೆಯುವ ಮಕ್ಕಳು ಹಿರಿಯರ ಅಂಕೆಯಲ್ಲಿ ಬೆಳೆಯುತಿದ್ದರು. ಮಕ್ಕಳಿಗೆ ತಮ್ಮ ತೊಂದರೆಗಳನ್ನು ಹೇಳಿಕೊಳ್ಳಲು ತಂದೆ ತಾಯಿಗಳಲ್ಲದೆ ಇತರ ಹಿರಿಯರು ಇರುತಿದ್ದರು. ಕಾಲ ಬದಲಾಗುತ್ತಿದೆ, ಉದ್ಯೋಗ, ಸ್ವಾರ್ಥ ಇನ್ನಿತರ ಕಾರಣಗಳಿಂದಾಗಿ ಕೂಡುಕುಟುಂಬಗಳು ಇಲ್ಲವೆಂತಾಗಿವೆ. ಪರಸ್ಪರರಲ್ಲಿ ಗೌರವ, ಸಹನೆ, ಪ್ರೀತಿಗಳಿದ್ದರೆ ಕೂಡುಕುಟುಂಬ.

**ಡಾ. ಪ್ರಿಯಾ ಭಾಲ್ಕಿ : ಭಾರತೀಯ ವೈದ್ಯಕೀಯ ಸಂಘ ರಾಯಚೂರು ಶಾಖೆಯ ಜೊತೆಗೆ ದೀರ್ಘ ಕಾಲದಿಂದ ಸಂಬಂಧ ಹೊಂದಿರುವವರು ನೀವು, ಅದರ ಅನುಭವವನ್ನು ನಮ್ಮ ಜೊತೆಗೆ ಹಂಚಿಕೊಳ್ಳಬಹುದೇ?**

**ಡಾ. ರವಿರಾಜೇಶ್ವರ:** ನನ್ನ ನಂಟು ಬಹು ಘನಿಷ್ಠವಾದದ್ದು, ಐದು ದಶಕಗಳಷ್ಟು ಹಳೆಯದು, ನೋಡಿ! ಭಾವೈಸಂ ಒಂದೇ ವೈದ್ಯರ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಬಿಂಬಿಸಬಲ್ಲದು ಮತ್ತು ಪರಿಹಾರಗಳನ್ನು ತರಲು ಒತ್ತಡ ಹಾಕಬಲ್ಲದು ಎಂಬ ನಂಬಿಕೆ ನನ್ನದು, ಆಗಲೂ, ಈಗಲೂ! ಹೆಚ್ಚುಹೆಚ್ಚು ಆಧುನಿಕ ವೈದ್ಯ ಪದ್ಧತಿಯ ಸದಸ್ಯರು ಸೇರಿದಷ್ಟೂ ಭಾವೈಸಂದ ಶಕ್ತಿ ಮತ್ತು ಧ್ವನಿ ಇನ್ನಷ್ಟು ಬಲಯುತವಾಗುತ್ತದೆ. ಭಾವೈಸಂ, ರಾಯಚೂರು ೧೯೭೪-೭೫ರಿಂದ ಏನೆಲ್ಲ ಸಾಧಿಸಿತು! ಅದೊಂದು ಯಶಸ್ಸಿನ ಗಾಥೆ! ೧೯೮೧ರಲ್ಲಿ ರಜತಮಹೋತ್ಸವವನ್ನು ಆಚರಿಸಿಕೊಂಡ ಸಂಸ್ಥೆ, ೧೯೯೧ರಲ್ಲಿ ರಾಜ್ಯ ಸಮ್ಮೇಳನವನ್ನು ಯಶಸ್ವಿಯಾಗಿ, ಈಗಲೂ ನೆನಪಿಸುವಷ್ಟು ಆಯೋಜಿಸುವಷ್ಟು ಬೆಳೆಯಿತು, ೧೯೯೯ರಲ್ಲಿ ಒಂದು ಸುಂದರ ಸಭಾಂಗಣವನ್ನು ಕಟ್ಟಿಕೊಂಡಿತು. ೧೯೯೬ರಲ್ಲಿ ಪ್ರಥಮ ಬಾರಿಗೆ ಐಎಮ್‌ಎ ತನ್ನ ಸದಸ್ಯರಿಂದಲೇ ಹಣ ಸಂಗ್ರಹಿಸಿ ರಕ್ತಭಂಡಾರವನ್ನು ಪ್ರಾರಂಭಿಸಿತು ಹಾಗೆ ಪ್ರಾರಂಭಿಸಿದ ಮೊದಲ ಐಎಮ್‌ಎ ನಮ್ಮದು!

೧೯೯೭ರಲ್ಲಿ ಸರ್ಕಾರ ರಕ್ತವನ್ನು ರಕ್ತಭಂಡಾರಗಳಿಂದಲೇ ತೆಗೆದುಕೊಳ್ಳಬೇಕೆಂಬುದನ್ನು ಕಡ್ಡಾಯ ಮಾಡುವ ಮೊದಲೇ ನಮ್ಮ ರಕ್ತಭಂಡಾರ ಪ್ರಾರಂಭವಾಗಿತ್ತು! ೨೦೧೦ರಲ್ಲಿ RIMACT ಎನ್ನುವ ಹೆಸರಿನಲ್ಲಿ ಜೈವಿಕ ತ್ಯಾಜ್ಯ ನಿರ್ವಹಣಾ ಘಟಕ (biomedical waste)ವನ್ನು ಪ್ರಾರಂಭಿಸಲಾಯಿತು. ಇದೂ ನಮ್ಮ ಪ್ರಥಮಗಳಲ್ಲಿ ಒಂದು. ೨೦೧೨ರಲ್ಲಿ ನಮ್ಮ ರಕ್ತಭಂಡಾರದಲ್ಲಿ, ರಕ್ತ ಘಟಕ component unitನ್ನು ಪ್ರಾರಂಭಿಸಿತು. ನಮ್ಮ ಭಾವೈಸಂ ಸಾಮಾಜಿಕ ಕಾರ್ಯಗಳನ್ನು, ಉಚಿತ ವೈದ್ಯಕೀಯ ಶಿಬಿರಗಳನ್ನು ಯೋಜಿಸುವುದಲ್ಲಿ ಸದಾ ಮುಂದು. ೨೦೧೨-೧೩ರಲ್ಲಿ ರಾಯಚೂರು, ದೇವದುರ್ಗದಲ್ಲಿ ಮಲೇರಿಯಾ ಉಲ್ಬಣವಾದಾಗ ಅದನ್ನು ನಿಯಂತ್ರಿಸುವಲ್ಲಿ ಭಾವೈಸಂ ರಾಯಚೂರಿನ ಪಾತ್ರ ಮಹತ್ತರವಾದದ್ದು. ಈ ಎಲ್ಲ ಯಶಸ್ಸಿನಲ್ಲಿ ಹಿರಿಯ ಸದಸ್ಯರುಗಳಾದ ಡಾ. ಶಂಕರಗೌಡ, ಡಾ. ಶ್ಯಾಮಸುಂದರ ಕಕ್ಕೇರಿಯವರು ಪಾತ್ರ ಪ್ರಮುಖವಾದದ್ದು. ಎಲ್ಲ ಸದಸ್ಯರುಗಳು ಕೈಕೂಡಿಸದಿದ್ದರೆ ಇಂಥ ಯಶಸ್ಸು ಸಾಧ್ಯವೇ! ನಾನೂ ಇದರಲ್ಲಿ ಅಳಿಲು ಸೇವೆ ಸಲ್ಲಿಸಿದ್ದೇನೆ, ಇಂಥ ಪ್ರಮುಖ ಹಲವು ದಾಖಲೆಗಳನ್ನು ಮಾಡಿದ ಶಾಖೆಯ ಸದಸ್ಯನೆಂಬುದು ನನಗೆ ಸದಾ ಹೆಮ್ಮೆಯ ವಿಷಯ! ಈಗಲಾದರೋ ಭಾವೈಸಂ ರಾಯಚೂರು, Our pride, others envy ಎನ್ನುವ ಮಟ್ಟಕ್ಕೆ ಬೆಳೆದಿದೆ, ಹೊಸ ಉತ್ಸಾಹೀ ಸದಸ್ಯರು, ಶಾಖೆಯ ಇತಿಹಾಸದ ಬಗ್ಗೆ ಹೆಮ್ಮೆ ಹೊಂದಿದವರು , ಹಿಂದಿಗಿಂತಲೂ ಹೆಚ್ಚಾದ ಯಶಸ್ಸನ್ನು ಸಾಧಿಸುತ್ತಾರೆ, ಹಿರಿಯರೆಲ್ಲ ಗರ್ವಪಡುವಂತೆ ಮಾಡುತ್ತಾರೆ ಎಂಬುದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ! ಭಾವೈಸಂ ಉತ್ತರೋತ್ತರ ಬೆಳೆಯಲಿ, ಬೆಳಗಲಿ, ಬಾಳಲಿ!

**ಡಾ. ಪ್ರಿಯಾ ಭಾಲ್ಕಿ : ಅನಂತಾನಂತ ಧನ್ಯವಾದಗಳು. ಮಿತಭಾಷಿಯಾದ ನೀವು ಮನಸ್ಸು ಬಿಚ್ಚಿ ಮಾತಾಡಿ ಅನೇಕ ಅಮೂಲ್ಯ ನುಡಿಗಳ ಮೂಲಕ ತೆರೆದು ಮಾತನಾಡಿದ್ದಿರಾ ತುಂಬಾ ಸಂತೋಷವಾಯಿತು ಸರ್ ಕೊನೆಯದಾಗಿ ನಮಗೆ ನೀವು ಕೊಡುವ ಸಂದೇಶ**

**ಡಾ. ರವಿರಾಜೇಶ್ವರ:** ಕೊನೆಯ ಮಾತೆಂದಿರಾ..., 'ಒಲಿದಂತೆ ಹಾಡು' ಕವನ ಸಂಕಲನದ 'ಪ್ರಾರ್ಥನೆ' ಹಾಡಿನಲ್ಲಿ ನಿವೇದಿಸಿದಂತೆ ಬದುಕಲು ಯತ್ನಿಸಿದ್ದೇನೆ. ಆ ಕವನದ ಕೊನೆಯ ಕೆಲವು ಸಾಲುಗಳಿಂದ ನನ್ನ ಮಾತನ್ನು ಮುಗಿಸುತ್ತೇನೆ,



ಕಲಿಸು ಗುರುವೇ,
ನೀನೊಪ್ಪುವಂತೆ,
ಜನ ಮೆಚ್ಚುವಂತೆ
ಬದುಕುವುದನು,!
ನನ್ನ ಬಾಳದೋಣಿಯ
ಹಾಯಿ, ನೀನಾಗು ಪ್ರಭುವೇ,!

ಇನ್ನೇನ ಕೇಳೆನು, ತಂದೆ,
ನಿನ್ನಿಚ್ಛೆಯಂತೆಯೇ ನಡೆಸು
ನನ್ನ ದೊರೆಯೇ.
ಸಮಾಧಾನದಿಂದಲಿ
ಬಾಳು ಮುಗಿಸುವಂತೆ,
ನಿನ್ನ ಸನಿಹಕೆ ಸಾರುವಂತೆ!

೩ನೇ ಪುಟದಿಂದ...

ಗುಲ್ಬರ್ಗಾದಲ್ಲಿ ವೈದ್ಯಕೀಯ ಪದವಿ ಪಡೆದಿದ್ದ ಡಾ. ಭಾನುಶಾಲಿ ಅವರಿಗೆ ಕರ್ನಾಟಕದ ಕುರಿತು ವಿಶೇಷ ಒಲವಿದ್ದುದನ್ನು ಸ್ಮರಿಸೋಣ.

ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷೆಗಳು ಮತ್ತು ಅವುಗಳ ಸಿದ್ಧತೆಗಾಗಿ ವಿದ್ಯಾರ್ಥಿಗಳೊಂದಿಗೆ ಪಾಲಕರು ಒತ್ತಡ ಅನುಭವಿಸುವುದು ಸಹಜ. ಆದರೆ ಆ ಒತ್ತಡ ವಿದ್ಯಾರ್ಥಿಗಳ ಮೇಲೆ ದುಷ್ಪರಿಣಾಮ ಬೀರದಂತೆ ನೋಡಿಕೊಳ್ಳಬೇಕು. ಪಾಲಕರು ಮತ್ತು ಶಿಕ್ಷಕರು ಈ ಕುರಿತು ಮುತುವರ್ಜಿ ವಹಿಸಬೇಕು. ಭಾರತೀಯ ವೈದ್ಯಕೀಯ ಸಂಘದ ಮಾನಸಿಕ ಶಾಸ್ತ್ರಜ್ಞರು ವಿವಿಧ ಕಾರ್ಯಕ್ರಮಗಳ ಮೂಲಕ ಸ್ಪೂರ್ತಿದಾಯಕ ಚಿಂತನೆಗಳನ್ನು ಬೆಳೆಸಬೇಕು. ಪರೀಕ್ಷೆಯ ಮತ್ತು ಫಲಿತಾಂಶ ಪ್ರಕಟವಾಗುವ ಸಮಯದಲ್ಲಿ ಆತ್ಮಹತ್ಯೆ ಅಂತಹ ಗಂಭೀರ ಸಮಸ್ಯೆಗಳು ಉಂಟಾಗದಂತೆ ತಡೆಯುವ ನಿಟ್ಟಿನಲ್ಲಿ ಅನವರತ ಕಾರ್ಯ ಪ್ರವೃತ್ತವಾಗಬೇಕಿದೆ.

ಫೆಬ್ರವರಿ ೧ರಂದು ರಾಷ್ಟ್ರೀಯ ಆಯವ್ಯಯ ಮಂಡನೆಗೆ ಸಿದ್ಧತೆಗಳು ನಡೆಯುತ್ತಿವೆ. ಮಾನ್ಯ ವಿತ್ತ ಸಚಿವರು ವಿವಿಧ ತಜ್ಞರೊಂದಿಗೆ ಸಮಾಲೋಚನೆ ನಡೆಸಿದ್ದಾರೆ. ಭಾರತೀಯ ವೈದ್ಯಕೀಯ ಸಂಘವೂ ವಿತ್ತ ಸಚಿವರನ್ನು ಭೇಟಿ ಮಾಡಿ ಆಶಯಗಳನ್ನು ಮುಂದಿಡುವುದು ಸೂಕ್ತ. ಆಯವ್ಯಯದ ಶೇ ೫.೦ರಷ್ಟನ್ನು ಆರೋಗ್ಯ ಕ್ಷೇತ್ರಕ್ಕೆ ಮೀಸಲಾಗಿಡಬೇಕೆಂಬುದು ಬಹುದಿನದ ಬೇಡಿಕೆ. ಆದರೆ ಎಲ್ಲಾ ಸರ್ಕಾರಗಳು ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿವೆ. ಉತ್ತಮ ಆರೋಗ್ಯ ಬಹು ದೊಡ್ಡ ಸಂಪನ್ಮೂಲ. ಇದು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಜಿಡಿಪಿಯನ್ನು ವೃದ್ಧಿಸಲು ಸಹಕರಿಸುವುದು.

ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ತಾಲೂಕು ಆಸ್ಪತ್ರೆಗಳಲ್ಲಿ ಬದಲಾವಣೆ ಮಾಡಲು ಸರಕಾರದ ಮಟ್ಟದಲ್ಲಿ ಚಿಂತನೆ ನಡೆದಿದೆ ಎಂದು ತಿಳಿದು ಬಂದಿದೆ. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮುಖ್ಯವಾಗಿ ಹೊರ ರೋಗಿ ವಿಭಾಗಗಳನ್ನು ನಡೆಸಿ ಔಷಧಿ ವಿತರಣೆಯನ್ನು ಬಲಪಡಿಸಿ ತಾಲೂಕಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಿ ಎಲ್ಲಾ ಚಿಕಿತ್ಸೆ ನೀಡುವುದು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ತಾಲೂಕು ಆಸ್ಪತ್ರೆಗಳನ್ನು ತಲುಪಲು ಅಂಬುಲೆನ್ಸ್ ವ್ಯವಸ್ಥೆ ಬಲಪಡಿಸುವುದು, ಮ್ಯಾಪ್ಪಿಂಗ್ ಹಾಗೂ ಕೃತಕ ಬುದ್ಧಿಮತ್ತೆ ಮೂಲಕ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ತಾಲೂಕು ಆಸ್ಪತ್ರೆ ತಲುಪುವ ಸಮಯವನ್ನು ಕಡಿಮೆ ಮಾಡುವುದು ಸೇರಿದಂತೆ ಉನ್ನತ ಸೇವೆಗಳನ್ನು ಸಕಾಲದಲ್ಲಿ ಒದಗಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಚಿಂತನೆ ನಡೆದಿದೆ. ಈ ರೀತಿಯ ಸ್ಪೋಕ್ ಮತ್ತು ಹಬ್ ಮಾದರಿಯನ್ನು ಈಗಾಗಲೇ ಹೃದಯಾಘಾತ ಮತ್ತು ಪಾರ್ಶ್ವವಾಯು ಚಿಕಿತ್ಸೆ ಒದಗಿಸಲು ಬಳಸಲಾಗಿದೆ.

ಬೆಂಗಳೂರಿನಲ್ಲಿ ಮಾದಕ ದ್ರವ್ಯ ಜಾಲದ ಕುರಿತು ವರದಿಯಾಗಿದೆ. ಇದು ಅತ್ಯಂತ ಕಳವಳಕಾರಿ ಸಂಗತಿಯಾಗಿದೆ. ಯುವ ಜನಾಂಗವನ್ನು ಸಂರಕ್ಷಣೆ ಮಾಡುವ ಜವಾಬ್ದಾರಿ ಸರಕಾರದ ಆದ್ಯ ಕರ್ತವ್ಯ. ಸರ್ಕಾರ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು. ಆರಕ್ಷಕ ವಿಭಾಗ ಮತ್ತು ಗುಪ್ತಚರ ಇಲಾಖೆ ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕಿದೆ. ಹೊಸ ವರ್ಷ ಉತ್ತಮ ಬದಲಾವಣೆಗೆ ನಾಂದಿ ಹಾಡಲಿ ಎಂದು ಹಾರೈಸೋಣ.

ನಿಮ್ಮ ಅಭಿಪ್ರಾಯಗಳಿಗೆ ಕಾಯ್ದಿರುವ...

**ಡಾ. ಸುರೇಶ ಸಗರದ**
ಪ್ರಧಾನ ಸಂಪಾದಕರು

# ಚಿಣ್ಣರ ಲೋಕ



**ಡಾ. ಪ್ರಿಯಾ ಭಾಲ್ಕಿ**
ವಿಭಾಗೀಯ ಸಂಪಾದಕರು



ಸಾನ್ವಿ, ರಾಯಚೂರು
೧೧ ವರ್ಷ



ರಾಜವೀರ ಚಿನಿವಾಲರ, ಗಂಗಾವತಿ
೧೦ ವರ್ಷ

ಕಾಗದದ ಕ್ವಿಲಿಂಗ್ ಕಲೆ



ಗಾಜಿನ ಚಿತ್ರಕಲೆ




ಅದ್ವೈತ್, ರಾಯಚೂರು
೧೦ ವರ್ಷ





**ಅಗಸ್ತ್ಯ, ರಾಯಚೂರು**
೮ ವರ್ಷ







**ಮಾ। ಶ್ಲೋಕ್ ಪಟೇಲ್**
೬ ವರ್ಷ

೧ನೇ ಸ್ಥಾನ ಚಿನ್ನದ ಪದಕ, ಫ್ರೀಸ್ಟೈಲ್, ಬಟರ್ಫ್ಲೈ ಬ್ರೆಸ್ಟ್ರೋಕ್ ಹಾಗೂ
ಬ್ಯಾಕ್ಸ್ಟ್ರೋಕ್ ಈಜು ಸ್ಪರ್ಧೆ
ರಾಯಚೂರು ಜಿಲ್ಲೆ ಮಟ್ಟದ ಸ್ಪರ್ಧೆ

೨ನೇ ಸ್ಥಾನ ರಜತ ಪದಕ, ಫ್ರೀಸ್ಟೈಲ್ ಹಾಗೂ ಬ್ರೆಸ್ಟ್ರೋಕ್ ಈಜು ಸ್ಪರ್ಧೆ,
ಗೋಪಿಚಂದ್ ಅಕಾಡೆಮಿ ಆಫ್ ಸ್ವಿಮ್ಮಿಂಗ್, ಹೈದ್ರಾಬಾದ್

೩ನೇ ಸ್ಥಾನ ಕಂಚು ಪದಕ,
ಬಟರ್ಫ್ಲೈ ಹಾಗು ಬ್ರೆಸ್ಟ್ರೋಕ್ ಈಜು ಸ್ಪರ್ಧೆ ಬೆಂಗಳೂರು ಕ್ಲಬ್

**ಮಾ। ಅಗಸ್ತ್ಯ, ರಾಯಚೂರು**
೮ ವರ್ಷ

೧ ಸ್ಥಾನ ಪಡೆದಿದ್ದಾರೆ
ರಾಯಚೂರು, ದಾವಣಗೆರೆ, ಶಿವಮೊಗ್ಗಾ, ಆದೋನಿ,
ಸಿಂಧನೂರು, ಹುಬ್ಬಳ್ಳಿಯಲ್ಲಿ ನಡೆದ ಜಿಲ್ಲಾ ಮಟ್ಟದ ಚದುರಂಗ ಸ್ಪರ್ಧೆಗಳಲ್ಲಿ

**ಪುಟಾಣಿಗಳಿಗೆ ಅಭಿನಂದನೆಗಳು**

# ಚಿತ್ರ ಸಂಪದ



**ಡಾ. ಅರವಿಂದ ಪಟೇಲ್**
ವಿಭಾಗೀಯ ಸಂಪಾದಕರು



**ಪಾಮ್ ಟನಾಗರ್**
ಕೋಸ್ಟಾರಿಕ, ಸೆಂಟ್ರಲ್ ಅಮೇರಿಕ

**ಡಾ. ನಾಗರಾಜ**
ಬಳ್ಳಾರಿ



**ಎಲ್ಲೋ ತ್ರೋಟೆಡ್ ಟೌಕನ್**
ಕೋಸ್ಟಾರಿಕ, ಸೆಂಟ್ರಲ್ ಅಮೇರಿಕ



**ಗ್ರೇಟ್ ಕಿಸ್ಕೇಡ್ ಚೇಸಿಂಗ್ ಪಾಮ್ ಟನಾಗರ್**
ಕೋಸ್ಟಾರಿಕ, ಸೆಂಟ್ರಲ್ ಅಮೇರಿಕ







ಡಾ. ಸುನಂದಾ ಕುಲಕರ್ಣಿ
ಬೆಂಗಳೂರು

ಹೊಸ ವರ್ಷದ ಶುಭಾಶಯಗಳು

# ಸಹನಾ ಶೈಕ್ಷಣಿಕ ಪ್ರತಿಷ್ಠಾನ

ಸಿಂಧನೂರು, ರಾಯಚೂರು ಜಿಲ್ಲೆ – 584128







**ಸಹನಾ ಮಕ್ಕಳ ಆಸ್ಪತ್ರೆ**
(80 ಹಾಸಿಗೆಗಳ ಅತ್ಯಾಧುನಿಕ ಮಕ್ಕಳ ಆಸ್ಪತ್ರೆ)

**ಶಿಕ್ಷಣ ಕ್ಷೇತ್ರ**
ಸಹನಾ ICSE ಪ್ರಾಥಮಿಕ ಮತ್ತು ಪ್ರೌಢ ಶಾಲೆ
ಸಹನಾ ಮಾಂಟೆಸರಿ ಪೂರ್ವ ಪ್ರಾಥಮಿಕ ಶಾಲೆ



**ವಿದ್ಯಾರ್ಥಿನಿಯರ ಸೇವೆ**
ಸರ್ವಧರ್ಮಿಯರ ಕಾಲೇಜು ವಿದ್ಯಾರ್ಥಿನಿಯರ ಉಚಿತ ಊಟ ಮತ್ತು ವಸತಿ ಕೇಂದ್ರ (ಆರ್ಥಿಕ ಸಹಾಯದೊಂದಿಗೆ)







**ಸಮಾಜ ಸೇವೆ**
ಸಹನಾ ಕಾರುಣ್ಯ ವೃದ್ಧಾಶ್ರಮ, ಸಹನಾ ನಿರಾಶ್ರಿತ ಮಕ್ಕಳ ಆರೈಕೆ ಕೇಂದ್ರ

**ಶಿಕ್ಷಣ • ಆರೋಗ್ಯ • ಸೇವೆ • ನಮ್ಮ ಧ್ಯೇಯ**

## ಡಾ. ಶಿವರಾಜ್ ಪಾಟೀಲ್
ಮಕ್ಕಳ ತಜ್ಞರು
–
ಚೇರ್ಮನ್
ಸಹನಾ ಶೈಕ್ಷಣಿಕ ಪ್ರತಿಷ್ಠಾನ, ಸಿಂಧನೂರು

ದಾನ ಸೇವೆ ಮಾಡಿ
80G / 12A ಅಡಿಯಲ್ಲಿ ಆದಾಯ ತೆರಿಗೆ ವಿನಾಯಿತಿ ಪಡೆಯಿರಿ
Account Name: Sahana Educational Trust (R)
Account No: 30608198872
IFSC Code: SBIN0007861
Branch: Adarsh Colony, Sindanur